# ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು



**ಏಪ್ರಿಲ್ ೩ನೇ ವಾರ**

13-04-2026 TO 18-04-2026

## ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ತಾರತಮ್ಯ ತಡೆಗೆ ಸರ್ಕಾರದ ಕ್ರಮ

## 'ರೋಹಿತ್ ವೇಮುಲ' ಮಸೂದೆ

- ಇ-ಸ್ವತ್ತು 2.0 ತಂತ್ರಾಂಶ
- ಜಿಡಿಪಿ ಶೇ7.2ರಷ್ಟು ನಿರೀಕ್ಷೆ
- ಯಾಣ ಭೂಪಾರಂಪರಿಕ ತಾಣ
- ಜಲಮಂಡಳಿಗೆ ಐಎಸ್‌ಒ ಮಾನ್ಯತೆ

**ವಾರದ ಪ್ರಚಲಿತ ಘಟನೆಗಳು - ಪ್ರಜಾವಾಣಿ**

**ದಿನಾಂಕ:** 13ನೇ ಏಪ್ರಿಲ್ – 18ನೇ ಏಪ್ರಿಲ್ 2026

## ❖ ಮೇ 2ನೇ ವಾರದಲ್ಲಿ ಭಾರತ-ಬ್ರಿಟನ್ ಎಫ್‌ಟಿಎ

**ಸಂದರ್ಭ: ಭಾರತ ಮತ್ತು ಬ್ರಿಟನ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದವು (ಎಫ್‌ಟಿಎ) ಮೇ ತಿಂಗಳ ಎರಡನೇ ವಾರದಿಂದ.**

- ಕಳೆದ ವರ್ಷದ ಜುಲೈ 24ರಂದು ಉಭಯ ರಾಷ್ಟ್ರಗಳು ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದಕ್ಕೆ (ಸಿಐಟಿಎ) ಸಹಿ ಹಾಕಿದ್ದವು.
- ಒಪ್ಪಂದದ ಪ್ರಕಾರ, ಬ್ರಿಟನ್ ಮಾರುಕಟ್ಟೆ ಪ್ರವೇಶಿಸುವ ಭಾರತದ ಶೇ 99ರಷ್ಟು ಸರಕುಗಳಿಗೆ ಶೂನ್ಯ ಸುಂಕ ಇರಲಿದೆ. ಬ್ರಿಟನ್‌ನ ಕಾರುಗಳು, ವಿಸ್ಕಿಗೆ ಭಾರತದಲ್ಲಿ ಸುಂಕ ಕಡಿಮೆ ಆಗಲಿದೆ.
- 2030ರ ವೇಳೆಗೆ ಉಭಯ ದೇಶಗಳ ನಡುವಿನ ವ್ಯಾಪಾರವನ್ನು ₹5.21 ಲಕ್ಷ ಕೋಟಿಗೆ ಹೆಚ್ಚಿಸುವ ಗುರಿಯನ್ನು ಸಿಇಟಿಎ ಹೊಂದಿದೆ.



1,33,803 ಅರ್ಜಿಗಳ ವಿಲೇವಾರಿ • ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ

# ಇ–ಸ್ವತ್ತು 2.0 ತಂತ್ರಾಂಶ: ಹಲವು ಸಮಸ್ಯೆ ಇತ್ಯರ್ಥ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**
- 1,52,863 ಅರ್ಜಿಗಳ ಸ್ವೀಕೃತ
- ಸಾರ್ವಜನಿಕರ ದೂರು ಆಧರಿಸಿ ಹಲವು ಸಮಸ್ಯೆಗಳಿಗೆ ಪರಿಹಾರ

ಬೆಂಗಳೂರು: ಇ-ಸ್ವತ್ತು 2.0 ತಂತ್ರಾಂಶ ದಡಿ ಈವರೆಗೆ 1,52,863 ಅರ್ಜಿಗಳು ಸ್ವೀಕೃತಗೊಂಡಿದ್ದು, 1,33,803 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಪ್ರಿಯಾಂಕ್ ಖರ್ಗೆ

ಸೋಮವಾರ ಅವರು ಇಲಾಖೆ ಅಧಿಕಾರಿಗಳ ಸಭೆ ನಡೆಸಿ, ಇ-ಸ್ವತ್ತು ತಂತ್ರಾಂಶದ ಕಾರ್ಯನಿರ್ವಹಣೆ ಮತ್ತು ಪ್ರಗತಿ ಪರಿಶೀಲಿಸಿದರು.

ಅಲ್ಲದೇ, ಹೊಸ ನಮೂನೆ 11 ಬಿ ಗೆ ಸಂಬಂಧಿಸಿದಂತೆ ಈವರೆಗೆ 76,093 ಅರ್ಜಿಗಳು ಸ್ವೀಕೃತವಾಗಿವೆ. ಈ ಅರ್ಜಿಗಳು ವಿವಿಧ ಹಂತಗಳಲ್ಲಿ ಅನುಮೋದನೆಗೆ ಬಾಕಿ ಉಳಿದಿವೆ. ಈ ಅರ್ಜಿಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡುವಲ್ಲಿ ಕ್ರಮ ವಹಿಸಲಾಗುತ್ತಿದೆ ಎಂದೂ ಅವರು ಹೇಳಿದ್ದಾರೆ.

ಇ-ಸ್ವತ್ತು 2.0 ತಂತ್ರಾಂಶದ ಸಿಟಿಜನ್ ಇಂಟರ್‌ಫೇಸ್ ಮೂಲಕ ಅರ್ಜಿಗಳನ್ನು ಸಲ್ಲಿಸುವಲ್ಲಿ ಮತ್ತು ಬಳಕೆದಾರರ ಅರ್ಜಿಗಳನ್ನು ಅನುಮೋದನೆ ಮಾಡುವ ಸಂದರ್ಭದಲ್ಲಿ ತಾಂತ್ರಿಕ ಸಮಸ್ಯೆಗಳು ಉಂಟಾಗುತ್ತಿದೆ. ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರುತ್ತಿರುವ ಕಾರಣ ತಂತ್ರಾಂಶದಲ್ಲಿ ಬದಲಾವಣೆ ಮಾಡಿ ಸಮಸ್ಯೆಗಳನ್ನು ಬಗೆಹರಿಸಲಾಗಿದೆ ಎಂದು ತಿಳಿಸಿದ್ದಾರೆ.

**ಬಗೆಹರಿದಿರುವ ಸಮಸ್ಯೆಗಳು:**
- ನಮೂನೆ-11 ಬಿ ಖಾತೆಗಳನ್ನು ನಮೂನೆ-11ಎ ಗಳಾಗಿ ಪರಿವರ್ತನೆ ಮಾಡಿಕೊಳ್ಳಲು ಗ್ರಾಮ ಪಂಚಾಯತಿ ಹಂತದಲ್ಲಿ ಅವಕಾಶ ನೀಡಲಾಗಿದೆ
- ಹೊಸ ಬಹುಮಹಡಿ (ಅಪಾರ್ಟ್‌ಮೆಂಟ್) ಗಳಿಗೆ ಅರ್ಜಿಗಳನ್ನು ಸಲ್ಲಿಸಲು ಗ್ರಾಮ ಪಂಚಾಯತಿ ಹಂತದಲ್ಲಿ ಅವಕಾಶ ನೀಡಲಾಗಿದೆ
- ಇ-ಸ್ವತ್ತು ತಂತ್ರಾಂಶದ ಸಿಟಿಜನ್ ಇಂಟರ್‌ಫೇಸ್ ಮೂಲಕ ಅರ್ಜಿಗಳನ್ನು ಸಲ್ಲಿಸುವಲ್ಲಿ ಗುಂಟೆ ಮತ್ತು ಸೆಂಟ್ಸ್‌ನಲ್ಲಿರುವ ವಿಸ್ತೀರ್ಣವನ್ನು ಚ.ಮೀ ನಲ್ಲಿ ಪರಿವರ್ತಿಸಿ, ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ
- ಇ-ಸ್ವತ್ತು ತಂತ್ರಾಂಶದ ಸಿಟಿಜನ್ ಇಂಟರ್‌ಫೇಸ್ ಮೂಲಕ ಅರ್ಜಿಗಳನ್ನು ಋಣಭಾರ ಪ್ರಮಾಣಪತ್ರ (ಇಸಿ) ಗಳನ್ನು ಸಲ್ಲಿಸಲು ಉಂಟಾಗುತ್ತಿದ್ದ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲಾಗಿದೆ
- ಇ-ಸ್ವತ್ತು ತಂತ್ರಾಂಶದ ಸಿಟಿಜನ್ ಇಂಟರ್‌ಫೇಸ್ ಮೂಲಕ ಅರ್ಜಿಗಳನ್ನು ಸೇವ್ ಮಾಡಲು ಉಂಟಾಗುತ್ತಿದ್ದ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲಾಗಿದೆ
- ಇ-ಸ್ವತ್ತು ತಂತ್ರಾಂಶದ ಸಿಟಿಜನ್ ಇಂಟರ್‌ಫೇಸ್ ಮೂಲಕ ಇ-ಖಾತೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಇದ್ದ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲಾಗಿದೆ
- ಇ-ಸ್ವತ್ತು ತಂತ್ರಾಂಶದ ಸಿಟಿಜನ್ ಇಂಟರ್‌ಫೇಸ್ ಮೂಲಕ ಅರ್ಜಿಗಳನ್ನು ಸಲ್ಲಿಸುವಾಗ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಮಾಡಲಾಗಿದ್ದ ಸಂಯೋಜನೆಯಲ್ಲಿ ಉಂಟಾಗುತ್ತಿದ್ದ ತಾಂತ್ರಿಕ ಸಮಸ್ಯೆಗಳನ್ನು ಇತ್ಯರ್ಥಗೊಳಿಸಲಾಗಿದೆ
- ಇ-ಸ್ವತ್ತು ತಂತ್ರಾಂಶದ ಗ್ರಾಮ ಪಂಚಾಯತಿ ಬಳಕೆದಾರರುಗಳ ಲಾಗಿನ್ ನಲ್ಲಿ ಅರ್ಜಿಗಳ ಅನುಮೋದನೆಯಲ್ಲಿ ಉಂಟಾಗುತ್ತಿದ್ದ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲಾಗಿದೆ

ಹೊಸದಾಗಿ ಅನುಮೋದನೆಗೊಂಡ ಆಸ್ತಿಗಳಿಗೆ ತಿದ್ದುಪಡಿ ಮಾಡುವ ಅವಕಾಶವನ್ನು ಹಾಗೂ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಮಾರ್ಗಸೂಚಿ ದರವನ್ನು ಇ-ಸ್ವತ್ತು ತಂತ್ರಾಂಶದೊಂದಿಗೆ ಸಂಯೋಜನೆ ಮಾಡುವ ಕಾರ್ಯವನ್ನು ಮುಂದಿನ ದಿನದೊಳಗೆ ಕ್ರಮವಹಿಸಲಾಗುವುದು ಎಂದು ಪ್ರಿಯಾಂಕ್ ತಿಳಿಸಿದ್ದಾರೆ.

ವಿವರಗಳಿಗೆ- https://eswathu.karnataka.gov.in/Login.aspx ಮತ್ತು https://panchatantra.karnataka.gov.in ಸಹಾಯವಾಣಿ : 9483476000

## ❖ ಮುಂಗಾರು: ವಾಡಿಕೆಗಿಂತ ಕಡಿಮೆ

**ಸಂದರ್ಭ: ದೇಶದಲ್ಲಿ ಈ ವರ್ಷ ನೈರುತ್ಯ ಮುಂಗಾರು ಮಳೆ ವಾಡಿಕೆಗಿಂತ ಕಡಿಮೆ ಸುರಿಯಲಿದೆ ಎಂದು ಐಎಂಡಿ ತಿಳಿಸಿದೆ.**

- ನೈರುತ್ಯ ಮುಂಗಾರಿನ ಅವಧಿಯಲ್ಲಿ ದೇಶದ ವಾಡಿಕೆ ಮಳೆ 80 ಸೆಂ.ಮೀ. 1971ರಿಂದ 2020ರವರೆಗಿನ ದೀರ್ಘಾವಧಿಯ ಸರಾಸರಿ ತೆಗೆದುಕೊಂಡರೆ 87 ಸೆಂ.ಮೀ. ವರ್ಷಧಾರೆ ಆಗಿದೆ.
- 'ಪ್ರಸಕ್ತ ವರ್ಷ ವಾಡಿಕೆಯ ಪ್ರಮಾಣದಲ್ಲಿ ಶೇ.92ರಷ್ಟು ವರ್ಷಧಾರೆ ಆಗಲಿದೆ. ಈ ಪ್ರಮಾಣದಲ್ಲಿ ಶೇ 5ರಷ್ಟು ವ್ಯತ್ಯಾಸವಾಗಬಹುದು' ಎಂದು ಐಎಂಡಿಯ ಪ್ರಧಾನ ನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮೈಸೂರು: 100 ಕ್ಕೆ ₹575 | ಗುಡ್ ಲಾಟ್ ₹200 | ₹355-842 | ₹9600 | ₹1450 (1475)

# ಮಾರ್ಚ್‌ನಲ್ಲಿ ಹೆಚ್ಚಿದ ಹಣದುಬ್ಬರ

## ಪಶ್ಚಿಮ ಏಷ್ಯಾದಲ್ಲಿನ ಯುದ್ಧವೂ ಕಾರಣ: ತಜ್ಞರ ಅಭಿಮತ



ನವದೆಹಲಿ (ಪಿಟಿಐ): ಮಾರ್ಚ್ ತಿಂಗಳಿನಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇಕಡ 3.4ಕ್ಕೆ ಹೆಚ್ಚಳ ಆಗಿದೆ. ಕೆಲವು ಆಹಾರ ವಸ್ತುಗಳ ಬೆಲೆಯಲ್ಲಿ ಆಗಿರುವ ಹೆಚ್ಚಳವು ಈ ಏರಿಕೆ ಒಂದು ಕಾರಣವಾಗಿದೆ.

ಫೆಬ್ರುವರಿಯಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 3.21ರಷ್ಟು ಇತ್ತು. ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಈ ಅಂಕಿ-ಅಂಶವು 2024ನೆಯ ಇಸವಿಯನ್ನು ಮೂಲ ವರ್ಷವನ್ನಾಗಿ ಇರಿಸಿಕೊಂಡಿದೆ.

ಮಾರ್ಚ್‌ನಲ್ಲಿ ದಾಖಲಾಗಿರುವ ಚಿಲ್ಲರೆ ಹಣದುಬ್ಬರ ಪ್ರಮಾಣವು ಆರ್‌ಬಿಐ ನಿಗದಿ ಮಾಡಿಕೊಂಡಿರುವ ಮಟ್ಟದಲ್ಲಿಯೇ ಇದೆ (ಶೇ 4ರ ಮಟ್ಟ). ಆದರೆ ಹಣದುಬ್ಬರ ಪ್ರಮಾಣವು ಜನವರಿಯಿಂದ ಈಚೆಗೆ ಹೆಚ್ಚಳ ಕಾಣುತ್ತಿದೆ. ಜನವರಿಯಲ್ಲಿ ಶೇ 2.75ರಷ್ಟು ಚಿಲ್ಲರೆ ಹಣದುಬ್ಬರ ದಾಖಲಾಗಿತ್ತು.

ಚಿನ್ನ ಮತ್ತು ಬೆಳ್ಳಿ, ಕೊಬ್ಬರಿ, ಟೊಮೆಟೊ ಮತ್ತು ಹೂಕೋಸಿನ ಬೆಲೆಯಲ್ಲಿ ಮಾರ್ಚ್‌ನಲ್ಲಿ ತೀವ್ರ ಹೆಚ್ಚಳ ಆಗಿದೆ. ಈರುಳ್ಳಿ, ಆಲೂಗೆಡ್ಡೆ, ಬೆಳ್ಳುಳ್ಳಿ, ತೊಗರಿಬೇಳೆ, ಕಡಲೆಕಾಳಿನ ಬೆಲೆಯಲ್ಲಿ ಇಳಿಕೆ ಕಂಡುಬಂದಿದೆ.

ವಿದ್ಯುತ್, ಅನಿಲ ಮತ್ತು ಇಂಧನ ಉತ್ಪನ್ನಗಳ ಹಣದುಬ್ಬರ ಪ್ರಮಾಣ ಶೇ 1.65ರಷ್ಟು ಆಗಿದೆ.

ಚಿಲ್ಲರೆ ಹಣದುಬ್ಬರ ಪ್ರಮಾಣದ ಕುರಿತು ಪ್ರತಿಕ್ರಿಯೆ ನೀಡಿರುವ ಅಸೋಚಾಂ (ಭಾರತೀಯ ವಾಣಿಜ್ಯೋದ್ಯಮ ಮಹಾಸಂಘ) ಅಧ್ಯಕ್ಷ ನಿರ್ಮಲ್ ಕೆ. ಮಿಂದಾ ಅವರು 'ಕಚ್ಚಾ ತೈಲದ ಬೆಲೆಯಲ್ಲಿ ತೀವ್ರ ಹೆಚ್ಚಳ ಆಗಿದ್ದರೂ ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಬದಲಾಯಿಸದೆ ಬೆಲೆ ಏರಿಕೆಯನ್ನು ನಿಯಂತ್ರಣದಲ್ಲಿ ಇರಿಸಿರುವುದು ಮೆಚ್ಚತಕ್ಕ ನಡೆ' ಎಂದು ಹೇಳಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ನಡೆದಿರುವ ಸಮರದ ಅಲ್ಪ ಪರಿಣಾಮವು ಮಾರ್ಚ್ ತಿಂಗಳಲ್ಲಿ ವಿವಿಧ ಉತ್ಪನ್ನಗಳ ಬೆಲೆಯ ಮೇಲೆ ಆಗಿದೆ ಎಂಬುದನ್ನು ಹಣದುಬ್ಬರಕ್ಕೆ ಸಂಬಂಧಿಸಿದ ಅಂಕಿ-ಅಂಶಗಳು ಹೇಳುತ್ತಿವೆ ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಯ್ಯರ್ ಹೇಳಿದ್ದಾರೆ.

> ಆಹಾರ ವಸ್ತುಗಳು, ವಿದ್ಯುತ್, ಅನಿಲ ಮತ್ತು ಇತರ ಇಂಧನ ಉತ್ಪನ್ನಗಳ ಬೆಲೆಯಲ್ಲಿನ ಏರಿಕೆಯಿಂದಾಗಿ ಹಣದುಬ್ಬರ ಪ್ರಮಾಣ ಹೆಚ್ಚಳ ಕಂಡಿದೆ. ಇದರಲ್ಲಿ ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು ಎಲ್‌ಪಿಜಿ ಹಾಗೂ ಇತರ ಪರ್ಯಾಯ ಇಂಧನಗಳ ಮೇಲೆ ಬೀರಿರುವ ಪರಿಣಾಮ ಕೂಡ ಕಾಣುತ್ತಿದೆ
>
> **ಅದಿತಿ ನಯ್ಯರ್,** ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ

**ಮುಖ್ಯಾಂಶಗಳು**

- ಚಿಲ್ಲರೆ ಹಣದುಬ್ಬರ ಶೇ 3.4ಕ್ಕೆ ಏರಿಕೆ
- ಆರ್‌ಬಿಐ ಮಿತಿಯಲ್ಲೇ ಇರುವ ಹಣದುಬ್ಬರ

## ಏಳು ವರ್ಷದ ಬಳಿಕ ಭಾರತಕ್ಕೆ ಇರಾನ್ ಕಚ್ಚಾ ತೈಲ

ನವದೆಹಲಿ (ಪಿಟಿಐ): ಇರಾನ್‌ನ ಕಚ್ಚಾ ತೈಲ ಹೊಂದಿರುವ ಎರಡು ಹಡಗುಗಳು ಭಾರತದ ಬಂದರುಗಳಿಗೆ ಬಂದಿವೆ. ಏಳು ವರ್ಷಗಳ ಬಳಿಕ ಭಾರತಕ್ಕೆ ಇರಾನ್‌ನಿಂದ ಪೂರೈಕೆ ಆಗಿರುವ ಕಚ್ಚಾ ತೈಲ ಇದಾಗಿದೆ ಎಂದು ಹಡಗುಗಳ ಮಾಹಿತಿಯನ್ನು ದಾಖಲಿಸುವ ದತ್ತಾಂಶವು ತಿಳಿಸಿದೆ.

ನ್ಯಾಷನಲ್ ಇರಾನಿಯನ್ ಟ್ಯಾಂಕರ್ ಕಂಪನಿ ನಿರ್ವಹಣೆ ಮಾಡುವ ಫೆಲಿಸಿಟಿ ಹೆಸರಿನ ಹಡಗು, ಗುಜರಾತ್‌ನ ಸಿಕ್ಕಾ ಬಂದರಿಗೆ ಭಾನುವಾರ ತಡರಾತ್ರಿ ಬಂದಿದೆ. ಈ ಹಡಗು 20 ಲಕ್ಷ ಬ್ಯಾರಲ್‌ನಷ್ಟು ಕಚ್ಚಾ ತೈಲ ಹೊಂದಿದ್ದು, ಮಾರ್ಚ್ ಮಧ್ಯದಲ್ಲಿ ಖಾರ್ಗ್ ದ್ವೀಪದಿಂದ ಹೊರಟಿತ್ತು.

ಮತ್ತೊಂದು ಹಡಗು ಜಯಾ, ಇಷ್ಟೇ ಪ್ರಮಾಣದ ಕಚ್ಚಾ ತೈಲ ಹೊಂದಿದ್ದು ಒಡಿಶಾದ ಬಂದರನ್ನು ತಲುಪಿದೆ. ಈ ಹಡಗು ಪಶ್ಚಿಮ ಏಷ್ಯಾ ಸಂಘರ್ಷ ಆರಂಭವಾಗುವುದಕ್ಕೂ ಮುನ್ನವೇ (ಫೆಬ್ರುವರಿ ತಿಂಗಳ ಅಂತ್ಯದಲ್ಲಿ) ತನ್ನ ಪ್ರಯಾಣ ಆರಂಭಿಸಿತ್ತು.

ಭಾರತವು, ಇರಾನ್‌ನಿಂದ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲ ಖರೀದಿಸುವ ಪ್ರಮುಖ ರಾಷ್ಟ್ರವಾಗಿತ್ತು. 2018ರಲ್ಲಿ ಪ್ರತಿ ದಿನ 5.18 ಲಕ್ಷ ಬ್ಯಾರಲ್‌ನಷ್ಟು ಕಚ್ಚಾ ತೈಲವನ್ನು ಇರಾನ್‌ನಿಂದ ಖರೀದಿಸುತ್ತಿತ್ತು. ಇದು 2019ರ ಜನವರಿಯಿಂದ ಮೇ ತಿಂಗಳವರೆಗೆ 2.68 ಲಕ್ಷ ಬ್ಯಾರಲ್‌ಗೆ ಇಳಿದಿತ್ತು, ಅಮೆರಿಕದ ನಿರ್ಬಂಧದ ಕಾರಣದಿಂದಾಗಿ ಆಮದು ನಿಂತಿತು.

ಆದರೆ, ಕಳೆದ ತಿಂಗಳು ಅಮೆರಿಕದ ಆಡಳಿತವು, ಈ ನಿರ್ಬಂಧ-ಗಳನ್ನು 30 ದಿನಗಳವರೆಗೆ ಸಡಿಲಗೊಳಿಸಿದೆ. ಈ ಅವಧಿ ಏಪ್ರಿಲ್ 19ಕ್ಕೆ ಮುಕ್ತಾಯಗೊಳ್ಳಲಿದೆ.



ಇರಾನ್‌ನ ಅಂದಾಜು 9.5 ಕೋಟಿ ಬ್ಯಾರಲ್ ಕಚ್ಚಾ ತೈಲವು ಸಮುದ್ರದಲ್ಲಿರುವ ಹಡಗುಗಳಲ್ಲಿದೆ. ಅದರಲ್ಲಿ ಸುಮಾರು 5.1 ಕೋಟಿ ಬ್ಯಾರಲ್ ಭಾರತಕ್ಕೆ ಬರಬಹುದು ಎಂಬ ಅಂದಾಜಿದೆ.

# ಐಎಂಎಫ್‌ನಿಂದ ಪ್ರತಿಗಾಮಿ ಸಲಹೆ: ಆಕ್ಸ್‌ಫ್ಯಾಮ್

ನವದೆಹಲಿ (ಪಿಟಿಐ): 2022ರಿಂದ 2024ರ ನಡುವೆ ಭಾರತವು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಕಡೆಯಿಂದ ಅತ್ಯಂತ ಹೆಚ್ಚಿನ ಸಂಖ್ಯೆಯ ಪ್ರತಿಗಾಮಿ ತೆರಿಗೆ ಶಿಫಾರಸುಗಳನ್ನು ಸ್ವೀಕರಿಸಿದೆ ಎಂದು ಆಕ್ಸ್‌ಫ್ಯಾಮ್ ಸಿದ್ಧಪಡಿಸಿದ ವಿಶ್ಲೇಷಣಾ ವರದಿಯೊಂದು ಹೇಳಿದೆ.

ಶ್ರೀಮಂತ ದೇಶಗಳಿಗೆ ಬಹುತೇಕ ಪ್ರಗತಿಪರವಾದ ಶಿಫಾ-ರಸುಗಳನ್ನು ಐಎಂಎಫ್ ನೀಡುತ್ತದೆ, ಇತರ ದೇಶಗಳಿಗೆ ಅದು ಪ್ರತಿಗಾಮಿಯಾದ ಶಿಫಾರಸುಗಳನ್ನು ಕಳುಹಿಸುತ್ತದೆ. ಇಂತಹ ಶಿಫಾರಸುಗಳು ಅಸಮಾನತೆಯನ್ನು ಇನ್ನಷ್ಟು ಹೆಚ್ಚು ಮಾಡುವಂತೆ ಇರುತ್ತವೆ ಎಂದು ಆಕ್ಸ್‌ಫ್ಯಾಮ್ ಕಳವಳ ವ್ಯಕ್ತಪಡಿಸಿದೆ.

ಕೆಳ ಹಾಗೂ ಕೆಳ-ಮಧ್ಯಮ ಆದಾಯದ ದೇಶಗಳಿಗೆ ಐಎಂಎಫ್ ರವಾನಿಸಿದ ತೆರಿಗೆಗೆ ಸಂಬಂಧಿಸಿದ ಶೇಕಡ 59ರಷ್ಟು ಸಲಹೆಗಳು ಪ್ರತಿಗಾಮಿಯಾಗಿದ್ದವು. ಹೆಚ್ಚಿನ ಆದಾಯ ಹೊಂದಿರುವ ದೇಶಗಳಿಗೆ ಅದು ರವಾನಿಸಿದ ಶೇ 52ರಷ್ಟು ಶಿಫಾರಸುಗಳು ಪ್ರಗತಿಪರವಾಗಿ ಇದ್ದವು ಎಂದು ಆಕ್ಸ್‌ಫ್ಯಾಮ್ ವರದಿಯು ಹೇಳಿದೆ.

ಕಡಿಮೆ ಆದಾಯ ಇರುವವರಿಗೆ ಹೊರೆ ಆಗುವಂತೆ ಮಾಡುವ ಏಕರೂಪಿ ತೆರಿಗೆ ವ್ಯವಸ್ಥೆಯ-ನ್ನು ಪ್ರತಿಗಾಮಿ ಎಂದು ವ್ಯಾಖ್ಯಾನಿಸಲಾಗಿದೆ. ಆದರೆ, ವ್ಯಕ್ತಿಯ ಆದಾಯಕ್ಕೆ ಅನುಗುಣವಾಗಿ ತೆರಿಗೆ ವಿಧಿಸುವ ವ್ಯವ-ಸ್ಥೆಯನ್ನು ಪ್ರಗತಿಪರ ಎಂದು ವ್ಯಾಖ್ಯಾನಿಸಲಾಗಿದೆ.

2022ರಿಂದ 2024ರ ನಡುವೆ ಐಎಂಎಫ್ ಒಟ್ಟು 125 ದೇಶಗಳಿಗೆ ರವಾನಿಸಿದ ತೆರಿಗೆ ಶಿಫಾರಸುಗಳನ್ನು ಆಕ್ಸ್‌ಫ್ಯಾಮ್ ಪರಿಶೀಲಿಸಿದೆ.

ಎಲ್ಲ ಬಗೆಯ ವಿತ್ತೀಯ ಸಲಹೆಗಳನ್ನು ನೀಡುವಾಗ ಅಸಮಾ-ನತೆಯನ್ನು ಕೇಂದ್ರಭಾಗದಲ್ಲಿ ಇರಿಸಬೇಕು ಎಂದು ಆಕ್ಸ್‌ಫ್ಯಾಮ್ ಸಂಸ್ಥೆಯು ಐಎಂಎಫ್‌ಗೆ ಮನವಿ ಮಾಡಿದೆ.

## ಮಹಿಳಾ ಟಿ20 ಕ್ರಿಕೆಟ್ ವಿಶ್ವಕಪ್: ಬಹುಮಾನ ₹82 ಕೋಟಿಗೆ ಹೆಚ್ಚಳ

ದುಬೈ (ಪಿಟಿಐ): ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ ಇದೇ ವರ್ಷ ನಡೆಯಲಿರುವ ಮಹಿಳಾ ಟಿ20 ವಿಶ್ವಕಪ್ ಟೂರ್ನಿಗೆ ದಾಖಲೆಯ ₹82 ಕೋಟಿ ಬಹುಮಾನ ಮೊತ್ತವನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಸೋಮವಾರ ಘೋಷಿಸಿದೆ.

ಹಿಂದಿನ ಆವೃತ್ತಿಗಿಂತ ಒಟ್ಟು ಬಹುಮಾನ ಮೊತ್ತದಲ್ಲಿ ಶೇ 10 ರಷ್ಟು ಹೆಚ್ಚಿಸಲಾಗಿದೆ. ಟೂರ್ನಿಯಲ್ಲಿ ಒಟ್ಟು 12 ತಂಡಗಳು ಸ್ಪರ್ಧಿಸಲಿವೆ. ಜೂನ್ 12ರಿಂದ ಜುಲೈ 5 ರವರೆಗೆ ಏಳು ತಾಣಗಳಲ್ಲಿ ಪಂದ್ಯಗಳು ನಡೆಯಲಿದೆ. ಜೂನ್ 12ರಂದು ಬರ್ಮಿಂಗ್‌ಹ್ಯಾಮ್‌ನ ಎಡ್ಜ್‌ಬಾಸ್ಟನ್‌ನಲ್ಲಿ ಆತಿಥೇಯ ಇಂಗ್ಲೆಂಡ್ ಮತ್ತು ಶ್ರೀಲಂಕಾ ತಂಡಗಳ ನಡುವೆ ಉದ್ಘಾಟನಾ ಪಂದ್ಯ ನಡೆಯಲಿದೆ. ಜುಲೈ 5ರಂದು ಫೈನಲ್ ಪಂದ್ಯವು ಲಾರ್ಡ್ಸ್ ಕ್ರಿಕೆಟ್ ಮೈದಾನದಲ್ಲಿ ನಿಗದಿಯಾಗಿದೆ.

'ಯುಎಇನಲ್ಲಿ ನಡೆದ ಹಿಂದಿನ ಆವೃತ್ತಿಯ ಒಟ್ಟು ಬಹುಮಾನ ನಿಧಿ ಸುಮಾರು ₹74 ಕೋಟಿ ಆಗಿದ್ದರೆ, ಅದನ್ನು ಈ ಬಾರಿ ₹82 ಕೋಟಿಗೆ ಹೆಚ್ಚಿಸಲಾಗಿದೆ. ಭಾಗವಹಿಸುವ ಎಲ್ಲಾ 12 ತಂಡಗಳು ಕನಿಷ್ಠ ₹2.06 ಕೋಟಿ ಮೊತ್ತವನ್ನು ಪಡೆಯಲಿವೆ' ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ವಿಜೇತ ತಂಡವು ₹21.8 ಕೋಟಿ, ರನ್ನರ್ಸ್ ಅಪ್ ತಂಡವು ₹10 ಕೋಟಿ, ಸೆಮಿಫೈನಲ್‌ನಲ್ಲಿ ಪರಾಭವಗೊಳ್ಳುವ ತಂಡಗಳು ತಲಾ ₹6.29 ಕೋಟಿ ಬಹುಮಾನ ಪಡೆಯಲಿವೆ.

ಭಾರತ, ಆಸ್ಟ್ರೇಲಿಯಾ, ಬಾಂಗ್ಲಾದೇಶ, ಐರ್ಲೆಂಡ್, ನೆದರ್ಲೆಂಡ್ಸ್, ನ್ಯೂಜಿಲೆಂಡ್, ಪಾಕಿಸ್ತಾನ, ಸ್ಕಾಟ್ಲೆಂಡ್, ದಕ್ಷಿಣ ಆಫ್ರಿಕಾ ಮತ್ತು ವೆಸ್ಟ್ ಇಂಡೀಸ್ ಕಣದಲ್ಲಿರುವ ಇತರ ತಂಡಗಳು. 24 ದಿನಗಳ ಟೂರ್ನಿಯಲ್ಲಿ 33 ಪಂದ್ಯಗಳು ನಡೆಯಲಿದೆ.

## ❖ ಶೇ 33ರ ಮೀಸಲಾತಿಗಾಗಿ ಲೋಕಸಭೆ ಕ್ಷೇತ್ರಗಳ ಸಂಖ್ಯೆ 850ರವರೆಗೆ ಏರಿಕೆ: ಮಹಿಳಾ ಮೀಸಲಿಗೆ ಮುಂದಡಿ

**ಸಂದರ್ಭ: ಮಹಿಳೆಯರಿಗೆ ಮೂರನೇ ಒಂದಂಶದಷ್ಟು ಸ್ಥಾನಗಳನ್ನು ಮೀಸಲಾತಿ ಕಲ್ಪಿಸುವ ಭಾಗವಾಗಿ ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆಗೆ 'ಸಂವಿಧಾನ (131ನೇ ತಿದ್ದುಪಡಿ) ಮಸೂದೆ-2026' ಅನ್ನು ಮಂಡಿಸಲು ಕೇಂದ್ರ ಸರ್ಕಾರ ಸಿದ್ಧತೆ ಮಾಡಿಕೊಂಡಿದೆ. ಮಹಿಳೆಯರಿಗೆ ಮೀಸಲಾತಿ ಒದಗಿಸುವ ಪ್ರಕ್ರಿಯೆಯನ್ನು ಕ್ಷೇತ್ರ ಪುನರ್‌ವಿಂಗಡಣೆ ಜೊತೆ ಜೋಡಣೆ ಮಾಡಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ವಿರೋಧಪಕ್ಷಗಳು ಪ್ರತಿ ಹೋರಾಟಕ್ಕೆ ಸಜ್ಜಾಗಿವೆ.**

- ಮರುವಿಂಗಡಣೆ ಪ್ರಸ್ತಾವದ ಪ್ರಕಾರ ಲೋಕಸಭೆ ಮತ್ತು ವಿಧಾನಸಭಾ ಕ್ಷೇತ್ರಗಳ ಸಂಖ್ಯೆಯನ್ನು ಶೇ 50ರವರೆಗೆ ಹೆಚ್ಚಿಸಲು ಅವಕಾಶ ಸಿಗಲಿದೆ ಲೋಕಸಭೆಯ ಸದಸ್ಯರ ಸಂಖ್ಯೆ ಪ್ರಸ್ತುತ 543 ಇದ್ದು, ಗರಿಷ್ಠ 850 ಸ್ಥಾನ ಮೀರುವಂತಿಲ್ಲ ಎಂಬ ಪ್ರಸ್ತಾಪವಿದೆ ಈ ಏರಿಕೆಯಲ್ಲಿ ರಾಜ್ಯಗಳ ಪಾಲು 815 ಸ್ಥಾನಗಳಾದರೆ, ಉಳಿದ 35 ಸ್ಥಾನಗಳು ಕೇಂದ್ರಾಡಳಿತ ಪ್ರದೇಶಗಳಿಗೆ ದೊರೆಯಲಿವೆ ಎಂಬ ಲೆಕ್ಕಾಚಾರ ಹಾಕಲಾಗಿದೆ.
- ಮಹಿಳಾ ಮೀಸಲಾತಿ ಕಾಯ್ದೆಗೆ ತಿದ್ದುಪಡಿ ತರುವ ಮಸೂದೆ ಹಾಗೂ ಲೋಕಸಭಾ ಮತ್ತು ವಿಧಾನಸಭೆ ಕ್ಷೇತ್ರಗಳ ಮರುವಿಂಗಡಣೆ ಉದ್ದೇಶದ ಮಸೂದೆಯನ್ನು ಇದೇ 16ರಂದು ಆರಂಭವಾಗಲಿರುವ ಸಂಸತ್ ಮೂರು ದಿನಗಳ ವಿಶೇಷ ಅಧಿವೇಶನದಲ್ಲಿ ಮಂಡಿಸಲು ಕೇಂದ್ರ ಸರ್ಕಾರ ಸಜ್ಜಾಗಿದೆ.



### ಆಯೋಗಕ್ಕೆ ನ್ಯಾಯಮೂರ್ತಿ ನೇತೃತ್ವ

ಮಸೂದೆಗೆ ಒಪ್ಪಿಗೆ ಸಿಕ್ಕ ಬಳಿಕ ಕ್ಷೇತ್ರ ಪುನರ್ ವಿಂಗಡಣೆ ಆಯೋಗ ರಚನೆ ಆಗಲಿದೆ. ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಅಥವಾ ನಿವೃತ್ತ ನ್ಯಾಯಮೂರ್ತಿ ಆಯೋಗದ ಅಧ್ಯಕ್ಷರಾಗಿರುವರು. ಮುಖ್ಯ ಚುನಾವಣಾ ಆಯುಕ್ತರು (ಅಥವಾ ನಾಮನಿರ್ದೇಶಿತ ಚುನಾವಣಾ ಆಯುಕ್ತರು) ಮತ್ತು ಸಂಬಂಧಪಟ್ಟ ರಾಜ್ಯದ ರಾಜ್ಯ ಚುನಾವಣಾ ಆಯುಕ್ತರು ಪದನಿಮಿತ್ತ ಸದಸ್ಯರಾಗಿರುತ್ತಾರೆ. ಪ್ರತಿ ರಾಜ್ಯದಲ್ಲಿ ಆಯೋಗದ ಕಾರ್ಯನಿರ್ವಹಣೆಗೆ ಸಹಾಯ ಮಾಡಲು 10 ಸಹ ಸದಸ್ಯರನ್ನು ನೇಮಿಸಲಾಗುತ್ತದೆ. ಇದರಲ್ಲಿ ಐವರು ಸಂಸದರು ಮತ್ತು ವಿಧಾನಸಭಾಧ್ಯಕ್ಷರು ನಾಮನಿರ್ದೇಶನ ಮಾಡಿದ ಐವರು ಶಾಸಕರು ಇರಲಿದ್ದಾರೆ. ಆದಾಗ್ಯೂ, ಈ ಸಹ ಸದಸ್ಯರು ಆಯೋಗದ ನಿರ್ಧಾರಗಳಿಗೆ ಸಹಿ ಹಾಕುವ ಮತದಾನದ ಹಕ್ಕು ಅಥವಾ ಅಧಿಕಾರ ಹೊಂದಿರುವುದಿಲ್ಲ.

### ಕ್ಷೇತ್ರ ಮರುವಿಂಗಡಣೆಯ ಹಾದಿ

- ಮಸೂದೆಗಳು ಅಂಗೀಕಾರವಾದ ನಂತರ, ಕ್ಷೇತ್ರ ಮರುವಿಂಗಡಣೆ ಆಯೋಗ ರಚಿಸಲಾಗುತ್ತದೆ
- ಲೋಕಸಭೆ ಮತ್ತು ವಿಧಾನಸಭೆಗಳಲ್ಲಿನ ಸ್ಥಾನಗಳ ಸಂಖ್ಯೆಯನ್ನು ಆಯೋಗ ನಿರ್ಧರಿಸುತ್ತದೆ
- ಸಂವಿಧಾನ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಲು ಕೇಂದ್ರ ಸರ್ಕಾರಕ್ಕೆ ವಿರೋಧ ಪಕ್ಷದ ಬೆಂಬಲ ಬೇಕಾಗುತ್ತದೆ
- ಲೋಕಸಭೆಯಲ್ಲಿ ಎನ್‌ಡಿಎ 293 ಸಂಸದರನ್ನು ಹೊಂದಿದೆ. ಇಂಡಿಯಾ ಮೈತ್ರಿಕೂಟದ 234 ಸಂಸದರು ಇದ್ದಾರೆ. ಇತರರು 13 ಸಂಸದರು ಇದ್ದಾರೆ
- ಎಲ್ಲ 540 ಸಂಸದರು (ಮೂರು ಖಾಲಿ ಹುದ್ದೆಗಳು) ಹಾಜರಿದ್ದರೆ, ಮಸೂದೆ ಅಂಗೀಕರಿಸಲು ಸರ್ಕಾರಕ್ಕೆ 360 ಮತಗಳು ಬೇಕಾಗುತ್ತವೆ
- ಏಪ್ರಿಲ್ 16, 17ರಂದು ಲೋಕಸಭೆಯಲ್ಲಿ ಮತ್ತು ಏಪ್ರಿಲ್ 18 ರಂದು ರಾಜ್ಯಸಭೆಯಲ್ಲಿ ಮಸೂದೆ ಬಗ್ಗೆ ಚರ್ಚಿಸಲಾಗುತ್ತದೆ

### ಕರ್ನಾಟಕ; ಶಾಸಕರ ಸಂಖ್ಯೆ 336ಕ್ಕೆ ಏರಿಕೆ?

ಒಂದು ವೇಳೆ, ಕ್ಷೇತ್ರಗಳ ಸಂಖ್ಯೆಯನ್ನು ಆಯೋಗವು ಶೇ 50ರಷ್ಟು ಹೆಚ್ಚಿಸಿದರೆ ಕರ್ನಾಟಕದಲ್ಲಿ ಲೋಕಸಭಾ ಕ್ಷೇತ್ರಗಳ ಸಂಖ್ಯೆ 28ರಿಂದ 42ಕ್ಕೆ ಹಾಗೂ ವಿಧಾನಸಭಾ ಕ್ಷೇತ್ರಗಳ ಸಂಖ್ಯೆ 224ರಿಂದ 336ಕ್ಕೆ ಏರಿಕೆ ಆಗಲಿದೆ.

- ಸಂಸತ್‌ನಲ್ಲಿ ಈ ಎರಡು ಮಸೂದೆಗಳನ್ನು ಮಂಡಿಸಿದ ವೇಳೆ ಕೇಂದ್ರದ ವಿರುದ್ಧ ಚಾಟಿ ಬೀಸಲು ಅನುಸರಿಸಬೇಕಾದ ಕಾರ್ಯತಂತ್ರ ಕುರಿತು ಚರ್ಚಿಸಲು ವಿರೋಧ ಪಕ್ಷಗಳು ನಿರ್ಧರಿಸಿವೆ. ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಈ ಕುರಿತು ಚರ್ಚಿಸಲು ಬುಧವಾರ ಸಭೆ ಕರೆದಿದ್ದಾರೆ. ಎಲ್ಲ ವಿರೋಧ ಪಕ್ಷಗಳ ಹಿರಿಯ ಮುಖಂಡರು ಈ ಸಭೆಯಲ್ಲಿ ಪಾಲ್ಗೊಂಡು ರಣತಂತ್ರ ರೂಪಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.
- 'ಪ್ರಸ್ತಾವಿತ ತಿದ್ದುಪಡಿ ಮಸೂದೆಗಳು ಅಪಾಯಕಾರಿ ಹಾಗೂ ಸಂವಿಧಾನದ ಮೇಲಿನ ದಾಳಿ' ಎಂದು ಹೇಳುವ ಕಾಂಗ್ರೆಸ್ ಸಂಸದೀಯ ಪಕ್ಷದ ಮುಖ್ಯಸ್ಥೆ ಸೋನಿಯಾ ಗಾಂಧಿ, ಪಕ್ಷದ ನಿಲುವನ್ನು ಈಗಾಗಲೇ ಸ್ಪಷ್ಟಪಡಿಸಿದ್ದಾರೆ.
- ಕೇಂದ್ರವು ಮಹಿಳಾ ಮೀಸಲಾತಿ ಜಾರಿ ಜೊತೆಗೆ ಕ್ಷೇತ್ರಗಳ ಮರುವಿಂಗಡಣೆ ಜಾರಿಗೂ ಮುಂದಾಗಿದೆ ಎಂಬುದು ವಿಪಕ್ಷಗಳ ಆರೋಪ 2024ರ ಲೋಕಸಭಾ ಚುನಾವಣೆ ವೇಳೆ ಮಹಿಳಾ ಮೀಸಲಾತಿ ಜಾರಿಗೊಳಿಸಬೇಕು ಎಂಬ ವಿಪಕ್ಷಗಳ ಬೇಡಿಕೆಯನ್ನು ಕೇಂದ್ರ ತಿರಸ್ಕರಿಸಿತ್ತು. ಈಗ ಇದನ್ನು ಜಾರಿಗೊಳಿಸಲು ಅವಸರವೇಕೆ ಎಂದು ವಿರೋಧ ಪಕ್ಷಗಳು ಪ್ರಶ್ನಿಸಿವೆ.

- ರಾಜ್ಯ ವಿಧಾನಸಭೆಗಳಿಗೂ ಶೇ 50ರಷ್ಟು ಸ್ಥಾನಗಳ ಹೆಚ್ಚಳಕ್ಕೆ ಪ್ರಸ್ತಾವ ಹೊಂದಿದ್ದರೂ ಪ್ರತಿ ವಿಧಾನಸಭೆಗೆ 500 ಸ್ಥಾನಗಳ ಗರಿಷ್ಠ ಮಿತಿಯಲ್ಲಿ ಯಾವುದೇ ಬದಲಾವಣೆಯನ್ನು ಮಾಡಲಾಗಿಲ್ಲ ಉತ್ತರ ಪ್ರದೇಶ ವಿಧಾನಸಭೆ ಮಾತ್ರ 403ರಷ್ಟು ದೊಡ್ಡ ಸಂಖ್ಯೆಯ ಸ್ಥಾನಗಳನ್ನು ಹೊಂದಿದ್ದು, ಅಲ್ಲಿ ಶೇ 50ರಷ್ಟು ಸ್ಥಾನಗಳ ಹೆಚ್ಚಳಕ್ಕೆ ಅವಕಾಶ ಇಲ್ಲ, ಮಸೂದೆ ಪ್ರಕಾರ, ಕ್ಷೇತ್ರ ಪುನರ್‌ವಿಂಗಡಣೆಗೂ ಮುನ್ನ ಬಂದ ಜನಗಣತಿ ವರದಿಯ ಆಧಾರದ ಮೇಲೆ ಪ್ರಕ್ರಿಯೆ ನಡೆಯಲಿದ್ದು ಮಹಿಳೆಯರಿಗೆ ಮೂರನೇ ಒಂದರಷ್ಟು ಪ್ರಾತಿನಿಧ್ಯ ಒದಗಿಸಲು ಅನುವು ಮಾಡಿಕೊಡಲಿದೆ.
- ಕೇಂದ್ರವು ಲೋಕಸಭೆ ಮತ್ತು ವಿಧಾನ ಸಭೆಗಳಲ್ಲಿ ಸ್ಥಾನಗಳ ಹೆಚ್ಚಳ ಕುರಿತ ಸಂವಿಧಾನ (131 ನೇ ತಿದ್ದುಪಡಿ) ಮಸೂದೆ-2026 ಮತ್ತು ಕೇಂದ್ರಾಡಳಿತ ಪ್ರದೇಶಗಳ ಕಾನೂನು ಗಳು (ತಿದ್ದುಪಡಿ) ಮಸೂದೆ-2026'ರ ಪ್ರತಿಗಳನ್ನು ಸಂಸದರಿಗೆ ವಿತರಿಸಿದೆ.
- ಸಂವಿಧಾನ ತಿದ್ದುಪಡಿ ಮಸೂದೆಯ ಜೊತೆಗೆ, ಕೇಂದ್ರವು 2002ರ ಕ್ಷೇತ್ರ ಪುನರ್ ವಿಂಗಡಣೆ ಕಾಯ್ದೆ ರದ್ದುಗೊಳಿಸಲು ಮತ್ತು ಬದಲಿಸಲು 2026ರ ಕ್ಷೇತ್ರ ಪುನರ್ ವಿಂಗಡಣೆ ಮಸೂದೆಯನ್ನೂ ಮಂಡಿಸಲಿದೆ.
- 2029ರ ಲೋಕಸಭಾ ಚುನಾವಣೆಯಲ್ಲಿ ಮಹಿಳಾ ಮೀಸಲು ಜಾರಿಗೆ ತರುವ ಉದ್ದೇಶದಿಂದ ಮೂರು ಮಸೂದೆಗಳ ಕುರಿತ ಚರ್ಚೆ ಮತ್ತು ಅಂಗೀಕಾರಕ್ಕಾಗಿ ಏಪ್ರಿಲ್ 16ರಿಂದ 18ರವರೆಗೆ ಅಧಿವೇಶನ ನಡೆಯಲಿದೆ.
- ಲೋಕಸಭೆ ಮತ್ತು ವಿಧಾನಸಭೆಗಳ ಕ್ಷೇತ್ರಗಳ ಅಂತಿಮ ಸಂಖ್ಯೆಯನ್ನು ನಿರ್ಧರಿಸುವ ಅಧಿಕಾರವನ್ನು ಕ್ಷೇತ್ರ ಪುನರ್‌ವಿಂಗಡಣಾ ಆಯೋಗಕ್ಕೆ ಬಿಡಲಾಗಿದೆ. ಮಸೂದೆಗೆ ಒಪ್ಪಿಗೆ ಸಿಕ್ಕ ಬಳಿಕ ಸರ್ಕಾರ ಆಯೋಗವನ್ನು ರಚಿಸಲಿದೆ.
- ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು ಹೆಚ್ಚಿಸುವ ಪ್ರಸ್ತಾವವು ದಕ್ಷಿಣ ರಾಜ್ಯಗಳು, ಲೋಕಸಭಾ ಕ್ಷೇತ್ರಗಳ ಸಂಖ್ಯೆ ಕಡಿಮೆ ಇರುವ ಪಂಜಾಬ್, ಹಿಮಾಚಲ ಪ್ರದೇಶ ಮತ್ತು ಹರಿಯಾಣದಂತಹ ರಾಜ್ಯಗಳು ಹಾಗೂ ಈಶಾನ್ಯ ರಾಜ್ಯಗಳಿಗೆ ಹಾನಿಕಾರಕವಾಗಿದೆ ಎಂದು ವಿಪಕ್ಷಗಳು ಆರೋಪಿಸಿವೆ.
- **ಸಂವಿಧಾನದ (131ನೇ ತಿದ್ದುಪಡಿ) ಮಸೂದೆಯ ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಯ ಪ್ರಕಾರ, ಈ ಮಸೂದೆಯು ಕ್ಷೇತ್ರಗಳ ಪುನರ್‌ವಿಂಗಡಣೆ ಪ್ರಕ್ರಿಯೆಯನ್ನು ಸುಗಮಗೊಳಿಸುತ್ತದೆ ಮತ್ತು ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಸ್ಥಾನಗಳ ಮೀಸಲಾತಿ ಒದಗಿಸುವ ಕಾನೂನಿನ ಹಾರಿಗೆ ಅನುವು ಮಾಡಿಕೊಡುತ್ತದೆ.**
- ಸ್ಥಾನಗಳ ಸಂಖ್ಯೆ ಮತ್ತು ಮಿತಿ ನಿರ್ಣಯಕ್ಕೆ ಸಂಬಂಧಿಸಿದ 81, 82 ಮತ್ತು 170ನೇ ಪರಿಚ್ಛೇದಗಳನ್ನು ತಿದ್ದುಪಡಿ ಮಾಡುವುದರ ಜೊತೆಗೆ, ಮಹಿಳಾ ಮೀಸಲಾತಿಯ ಅನುಷ್ಠಾನಕ್ಕಾಗಿ 334 (ಎ) ಪರಿಚ್ಛೇದಕ್ಕೆ ಬದಲಾವಣೆಗಳನ್ನೂ ಮಸೂದೆ ಪ್ರಸ್ತಾಪಿಸುತ್ತದೆ. ಮಹಿಳೆಯರಿಗೆ ಮೀಸಲಾಗಿರುವ ಕ್ಷೇತ್ರಗಳನ್ನು ರೋಸ್ಟರ್ (ಸರದಿ) ಪ್ರಕಾರ ಬದಲಾಯಿಸುತ್ತಾ ಹೋಗಲಾಗುತ್ತದೆ.
- ಪ್ರಸ್ತುತ, ಸಂವಿಧಾನದ 82 ಮತ್ತು 170(3)ನೇ ಪರಿಚ್ಛೇದದ ಪ್ರಕಾರ ಪ್ರತಿ ಜನಗಣತಿಯ ನಂತರ ಕ್ಷೇತ್ರ ಪುನರ್‌ವಿಂಗಡಣೆಗೆ ಅವಕಾಶ ನೀಡಲಾಗಿದ್ದರೂ, ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಸ್ಥಾನಗಳ ಸಂಖ್ಯೆಯನ್ನು ಹೆಚ್ಚಿಸುವುದನ್ನು ಸ್ಥಗಿತಗೊಳಿಸಲಾಗಿತ್ತು. ಈ ಸ್ಥಗಿತವು 2001ರವರೆಗೆ ಜಾರಿಯಲ್ಲಿತ್ತು ಮತ್ತು 2002ರ ನಂತರದ ಜನಗಣತಿ ವರದಿಗೆ ಅನುಸಾರವಾಗಿ ಕ್ಷೇತ್ರ ಪುನರ್‌ವಿಂಗಡಣೆ ಮಾಡಲಾಗಿತ್ತು.
- ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳು ಜನಸಂಖ್ಯಾ ನಿಯಂತ್ರಣದಲ್ಲಿ ಉತ್ತಮ ಸಾಧನೆ ಮಾಡಿವೆ ವಿಶೇಷವಾಗಿ ಉತ್ತರ ಪ್ರದೇಶ ಮತ್ತು ಉತ್ತರ ಭಾರತದ ಇತರ ಕೆಲವು ರಾಜ್ಯಗಳಿಗೆ ಹೋಲಿಸಿದರೆ ಈ ರಾಜ್ಯಗಳಿಗೆ ಅನನುಕೂಲ ಆಗಬಾರದು ಎಂಬ ಕಾರಣಕ್ಕೆ 1971ರ ಜನಗಣತಿಯ ಆಧಾರದಲ್ಲಿ ಸ್ಥಾನಗಳ ಹೆಚ್ಚಳವನ್ನು ಸ್ಥಗಿತಗೊಳಿಸಲಾಗಿತ್ತು.

Dr. Rajkumar IAS/KAS Academy



# ಸಾಗರದಾಳದಲ್ಲಿ ಡೇಟಾ ಸೆಂಟರ್!

• ರಾಕೇಶ ವಿ. ತಾಳಿಕೋಟಿ

ಆವಿಷ್ಕಾರ ಮತ್ತು ತಂತ್ರಜ್ಞಾನದಲ್ಲಿ ನಮಗಿಂತ ಸದಾ ಒಂದು ಹೆಜ್ಜೆ ಮುಂದಿರುವ ಡ್ರ್ಯಾಗನ್ ದೇಶ ಎನಿಸಿಕೊಂಡಿರುವ ಚೀನಾ ಇದೀಗ ಸಾಗರದಾಳದಲ್ಲಿ ಪವನ ವಿದ್ಯುತ್‌ನಿಂದ ಕಾರ್ಯನಿರ್ವಹಿಸುವ ಇಂಟರ್‌ನೆಟ್ ಡೇಟಾ ಸೆಂಟರ್ ಆರಂಭಿಸಿದೆ.

ವಿಶ್ವದ ಅಗ್ರಗಣ್ಯ ತಂತ್ರಜ್ಞಾನ ದೈತ್ಯ ಸಂಸ್ಥೆಗಳು ತಮ್ಮ ಭಾರೀ ಡೇಟಾ ಸೆಂಟರ್‌ಗಳಿಗೆ ಅಗತ್ಯವಿರುವ ಪರ್ಯಾಯ ಶಕ್ತಿಗೆ ತೀವ್ರವಾಗಿ ಹುಡುಕಾಟ, ಸಂಶೋಧನೆ ನಡೆಸಿರುವ ಕಾಲಘಟ್ಟದಲ್ಲಿ, ಚೀನಾದ ಕಂಪನಿಯು ವಿಶ್ವವೇ ಕಣ್ಣರಳಿಸಿ ನೋಡುವಂತಹ ಪರಿಹಾರವನ್ನು ಅನ್ವೇಷಿಸಿದೆ.

ಚೀನಾದ ಹೈಕ್ಲೌಡ್ ಕಂಪನಿಯು ಶಾಂಘೈ ಕರಾವಳಿಯ ಬಳಿ 2.3 ಮೆಗಾವಾಟ್ ಸಾಮರ್ಥ್ಯದ ಡೇಟಾ ಕೇಂದ್ರದ ಮೊದಲ ಹಂತವನ್ನು ಆರಂಭಗೊಳಿಸಿದೆ. ಇದು ವಿಶ್ವದಲ್ಲೇ ಮೊದಲನೆಯದು ಎಂದು ಹೇಳಿಕೊಂಡಿದೆ. 'ನ್ಯೂ ಅಟ್ಲಾಸ್' ಎಂಬ ಚೀನಾ ಮಾಧ್ಯಮದ ವರದಿ ಪ್ರಕಾರ, ಡೇಟಾ ಸೆಂಟರ್‌ಗೆ ಬೇಕಾಗುವ ವಿದ್ಯುಚ್ಛಕ್ತಿಯ ಶೇ 95ರಷ್ಟು ಸಮುದ್ರದ ಹೊರಭಾಗದಲ್ಲಿ ತಯಾರಾಗುವ ಪವನ ವಿದ್ಯುತ್‌ನಿಂದ ಪೂರೈಕೆಯಾಗುತ್ತದೆ. ಅಲ್ಲದೆ, ಈ ವ್ಯವಸ್ಥೆಯನ್ನು ತಂಪಾಗಿ ಇಡಲು ಶೀತಲ ಸಮುದ್ರ ಪ್ರವಾಹವನ್ನು ಬಳಸಲಾಗುತ್ತದೆ.

ಭೂಮಿಯ ಮೇಲಿನ ಡೇಟಾ ಸೆಂಟರ್‌ಗಳೊಂದಿಗೆ ಹೋಲಿಸಿದರೆ, ಇಲ್ಲಿ ಬಳಕೆಯಾಗುವ ಒಟ್ಟು ವಿದ್ಯುತ್‌ನಲ್ಲಿ ಸುಮಾರು ಶೇ 23ರಷ್ಟು ಕಡಿಮೆಗೊಳ್ಳುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ.

ಚೀನಾದ ಸಾಗರದಾಳದ ಮೊದಲ ವಾಣಿಜ್ಯ ಡೇಟಾ ಸೆಂಟರ್‌ನ ಒಂದು ಘಟಕ ಪೂರ್ಣಗೊಂಡ ಬಳಿಕ 'ಸೌತ್ ಚೈನಾ ಮಾರ್ನಿಂಗ್ ಪೋಸ್ಟ್' ತನ್ನ ವೆಬ್‌ಸೈಟ್‌ನಲ್ಲಿ ನೀಡಿರುವ ವರದಿ ಪ್ರಕಾರ, ಕರಾವಳಿ ತೀರವಾದ ಹೈನಾನ್‌ನಲ್ಲಿ 114 ಅಡಿ ಆಳದಲ್ಲಿ ಈ ಯೋಜನೆ ಆರಂಭಗೊಂಡಿದೆ. ಇದು ಜಲಾಂತರ್ಗಾಮಿ ಸರ್ವರ್ ರ್‍ಯಾಕ್‌ಗಳ ಸರಣಿಯಾಗಿದೆ. ಪ್ರತಿ ಕ್ಯಾಬಿನ್ ಪಾಡ್‌ನಲ್ಲಿ ಒಂದೇ ಸಮಯದಲ್ಲಿ 400ರಿಂದ 500 ಸರ್ವರ್‌ಗಳನ್ನು ಇರಿಸುವಷ್ಟು ದೈತ್ಯ ಸಾಮರ್ಥ್ಯವನ್ನು ಹೊಂದಿದೆ ಎಂದು ತಿಳಿಸಿದೆ.

ಈ ಕ್ಯಾಬಿನ್‌ಗಳನ್ನು ಸರಪಳಿಯಂತೆ ಜೋಡಿಸಿದರೆ 'ಡೇಟಾ ಸೆಂಟರ್' ರೂಪುಗೊಳ್ಳುತ್ತದೆ. ಇದನ್ನು ಸಮುದ್ರದ ಅಡಿಯ ದೂರಸಂಪರ್ಕ ಕೇಬಲ್ ಮೂಲಕ ಚೀನಾದ ಭೂಭಾಗಕ್ಕೆ ಸಂಪರ್ಕಿಸಲಾಗಿದೆ. ಚೀನಾದ 'ಈಸ್ಟರ್ನ್ ಡೇಟಾ ವೆಸ್ಟರ್ನ್ ಕಂಪ್ಯೂಟಿಂಗ್ ತಂತ್ರಜ್ಞಾನ' ಯೋಜನೆಯಡಿಯಲ್ಲಿ ಸ್ಥಳೀಯ ಸರ್ಕಾರವು ಈ ಡೇಟಾ ಸೆಂಟರ್ ಅನ್ನು ಮತ್ತಷ್ಟು ಕ್ಯಾಬಿನ್‌ಗಳಿಗೆ ವಿಸ್ತರಿಸಲು ಉದ್ದೇಶಿಸಿದೆ.

**ಡೇಟಾ ಸೆಂಟರ್‌ಗಳ ಕಾರ್ಯನಿರ್ವಹಣೆ:** ಸರ್ವರ್ ಡೇಟಾ ಕೇಂದ್ರಗಳು ಕಾರ್ಯನಿರ್ವಹಿಸಲು ತಂಪಿನ ವಾತಾವರಣದ ಅಗತ್ಯವಿರುತ್ತದೆ. ದೊಡ್ಡ ಕೇಂದ್ರಗಳು ದಿನಕ್ಕೆ ಅಂದಾಜು 5 ಮಿಲಿಯನ್ ಗ್ಯಾಲನ್ ನೀರನ್ನು ಬಳಸುತ್ತವೆ. ಇದು 10,000 ದಿಂದ 50,000 ಜನವಸತಿ ಪ್ರದೇಶದ ದೈನಂದಿನ ಬಳಕೆಯಷ್ಟು ಎಂದು ಅಂದಾಜಿಸಲಾಗಿದೆ. ಅಮೆರಿಕದ ಟೆಕ್ಸಾಸ್‌ನ ಅಬಿಲೀನ್‌ನಲ್ಲಿ ಇರುವ 'ಓಪನ್ ಎ.ಐ' ಮತ್ತು 'ಒರಾಕಲ್' ಸಂಸ್ಥೆಗಳ ಸ್ಟಾರ್‌ಗೇಟ್ ಎ.ಐ. ಡೇಟಾ ಕೇಂದ್ರವು ಈ ನೀರಿನ ಬಳಕೆಯನ್ನು ಕಡಿಮೆ ಮಾಡಲು ಮುಚ್ಚಿದ ಚಕ್ರ (closed loops) ವ್ಯವಸ್ಥೆಯನ್ನು ಬಳಸಲು ಯೋಜಿಸಿದೆ. ಈ ವ್ಯವಸ್ಥೆ ಆರಂಭಿಕವಾಗಿ ಬಳಸಿರುವ ಒಂದು ಮಿಲಿಯನ್ ಗ್ಯಾಲನ್ ನೀರನ್ನು ಮರುಬಳಕೆ ಮಾಡುತ್ತದೆ ಮತ್ತು ವರ್ಷಕ್ಕೆ ಸುಮಾರು 12,000 ಗ್ಯಾಲನ್ ನೀರನ್ನು ಮಾತ್ರ ಹೆಚ್ಚುವರಿಯಾಗಿ ಸೇರಿಸುವ ಅಗತ್ಯವಿರುತ್ತದೆ ಎಂದು ಒರಾಕಲ್‌ನ ಕ್ಲೇ ಮ್ಯಾಗೋಯರ್ಕ್ ಅವರು ಲಾಸ್ ವೆಗಾಸ್‌ನಲ್ಲಿ ನಡೆದ ಕ್ಲೌಡ್ ವರ್ಲ್ಡ್ ಸಮಾರಂಭದಲ್ಲಿ ತಿಳಿಸಿದ್ದಾರೆ.

ಇಷ್ಟೊಂದು ಬೇಡಿಕೆಯಲ್ಲಿರುವ ಡೇಟಾ ಸೆಂಟರ್‌ನ ತಂಪು ವಾತಾವರಣದ ವ್ಯವಸ್ಥೆಗೆ ಚೀನಾದ ಈ ಹೊಸ ತಂತ್ರಜ್ಞಾನ ಡೇಟಾ ಕ್ಷೇತ್ರದಲ್ಲಿಯೇ ಅತಿ ದೊಡ್ಡ ಆವಿಷ್ಕಾರ ಎಂಬಂತಾಗಿದೆ. ಯಾಕೆಂದರೆ ಸಾಮಾನ್ಯವಾಗಿ ವಿಶ್ವದ ಒಟ್ಟು ವಿದ್ಯುತ್ ಬಳಕೆಯ ಶೇ 40 ರಿಂದ 50ರಷ್ಟು ಈ ಡೇಟಾ ಸೆಂಟರ್‌ಗಳಿಗೆ ಪೂರೈಕೆಯಾಗುತ್ತದೆ. ತಂಪಿನ ವಾತಾವರಣ ನೀಡಲು ಸಾಕಷ್ಟು ನೀರು ಬೇಕಾಗುತ್ತದೆ. ಇನ್ನು ಸಹಜ ತಂಪುಗೊಳಿಸುವ ವ್ಯವಸ್ಥೆಯಾಗಿ ಸಮುದ್ರದ ನೀರನ್ನು ಆಳದಲ್ಲಿ ಬಳಸುವುದರಿಂದ 'ಪವರ್ ಯೂಸೇಜ್ ಎಫೆಕ್ಟಿವ್‌ನೆಸ್' ಪ್ರಮಾಣ ನಿರೀಕ್ಷಿತವಾಗಿ ಕಡಿಮೆಯಾಗುತ್ತದೆ. ಈ ಕೇಂದ್ರದ ನಿರ್ಮಾಣದಿಂದ ಕೇವಲ ಡೇಟಾ ಸಂಗ್ರಹ ಮಾತ್ರವಲ್ಲದೆ, ಕೃತಕ ಬುದ್ಧಿಮತ್ತೆ ಕಾರ್ಯಭಾರಗಳು ಮತ್ತು ಉನ್ನತ ಮಾದರಿ ಕಂಪ್ಯೂಟಿಂಗ್ ವ್ಯವಸ್ಥೆಗೂ ಶಕ್ತಿ ಪೂರೈಕೆಯಾಗಲಿದೆ. 5ಜಿ ಜಾಲಗಳು, ಕೈಗಾರಿಕೆಗಳಿಗೆ ಜಾಲಬಲ, ಇ-ಕಾಮರ್ಸ್‌ಗೆ ಗಣಕಯಂತ್ರಗಳ ಮೂಲಸೌಕರ್ಯವನ್ನು ಒದಗಿಸಲಿದೆ.

ಅಂತರರಾಷ್ಟ್ರೀಯ ಡೇಟಾ ಹರಿವಿನಲ್ಲಿ ಇದನ್ನೊಂದು ಮೈಲಿಗಲ್ಲಾಗಿಸುವ ಮಹತ್ತರ ಗುರಿಯನ್ನು ಚೀನಾ ದೇಶವು ಹೊಂದಿದೆ. ಈ ಸಾಗರದಾಳದ ಡೇಟಾ ಕೇಂದ್ರವು ಪರಿಸರಸ್ನೇಹಿ ಹಾಗೂ ಉನ್ನತ ಕಾರ್ಯಕ್ಷಮತೆಯ ಗಣಕ ಕ್ಲಸ್ಟರ್ ಆಗಿಯೂ ಕಾರ್ಯನಿರ್ವಹಿಸುವ ಮುನ್ಸೂಚನೆ ನೀಡಿದೆ. ಇದು ಈ ಯೋಜನೆಯ ಮೊದಲ ಭಾಗವಷ್ಟೆ. ಎರಡನೆಯ ಹಂತದಲ್ಲಿ 24 ಮೆಗಾವಾಟ್ ಸಾಮರ್ಥ್ಯದ ಸಮುದ್ರದಾಳದ ಡೇಟಾ ಸೆಂಟರ್ ನಿರ್ಮಿಸುವ ಚಿಂತನೆ ಸರ್ಕಾರಕ್ಕೆ ಇರುವುದಾಗಿ ಚೀನಾ ಮಾಧ್ಯಮಗಳು ವರದಿ ಮಾಡಿವೆ. ಅದರ ಪ್ರಾರಂಭ ಯಾವಾಗ ಎನ್ನುವುದರ ಬಗ್ಗೆ ಇನ್ನೂ ಯಾವುದೇ ಮಾಹಿತಿ ಪ್ರಕಟವಾಗಿಲ್ಲ.

**ಮೈಕ್ರೋಸಾಫ್ಟ್ ಮೊದಲು:** ವಿಶ್ವದ ಮೊದಲ ಸಮುದ್ರದಾಳದ ಡೇಟಾ ಸೆಂಟರ್‌ಗಾಗಿ ಪೆಸಿಫಿಕ್ ಸಾಗರದಲ್ಲಿ 2015ರಲ್ಲಿ ಮೈಕ್ರೋಸಾಫ್ಟ್ ಸಂಸ್ಥೆಯು 'ಪ್ರಾಜೆಕ್ಟ್ ನ್ಯಾಟಿಕ್' ಎಂಬ ಎರಡು ಹಂತಗಳ ಪೈಲಟ್ ಯೋಜನೆಯನ್ನು ಕಾರ್ಯಾರಂಭ ಮಾಡಿತ್ತು. ಆದರೆ, ಜೂನ್ 2024ರ ವೇಳೆಗೆ ಈ ಯೋಜನೆಯನ್ನು ಕೈಬಿಡಲಾಗಿದೆ ಎಂದು ಮೈಕ್ರೋಸಾಫ್ಟ್ ಅಧಿಕೃತವಾಗಿ ಘೋಷಿಸಿತ್ತು.

'ನಾವು ಪ್ರಸ್ತುತ ನೀರಿನೊಳಗೆ ಡೇಟಾ ಸೆಂಟರ್‌ಗಳನ್ನು ನಿರ್ಮಿಸುವ ಯೋಜನೆ ಮಾಡುತ್ತಿಲ್ಲ. ಆದರೆ, ಅಲ್ಲಿ ನಿರ್ಮಿಸುವ ಡೇಟಾ ಸೆಂಟರ್‌ಗಳ ವಿಶ್ವಾಸಾರ್ಹತೆ ಮತ್ತು ಸ್ಥಿರತೆಯ ಕುರಿತು ಹೊಸ ಸಂಶೋಧನೆಗಳನ್ನು ಹುಟ್ಟುಹಾಕಿದ್ದೇವೆ. ಉದಾಹರಣೆಗೆ 'ಲಿಕ್ವಿಡ್ ಇಮರ್ಷನ್ ಟೆಕ್ನಾಲಜಿ' ಅನ್ವೇಷಿಸಲು, ಪರೀಕ್ಷಿಸಲು ಮತ್ತು ಮಾನ್ಯಗೊಳಿಸಲು 'ಪ್ರಾಜೆಕ್ಟ್ ನ್ಯಾಟಿಕ್' ಅನ್ನು ಸಂಶೋಧನಾ ವೇದಿಕೆಯಾಗಿಯೇ ಮುಂದುವರಿಸುತ್ತೇವೆ' ಎಂದು ಮೈಕ್ರೋಸಾಫ್ಟ್‌ನ ವಕ್ತಾರರು 'ಡೇಟಾ ಸೆಂಟರ್ ಡೈನಾಮಿಕ್ಸ್' ಎಂಬ ಕೈಗಾರಿಕಾ ಮಾಧ್ಯಮಕ್ಕೆ ತಿಳಿಸಿದ್ದಾರೆ.

ಈ ತಂತ್ರಜ್ಞಾನ ಇನ್ನೂ ಆರಂಭಿಕ ಹಂತದಲ್ಲಿದ್ದು, ಈ ಮಾದರಿಯ ಪ್ರಯೋಗಗಳಿಗೆ ಮೂಲಸೌಲಭ್ಯದಿಂದ ಮೊದಲುಗೊಂಡು ಸಂಪೂರ್ಣ ಪ್ರಮಾಣದ ಕಾರ್ಯಾಚರಣೆಗೆ ಹೋಗಲು ಇನ್ನೂ ಹೆಚ್ಚಿನ ಅಭಿವೃದ್ಧಿ ಮತ್ತು ಸುಧಾರಣೆಯ ಅಗತ್ಯವಿದೆ ಎಂದು ಡೇಟಾ ಎಂಜಿನಿಯರ್‌ಗಳು ಒಪ್ಪಿಕೊಂಡಿದ್ದಾರೆ. ನಿರ್ವಹಣಾ ವೆಚ್ಚಗಳು ಮತ್ತು ಕಾಲಕಾಲಕ್ಕೆ ಸಮುದ್ರ ಪರಿಸರದ ಮೇಲೆ ಬೀರುವ ಪರಿಣಾಮಗಳ ಬಗ್ಗೆಯೂ ಸಂಶೋಧನೆ ನಡೆದಿದೆ.

ಸಾಗರದಡಿ ಡೇಟಾ ಕೇಂದ್ರಗಳ ನಿರ್ಮಾಣ ಇನ್ನೂ ಪ್ರಾರಂಭಿಕ ಹಂತದಲ್ಲಿದೆ ಎಂದು 'ಚೀನಾ ಕಮ್ಯೂನಿಕೇಷನ್ ಕನ್‌ಸ್ಟ್ರಕ್ಷನ್' ಕಂಪನಿಯ ಬಂದರು ಎಂಜಿನಿಯರಿಂಗ್ ವಿಭಾಗದ ಅಧ್ಯಕ್ಷ ವಾಂಗ್ ಶಿಫೆಂಗ್ ಹೇಳಿದ್ದಾರೆ.

ಯೋಜನೆಗಳು ಕಾರ್ಯರೂಪಕ್ಕೆ ಬರಲು ತಂತ್ರಜ್ಞಾನ ಪಕ್ವತೆ ಮತ್ತು ಅದರ ನಿರ್ಮಾಣ, ನಿರ್ವಹಣೆ ವೆಚ್ಚದ ಗುಣಾವಗುಣಗಳನ್ನು ಅವಲೋಕಿಸಬೇಕಿದೆ.

ಒಂದು ವೇಳೆ ಈ ಯೋಜನೆ ಯಶಸ್ವಿಯಾಗಿ ಎಲ್ಲ ಸಾಫ್ಟ್‌ವೇರ್ ದಿಗ್ಗಜ ಕಂಪನಿಗಳೂ ಇದೇ ಮಾದರಿಯನ್ನು ಅನುಸರಿಸಿದರೆ ವಿಶ್ವದ ಒಟ್ಟು ವಿದ್ಯುತ್ ಬಳಕೆಯಲ್ಲಿ ಅಂದಾಜು ಶೇ 22.8ರಷ್ಟು ಕಡಿಮೆ ಮಾಡಬಹುದು. ಜೊತೆಗೆ ಪ್ರತಿ ಬಾರಿಯೂ ಡೇಟಾ ಸೆಂಟರ್‌ಗಳಿಗೆ ಉಪಯೋಗಿಸುವ ತಾಜಾ ನೀರಿನ ಬಳಕೆಯ ಅಗತ್ಯದ ಸವಾಲನ್ನು ಸಂಪೂರ್ಣವಾಗಿ ನಿವಾರಿಸಬಹುದು. ಹಾಗೆಯೇ ಭೂಮಿ ಮೇಲೆ ನಿರ್ಮಾಣವಾಗುವ ಡೇಟಾ ಸೆಂಟರ್‌ಗಳ ಬಳಕೆಯನ್ನು ಶೇ 90ಕ್ಕಿಂತ ಕಡಿಮೆ ಮಾಡಬಹುದಾಗಿದೆ. ಪರಿಸರದ ಮೇಲೆ ಇ-ತ್ಯಾಜ್ಯ ಬೀರುವ ಪ್ರಭಾವವನ್ನು ತಗ್ಗಿಸಬಹುದಾಗಿದೆ.

'ಮೈಕ್ರೋಸಾಫ್ಟ್' ಸಂಸ್ಥೆಯು ಸ್ವಲ್ಪ ಮಟ್ಟಿಗೆ ಪ್ರಯತ್ನಿಸಿ ಹಿಂದೆ ಸರಿದ ಈ ಪ್ರಯೋಗ ಸಂಪೂರ್ಣ ಯಶಸ್ವಿಯಾಗುತ್ತದೆಯೇ ಎಂಬುದೇ ಈಗ ಕುತೂಹಲಕಾರಿ ಪ್ರಶ್ನೆಯಾಗಿದೆ.

Publication Date
15/04/2026

Presented by ಪ್ರಜಾವಾಣಿ



# ಇಂಗಾಲದ ಡೈ ಆಕ್ಸೈಡ್‌ನಿಂದ ಮಿಥೆನಾಲ್ ಇಂಧನ

• ನೇಸರ ಕಾಡನಕುಪ್ಪೆ

**ಪೆಟ್ರೋಲಿಯಂ** ಇಂಧನಗಳು ದಿನೇ ದಿನೇ ಕ್ಷೀಣಿಸುತ್ತಿರುವುದು ಹಾಗೂ ಈ ಇಂಧನಗಳ ಲಭ್ಯತೆ, ಯುದ್ಧ ಇತ್ಯಾದಿ ಕಾರಣಗಳಿಂದಾಗಿ ಕಷ್ಟಸಾಧ್ಯವಾಗುತ್ತಿರುವುದು ನಮಗೆ ನಮ್ಮ ದಿನನಿತ್ಯದ ಜೀವನದಲ್ಲಿ ಹಿಂದಿಗಿಂತಲೂ ಈಗ ಬೇಗನೇ ಮನದಟ್ಟಾಗುತ್ತಿದೆ. ಏರುತ್ತಿರುವ ಬೆಲೆ ಒಂದು ಕಾರಣವಾದರೆ, ಸಾಂಪ್ರದಾಯಿಕ ಪೆಟ್ರೋಲ್‌ನಂತಹ ಇಂಧನಗಳಿಗೆ ಎಥೆನಾಲ್‌ನಂತಹ ರಾಸಾಯನಿಕಗಳ ಮಿಶ್ರಣದಿಂದ ಕ್ಷೀಣಿಸಿದ ಮೈಲೇಜ್, ಕಾರ್ಯಕ್ಷಮತೆ, ಎಂಜಿನ್ ಬೇಗನೇ ಕೆಡುವುದು ಇತ್ಯಾದಿ ಕಾರಣಗಳು ಗ್ರಾಹಕರನ್ನು ಚಿಂತೆಗೆ ದೂಡಿವೆ.

ಇದಕ್ಕೆ ಪರಿಹಾರವೆಂಬಂತೆ ವಿಜ್ಞಾನಿಗಳು ಹೊಸ ಬಗೆಯ ಇಂಧನ ಪರಿಹಾರವನ್ನು ಕಂಡುಹಿಡಿದಿದ್ದಾರೆ. ಇರುವ ಹಾಲಿ ಇಂಧನಕ್ಕೆ ಬದಲಾವಣೆ ತರುವ ಬದಲಿಗೆ, ಕಸವನ್ನು ರಸವನ್ನಾಗಿಸುವ ಅತ್ಯಾಧುನಿಕ ವಿಧಾನವನ್ನು ಕಂಡುಹಿಡಿದಿದ್ದಾರೆ. ಅದುವೇ ಇಂಗಾಲದ ಡೈ ಆಕ್ಸೈಡ್ ಅನ್ನು ಮಿಥೆನಾಲ್ ಅನ್ನಾಗಿ ಪರಿವರ್ತಿಸಿ ಅದನ್ನು ಇಂಧನವಾಗಿ ಬಳಸುವ ವಿಧಾನ. ಇದು ಭವಿಷ್ಯದ ಬಹುತೇಕ ಇಂಧನ ಸವಾಲುಗಳನ್ನು ಪರಿಹರಿಸುತ್ತದೆ ಎಂದು ಇಂಧನತಜ್ಞರು ವಿಶ್ಲೇಷಿಸಿದ್ದಾರೆ.

ಮಿಥೆನಾಲ್ ಈಗಾಗಲೇ ಕೈಗಾರಿಕಾ ಹಾಗೂ ವಾಹನ ಕ್ಷೇತ್ರದಲ್ಲಿ ಬಳಕೆಯಲ್ಲಿದೆ. ಇದು ಎಥೆನಾಲ್‌ನಂತೆ ಅಲ್ಲ. ಎಥೆನಾಲ್ ಕೃಷಿ ಉತ್ಪನ್ನವಾಗಿರುವ ಕಾರಣ, ಅದರಲ್ಲಿ ಕೊಂಚ ಸಕ್ಕರೆಯ ಅಂಶ, ತೇವಾಂಶ ಇತ್ಯಾದಿಗಳು ಇರುತ್ತವೆ. ಒಂದು ಇಂಗಾಲದ ಪರಮಾಣು, ಐದು ಜಲಜನಕದ ಪರಮಾಣು ಹಾಗೂ ಒಂದು ಜಲಜನಕ-ಆಮ್ಲಜನಕದ ಒಂದು ಪರಮಾಣು ($C_2H_5OH$) ಎಥೆನಾಲ್‌ನಲ್ಲಿ ಇರುತ್ತದೆ. ಈ ಎಲ್ಲ ಕಾರಣಗಳಿಂದ ಎಥೆನಾಲ್ ಪರಿಸರಸ್ನೇಹಿ ಇಂಧನವೇ ಆದರೂ, ಮೈಲೇಜ್, ಕಾರ್ಯಕ್ಷಮತೆ ಹಾಗೂ ಎಂಜಿನ್‌ನ ಆರೋಗ್ಯದ ದೃಷ್ಟಿಯಿಂದ ಅದು ಒಳ್ಳೆಯ ಆಯ್ಕೆಯಲ್ಲ. ಆದರೆ,ಮಿಥೆನಾಲ್ ಹಾಗಲ್ಲ. ಇದರಲ್ಲಿ ಇಂಗಾಲದ ಒಂದು ಪರಮಾಣು ಮಾತ್ರವೇ ಇರುತ್ತದೆ. ಮಿಕ್ಕಂತೆ, ಜಲಜನಕ 3 ಪರಮಾಣು ಹಾಗೂ ಜಲಜನಕ-ಆಮ್ಲಜನಕದ ಒಂದು ಪರಮಾಣು ಇರುತ್ತವೆ ($CH_3OH$). ಇಲ್ಲಿ ಸ್ಪಷ್ಟವಾಗುವುದೇನೆಂದರೆ, ಮಿಥೆನಾಲ್‌ನಲ್ಲಿ ಇಂಗಾಲದ ಅಂಶ ಕಡಿಮೆ. ಹಾಗಾಗಿ, ಇದನ್ನು ದಹಿಸಿದಾಗ ಅತಿ ಕಡಿಮೆ ಇಂಗಾಲದ ತ್ಯಾಜ್ಯ ಹೊರಬರುತ್ತದೆ.

## ಹೊಸ ವಿಧಾನದ ಶೋಧ

ವಿಚಾರ ಇಲ್ಲಿ ಸಂಪೂರ್ಣವಾಗಿ ಈ ಇಂಧನಗಳ ರಚನೆಯ ಬಗ್ಗೆ ಅಲ್ಲ. ಅದನ್ನು ಉತ್ಪಾದಿಸುವ ಹೊಸ ವಿಧಾನದ ಬಗ್ಗೆ. ಸ್ವಿಟ್ಜರ್ಲೆಂಡ್ ಇಟಿಎಚ್ ಜೂರಿಚ್‌ನ ಕ್ಯಾಟಲಿಸಿಸ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಜೇವಿಯರ್ ಪೆರೇಜ್ ರಾಮೆರಿಜ್ ಅವರ ತಂಡವು ಈ ಸಂಶೋಧನೆಯನ್ನು ಮಾಡಿದೆ. ಬೆಳ್ಳಿಯನ್ನು ಹೋಲುವ 'ಇಂಡಿಯಂ' ಎಂಬ ಲೋಹವೊಂದಿದೆ. ಅದನ್ನು ಬಳಸಿಕೊಂಡು ಅದರ ಪರಮಾಣುಗಳನ್ನು ಇಂಗಾಲದ ಡೈ ಆಕ್ಸೈಡ್ ಜೊತೆಗೆ ಡಿಕ್ಕಿ ಹೊಡೆಸಿ, ಆಗ ಹೊರಹೊಮ್ಮುವ ಪರಮಾಣುಗಳ ಮಿಲನವನ್ನು ಪರಿಶೀಲಿಸಿದ್ದಾರೆ. ಅಚ್ಚರಿ ಎಂಬಂತೆ ಅದು ಬಹುತೇಕ ಮಿಥೆನಾಲ್ ಇಂಧನವನ್ನು ಹೋಲುತ್ತಿದೆ. ತಾವು ಸಂಗ್ರಹಿಸಿದ ಮಿಥೆನಾಲ್ ಅನ್ನು ಅವರು ದಹನ ಕ್ರಿಯೆಗೆ ಒಳಪಡಿಸಿದ್ದು, ಅದು ಬಹುತೇಕ ಶೇ 90ರಷ್ಟು ದಕ್ಷತೆಯಿಂದ ಉರಿದಿದೆ. ಹಾಗಾಗಿ, ಈ ಇಂಧನವು ಕೈಗಾರಿಕೆ ಹಾಗೂ ವಾಹನ ಬಳಕೆಗೆ ಅರ್ಹ ಎಂದು ವಿಜ್ಞಾನಿಗಳು ಘೋಷಿಸಿದ್ದಾರೆ.

## ಹೇಗಿದರ ಉತ್ಪಾದನೆ?

ಸಾಮಾನ್ಯವಾಗಿ ಇಂಧನವೊಂದನ್ನು ಉರಿಸಿದಾಗ ತ್ಯಾಜ್ಯವಾಗಿ ಇಂಗಾಲದ ಡೈ ಆಕ್ಸೈಡ್ ಹೊರಬರುತ್ತದೆ. ಇದರಿಂದ ಅಪಾರ ಪ್ರಮಾಣದ ಪರಿಸರ ಮಾಲಿನ್ಯವಾಗುತ್ತದೆ. ವಾತಾವರಣದಲ್ಲಿ ಈಗಾಗಲೇ ಸಾಕಷ್ಟು ಪ್ರಮಾಣದಲ್ಲಿ ಇಂಗಾಲದ ಡೈ ಆಕ್ಸೈಡ್ ಇದೆ. ಇದನ್ನು ಬಳಸಿಕೊಂಡು ಅದಕ್ಕೆ ಇಂಡಿಯಂ ಲೋಹದ ಪರಮಾಣುಗಳನ್ನು ನಿಯಂತ್ರಿತವಾಗಿ ಡಿಕ್ಕಿ ಹೊಡೆಸಲಾಗುತ್ತದೆ. ಆಗ ಉತ್ಪಾದನೆಯಾಗುವುದೇ ಈ ಹೊಸ ಬಗೆಯ ಇಂಧನ. ಸಾಮಾನ್ಯವಾಗಿ ಇಂಡಿಯಂನಂತಹ ಲೋಹದ ಪರಮಾಣುವನ್ನು ಯಾವುದೇ ಇತರ ಪರಮಾಣು ಅಥವಾ ಪರಮಾಣು ಮಿಶ್ರಣದೊಂದಿಗೆ ಡಿಕ್ಕಿ ಹೊಡೆಸಬಹುದು. ಇಲ್ಲಿ ಇಂಗಾಲದ ಡೈ ಆಕ್ಸೈಡ್ ಅನ್ನೇ ಆಯ್ಕೆ ಮಾಡಿಕೊಂಡಿರುವ ಕಾರಣವೆಂದರೆ ಅದರ ಲಭ್ಯತೆ ಹಾಗೂ ಅದನ್ನು ಬಳಸುವುದರಿಂದ ಭವಿಷ್ಯದಲ್ಲಿ ವಾತಾವರಣದಲ್ಲಿ ಅದರ ಪ್ರಮಾಣವನ್ನು ತಗ್ಗಿಸುವಂತೆ ಮಾಡುವುದು. ಈ ಪ್ರಕ್ರಿಯೆಯು ಈಗ ವಿಜ್ಞಾನಿಗಳ ಪ್ರಯೋಗಾಲಯದಲ್ಲಿ ನಡೆದಿದೆ. ಇದನ್ನು ದೊಡ್ಡ ಪ್ರಮಾಣದಲ್ಲಿ ಕಾರ್ಖಾನೆಗಳಲ್ಲೂ ಉತ್ಪಾದಿಸಬಹುದು ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

## ನೈತಿಕ ಸಮಸ್ಯೆಗಳು ಅಧಿಕ!

ಎಲ್ಲ ಸಂಶೋಧನೆಗಳಿಗೂ ಕೆಲವು ನೈತಿಕ ಇತಿಮಿತಿಗಳಿರುತ್ತವೆ. ಮಿಥೆನಾಲ್ ಅತಿ ಕಡಿಮೆ ಪರಿಸರ ಮಾಲಿನ್ಯ ಉಂಟುಮಾಡುವುದು ನಿಜವಾದರೂ, ಇದು ಸಹಜವಾಗಿಯೇ ವಿಷಕಾರಿ ಅನಿಲ. ಮಿಥೆನಾಲ್ ಅನ್ನು ಉಸಿರಾಡಿದರೆ ತೀವ್ರತರಹ ಆರೋಗ್ಯದ ಸಮಸ್ಯೆಗಳು ಎದುರಾಗಬಹುದು. ಹಾಗಾಗಿ, ಈ ಇಂಧನವನ್ನು ನಿಯಂತ್ರಿತವಾಗಿ ಬಳಸುವುದು ಹೇಗೆ ಎಂಬ ಚರ್ಚೆಗಳು ನಡೆದಿವೆ. ಈ ವಿಧಾನಗಳ ಅಳವಡಿಕೆಯಾದ ಬಳಿಕ, ಈ ಸಂಶೋಧನೆಯು ವಿಜ್ಞಾನಿಗಳ ವಲಯದಲ್ಲಿ ಅಂಗೀಕೃತಗೊಂಡರೆ ಇದರ ಉತ್ಪಾದನಾ ಸೂತ್ರವನ್ನು ಸಾರ್ವಜನಿಕವಾಗಿ ಬಿಡುಗಡೆಗೊಳಿಸುವುದಾಗಿ ವಿಜ್ಞಾನಿಗಳು ಹೇಳಿದ್ದಾರೆ.

ಈಗಾಗಲೇ ಕೈಗಾರಿಕೆಗಳಲ್ಲಿ ಕೆಲವು ಕ್ಷೇತ್ರಗಳಲ್ಲಿ ಮಿಥೆನಾಲ್ ಅನ್ನು ಇಂಧನವಾಗಿ ಬಳಸಲಾಗುತ್ತಿದೆ. ಈ ಅನಿಲಕ್ಕೆ ಬಣ್ಣವಿಲ್ಲ. ಹೊಗೆಯು ಕೆಲವೊಮ್ಮೆ ಕೊಂಚ ಬಿಳಿ ಬಣ್ಣಕ್ಕೂ, ಕೆಲವೊಮ್ಮೆ ಸಂಪೂರ್ಣ ಪಾರದರ್ಶಕವಾಗಿಯೂ ಇರುತ್ತದೆ. ಹಾಗಾಗಿ, ಈ ಅನಿಲದ ಸೋರಿಕೆಯಾದರೆ ಪತ್ತೆಹಚ್ಚುವುದು ಕಷ್ಟ. ಇದೇ ಸಮಸ್ಯೆ ಎಲ್‌ಪಿಜಿಯಲ್ಲೂ ಇದೆ. ಆದರೆ, ಎಲ್‌ಪಿಜಿಗೆ ಕೃತಕವಾಗಿ ವಾಸನೆಯನ್ನು ಸೇರಿಸಲಾಗುತ್ತದೆ. ಅದೇ ರೀತಿ ಮಿಥೆನಾಲ್‌ಗೂ ಸೇರಿಸಬಹುದು ಎಂಬ ಪರಿಹಾರವನ್ನು ಆಗಲೇ ವಿಜ್ಞಾನಿಗಳು ಸೂಚಿಸಿದ್ದಾರೆ.

ಹಾಲಿ ಇರುವ ಇಂಧನಗಳಿಗಿಂತ ಈ ಇಂಧನದ ಉತ್ಪಾದನೆ ಶೇ 50ರಷ್ಟು ಅಗ್ಗವಾಗಲಿದೆ. ಹಾಗಾಗಿ, ಹಣಕಾಸಿನ ದೃಷ್ಟಿಯಿಂದ ಗ್ರಾಹಕರಿಗೆ ಇದು ಅನುಕೂಲಕರವಾದರೂ ಆಗಬಹುದು. ಸುರಕ್ಷಾ ವಿಧಾನಗಳು ಸೂಕ್ತರೀತಿಯಲ್ಲಿ ಪಾಲನೆಯಾದಲ್ಲಿ, ಹಾಲಿ ಇಂಧನ ಸಮಸ್ಯೆಗಳಿಗೆ ಪರಿಹಾರವೂ ಸಿಗಬಹುದು.

## ❖ 'ನಿರ್ದಿಷ್ಟ ಹಣಕಾಸು ವರ್ಷದ ಆದಾಯ ಪ್ರಮಾಣಪತ್ರ ಕಡ್ಡಾಯ'

**ಸಂದರ್ಭ: ಆರ್ಥಿಕವಾಗಿ ದುರ್ಬಲ ವರ್ಗ(ಇಡಬ್ಲ್ಯುಎಸ್) ಕೋಟಾ ಅಡಿ ಮೀಸಲಾತಿ ಕೇಳುವ ಅಭ್ಯರ್ಥಿಯು ನಿಗದಿತ ಗಡುವು ಅಥವಾ ಅದಕ್ಕೂ ಮುಂಚಿನ ದಿನಾಂಕದೊಳಗಾಗಿ ನಿರ್ದಿಷ್ಟ ಹಣಕಾಸು ವರ್ಷಕ್ಕೆ ಸಂಬಂಧಿಸಿ ನಿಗದಿತ ನಮೂನೆಯಲ್ಲಿ ಆದಾಯ ಮತ್ತು ಸ್ವತ್ತುಗಳ ಪ್ರಮಾಣಪತ್ರ ಹೊಂದಿರುವುದು ಕಡ್ಡಾಯ ಎಂದು ಸುಪ್ರೀಂ ಕೋರ್ಟ್ ಹೇಳಿದೆ.**

- ನಿರ್ದಿಷ್ಟ ಹಣಕಾಸು ವರ್ಷಕ್ಕೆ ಸಂಬಂಧಿಸಿದ ಪ್ರಮಾಣಪತ್ರ ಸಲ್ಲಿಸಲು ಹೇಳಿದಾಗ, ಬೇರೊಂದು ವಿತ್ತೀಯ ವರ್ಷದ ಪ್ರಮಾಣಪತ್ರ ಸಲ್ಲಿಸಿದಲ್ಲಿ ಅದು ಮೀಸಲಾತಿ ಕೇಳುವ ಅಭ್ಯರ್ಥಿಯ ಅರ್ಹತೆಯನ್ನೇ ಪ್ರಶ್ನಿಸುವಂತೆ ಮಾಡಲಿದೆ ಎಂದು ಹೇಳಿದೆ.
- ನ್ಯಾಯಮೂರ್ತಿಗಳಾದ ಮನೋಜ್ ಮಿಶ್ರಾ ಹಾಗೂ ಪಿ.ಬಿ.ವರಾಳೆ ಅವರು ಇದ್ದ ಪೀಠವು ಈ ಕುರಿತ ಅರ್ಜಿ ವಿಚಾರಣೆ ವೇಳೆ ಈ ಮಾತು ಹೇಳಿದೆ.
- ಅಲಹಾಬಾದ್ ಹೈಕೋರ್ಟ್ನ ವಿಭಾಗೀಯ ಪೀಠವು 2023ರ ಜನವರಿ 9ರಂದು ನೀಡಿದ್ದ ಆದೇಶ ಪ್ರಶ್ನಿಸಿ ಪೂನಂ ದ್ವಿವೇದಿ ಹಾಗೂ ಇತರರು ಸಲ್ಲಿಸಿದ್ದ ಮೇಲ್ಮನವಿಗಳನ್ನು ಪೀಠವು ವಜಾಗೊಳಿಸಿದೆ.
- ಅರ್ಜಿದಾರರನ್ನು ಆರೋಗ್ಯ ಕಾರ್ಯಕರ್ತೆಯರ ಹುದ್ದೆಗೆ ಪರಿಗಣಿಸುವಂತೆ ಹೈಕೋರ್ಟ್ ಏಕಸದಸ್ಯ ಪೀಠವೊಂದು ಉತ್ತರ ಪ್ರದೇಶದ ಅಧೀನ ಸೇವೆಗಳ ನೇಮಕಾತಿ ಆಯೋಗಕ್ಕೆ ನೀಡಿದ್ದ ಆದೇಶವನ್ನು ಕೂಡ ಸುಪ್ರೀಂ ಕೋರ್ಟ್ ರದ್ದು ಮಾಡಿದೆ.
- ಈ ಪ್ರಕರಣದಲ್ಲಿ ಮೇಲ್ಮನವಿದಾರರು ನಿಗದಿತ ನಮೂನೆಯಲ್ಲಿರುವ ಅಗತ್ಯ ಪ್ರಮಾಣಪತ್ರಗಳನ್ನು ಕಟ್ ಆಫ್ ದಿನದಂದು ಹೊಂದಿರಲಿಲ್ಲ. ಹೀಗಾಗಿ ಅವರಿಗೆ ಯಾವುದೇ ಪರಿಹಾರ ನೀಡಲು ಸಾಧ್ಯ ಇಲ್ಲ ಎಂದು ಏಪ್ರಿಲ್ 10ರಂದು ನೀಡಿರುವ ತೀರ್ಪಿನಲ್ಲಿ ನ್ಯಾಯಪೀಠ ಸ್ಪಷ್ಟಪಡಿಸಿದೆ.

## ❖ ಸಂಬಂಧ ಸುಧಾರಣೆಯಲ್ಲಿ ಬದಲಾವಣೆ ಇಲ್ಲ: ಚೀನಾ

**ಸಂದರ್ಭ: ಭಾರತದೊಂದಿಗಿನ ಸಂಬಂಧ ಸುಧಾರಿಸುವ ನಿಟ್ಟಿನಲ್ಲಿ ಚೀನಾದ ನೀತಿ ಬದಲಾಗಿಲ್ಲ ಎಂದು ಚೀನಾ ತಿಳಿಸಿದೆ. ಆದರೆ, ಅರುಣಾಚಲಪ್ರದೇಶದ ಹಲವು ಸ್ಥಳಗಳಿಗೆ ಹೊಸ ಹೆಸರು ನಾಮಕರಣ ಮಾಡಿರುವುದನ್ನು ಬಲವಾಗಿ ಸಮರ್ಥಿಸಿಕೊಂಡಿದೆ.**

- 'ಭಾರತದ ಭೂಪ್ರದೇಶಗಳಿಗೆ ಕಾಲ್ಪನಿಕ ಹೆಸರುಗಳನ್ನು ನಾಮಕರಣ ಮಾಡಿದ ಚೀನಾದ ನಿಲುವನ್ನು ಭಾರತವು ಬಲವಾಗಿ ಖಂಡಿಸಿತ್ತು. ಆಧಾರರಹಿತವಾಗಿ ಇಂತಹ ನಿರೂಪಣೆಗಳನ್ನು ಸೃಷ್ಟಿಸುವುದರಿಂದ. ನಿರಾಕರಿಸಲಾಗದ ವಾಸ್ತವವನ್ನು ಬದಲಾಯಿಸಲು ಸಾಧ್ಯವಿಲ್ಲ. ಇದರಿಂದ ಉಭಯ ರಾಷ್ಟ್ರಗಳ ನಡುವಿನ ಬಾಂಧವ್ಯದ ಮೇಲೂ ಪರಿಣಾಮ ಬೀರಲಿದೆ' ಎಂದು ಭಾರತದ ವಿದೇಶಾಂಗ ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದರು.
- ಇದಕ್ಕೆ ಪ್ರತಿಕ್ರಿಯಿಸಿದ ಚೀನಾ ವಿದೇಶಾಂಗ ಇಲಾಖೆ ವಕ್ತಾರ ಗುವೊ ಜಿಯಕುನ್, 'ಝುಂಗ್ನ್ಯಾನ್ ಪ್ರದೇಶವು ಚೀನಾದ ಭೂಪ್ರದೇಶವಾಗಿದೆ. ಭಾರತವು ಅಕ್ರಮವಾಗಿ ಸ್ಥಾಪಿಸಿರುವ ಅರುಣಾಚಲ ಪ್ರದೇಶವನ್ನು ಚೀನಾವು ಮಾನ್ಯ ಮಾಡುವುದಿಲ್ಲ' ಎಂದು ತಿಳಿಸಿದ್ದಾರೆ.
- ಅರುಣಾಚಲಪ್ರದೇಶ ರಾಜ್ಯಕ್ಕೆ ಚೀನಾವು ಝುಂಗ್ನ್ಯಾನ್ ಎಂದೇ ಕರೆಯುತ್ತದೆ. ಈ ಭಾಗವು ಟಿಬೆಟ್‌ನ ದಕ್ಷಿಣ ಭಾಗ ಎಂಬುದು ಚೀನಾದ ವಾದ.
- 'ಝುಂಗ್ನ್ಯಾನ್ ಪ್ರದೇಶದ ಕೆಲವು ಸ್ಥಳಗಳಿಗೆ ಪ್ರಮಾಣಿತವಾದ ಹೆಸರು ನಾಮಕರಣ ಮಾಡಲು ಚೀನಾ ಸಾರ್ವಭೌಮ ಅಧಿಕಾರ ಹೊಂದಿದೆ. ಚೀನಾ ಹಾಗೂ ಭಾರತದ ನಡುವಿನ ಸಂಬಂಧವು ಸಾಮಾನ್ಯವಾಗಿ ಸ್ಥಿರವಾಗಿದೆ. ಈ ವಿಚಾರದಲ್ಲಿ ಚೀನಾದ ಬದ್ಧತೆಯು ಸುಧಾರಣೆಯಾಗುತ್ತಿದ್ದು, ಬೆಳವಣಿಗೆಯಾಗುತ್ತಿದೆ ಉಭಯ ರಾಷ್ಟ್ರಗಳು ಇದೇ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದು ದ್ವಿಪಕ್ಷೀಯ ಸಂಬಂಧ ವೃದ್ಧಿ ನಿಟ್ಟಿನಲ್ಲಿ ಹೆಚ್ಚು ಅನುಕೂಲಕರವಾಗಿ ಕೆಲಸ ಮಾಡುತ್ತಿವೆ' ಎಂದು ತಿಳಿಸಿದ್ದಾರೆ.

Dr Rajkumar's KAS Academy

# ಕ್ಯಾಂಡಿಡೇಟ್ಸ್ ಪ್ರಶಸ್ತಿ ಗೆದ್ದ ಸಿಂದರೋವ್

## ವಿಶ್ವ ಚಾಂಪಿಯನ್ ಪಟ್ಟ: ಡಿ. ಗುಕೇಶ್‌ಗೆ ಎದುರಾಳಿ

## ● ವರ್ಷದ ಕೊನೆಯಲ್ಲಿ ಸೆಣಸಾಟ

ಪಾಫೋಸ್ (ಸೈಪ್ರಸ್): ಇನ್ನೂ ಒಂದು ಸುತ್ತು ಉಳಿದಿರುವಂತೆ ಉಜ್ಬೇಕಿಸ್ತಾನದ ಆಟಗಾರ ಜಾವೊಖಿರ್ ಸಿಂದರೋವ್ ಅವರು ಮಂಗಳವಾರ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡರು. ಆ ಮೂಲಕ ವಿಶ್ವ ಚಾಂಪಿಯನ್ ಗುಕೇಶ್ ಅವರಿಗೆ ಚಾಲೆಂಜರ್ ಆಗುವ ಅರ್ಹತೆ ಸಂಪಾದಿಸಿದರು.

ವಿಶ್ವ ಚೆಸ್ ಪಟ್ಟಕ್ಕೆ ಈ ವರ್ಷದ ಕೊನೆಯಲ್ಲಿ ಸೆಣಸಾಟ ನಡೆಯಲಿದೆ. ಇದರ ತಾಣ, ದಿನಾಂಕ ಅಂತಿಮಗೊಂಡಿಲ್ಲ. ಗುಕೇಶ್ 18ನೇ ವಯಸ್ಸಿನಲ್ಲಿ(2024ರ ಡಿಸೆಂಬರ್) ಅತಿ ಕಿರಿಯ ವಿಶ್ವ ಚಾಂಪಿಯನ್ ಆಗಿದ್ದರು.

ವಿಶ್ವಕಪ್ ಚಾಂಪಿಯನ್ ಸಹ ಆಗಿರುವ ಸಿಂದರೋವ್ 13ನೇ ಸುತ್ತಿನಲ್ಲಿ ನೆದರ್ಲೆಂಡ್ಸ್ ಅನಿಶ್ ಗಿರಿ ಅವರ ಜೊತೆ ಹೋರಾಟ ನಡೆಸಿ 58 ನಡೆಗಳಲ್ಲಿ ಡ್ರಾ ಮಾಡಿಕೊಂಡರು. 20 ವರ್ಷ ವಯಸ್ಸಿನ ಸಿಂದರೋವ್ ಈ ಟೂರ್ನಿಯಲ್ಲಿ ಅಮೋಘ ಪ್ರದರ್ಶನದೊಡನೆ ಅಜೇಯರಾಗಿ ಉಳಿದರು. ಅವರು 6 ಪಂದ್ಯ ಗೆದ್ದು, ಏಳು ಡ್ರಾ ಮಾಡಿಕೊಂಡು ಒಟ್ಟು 9.5 ಅಂಕ ಕಲೆಹಾಕಿದರೆ, ಎರಡನೇ ಸ್ಥಾನದಲ್ಲಿರುವ ಡಚ್ ಗ್ರ್ಯಾಂಡ್‌ಮಾಸ್ಟರ್ 7.5 ಅಂಕ ಸಂಗ್ರಹಿಸಿದ್ದಾರೆ.

ಅಮೆರಿಕದ ಫ್ಯಾಬಿಯಾನೊ ಕರುವಾನ (6.5) ಮತ್ತು ಭಾರತದ ಪ್ರಜ್ಞಾನಂದ (5.5) ನಡುವಣ ಪಂದ್ಯ 43 ನಡೆಗಳಲ್ಲಿ ಡ್ರಾ ಆಯಿತು. ಪ್ರಜ್ಞಾನಂದ ಕೊನೆಯ ಸುತ್ತಿನಲ್ಲಿ ಅಮೆರಿಕದ ಹಿಕಾರು ನಕಾಮುರ ಅವರನ್ನು ಎದುರಿಸಲಿದ್ದಾರೆ.

ಓಪನ್ ವಿಭಾಗದ ನಾಲ್ಕೂ ಪಂದ್ಯಗಳು ಡ್ರಾ ಆದವು. ಚೀನಾದ ವೀ ಯಿ (6.5) ಮತ್ತು ರಷ್ಯಾದ ಆ್ಯಂಡ್ರಿ ಇಸಿಪೆಂಕೊ (4.5) ನಡುವಣ, ಅಮೆರಿಕದ ಹಿಕಾರು ನಕಾಮುರ (6) ಮತ್ತು ಜರ್ಮನಿಯ ಮಥಾಯಸ್ ಬ್ಲೂಬಾಮ್ (6) ನಡುವಣ ಪಂದ್ಯಗಳೂ ಡ್ರಾ ಆದವು.

Publication Date
15/04/2026





ಭಾರತದ ವೈಶಾಲಿ ರಮೇಶಬಾಬು ಹಾಗೂ ಉಜ್ಬೇಕಿಸ್ತಾನದ ಜಾವೊಖಿರ್ ಸಿಂದರೋವ್ ಫಿಡೆ ಚಿತ್ರಗಳು

### ಪ್ರಶಸ್ತಿ ಸನಿಹ ವೈಶಾಲಿ

ಮಹಿಳೆಯರ ವಿಭಾಗದಲ್ಲಿ ಭಾರತದ ವೈಶಾಲಿ ರಮೇಶಬಾಬು ಮತ್ತು ಕಜಾಕಸ್ತಾನದ ಬಿಬಿಸಾರ ಅಸೌಬಯೇವಾ ಅವರು ತಲಾ 7.5 ಅಂಕ ಗಳಿಸಿ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಬುಧವಾರ ಕೊನೆಯ ಸುತ್ತಿನ ಪಂದ್ಯಗಳು ನಿಗದಿಯಾಗಿವೆ.

ವೈಶಾಲಿ ಅವರು 13ನೇ ಸುತ್ತಿನಲ್ಲಿ ಚೀನಾದ ತಾನ್ ಝೊಂಗ್‌ಇ (5.5) ಜೊತೆ ಡ್ರಾ ಮಾಡಿಕೊಂಡರು. ಈ ವಿಭಾಗದ ಇತರ ಮೂರು ಪಂದ್ಯಗಳಲ್ಲಿ ನಿರ್ಣಾಯಕ ಫಲಿತಾಂಶಗಳು ದಾಖಲಾದವು.

12ನೇ ಸುತ್ತಿನಲ್ಲಿ ವೈಶಾಲಿ ಜೊತೆ ಅಗ್ರ ಸ್ಥಾನ ಹಂಚಿಕೊಂಡಿದ್ದ ಚೀನಾದ ಝು ಜಿನೆರ್ (7), ರಷ್ಯನ್ ಆಟಗಾರ್ತಿ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ ಅವರಿಗೆ ಮಣಿದರು.

Presented by

## ❖ ಅಭಿಷೇಕ್, ದೀಪ್ತಿ ಸೇರಿ ಭಾರತದ ಏಳು ಕ್ರಿಕೆಟಿಗರಿಗೆ 'ವಿಸ್ಡನ್' ಪ್ರಶಸ್ತಿ

**ಸಂದರ್ಭ: 'ವಿಸ್ಡನ್ ಅಲ್ಮನಾಕ್-2026' ಪ್ರಶಸ್ತಿ ವಟ್ಟಿಯಲ್ಲಿ ಭಾರತದ ಕ್ರಿಕೆಟಿಗರು ಪ್ರಾಬಲ್ಯ ಸಾಧಿಸಿದ್ದು, ಒಟ್ಟು 9 ಪ್ರಶಸ್ತಿಗಳ ಪೈಕಿ ಏಳನ್ನು ವಡೆದುಕೊಂಡಿದ್ದಾರೆ.**

- ಅನುಭವಿ ಆಲ್‌ರೌಂಡರ್ ದೀಪ್ತಿ ಶರ್ಮಾ ಅವರು 'ವಿಸ್ಡನ್ ಅಲ್ಮನಾಕ್ ವರ್ಷದ ಕ್ರಿಕೆಟ್ ಆಟಗಾರ್ತಿ' ಹಾಗೂ ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಅವರು 'ವರ್ಷದ ಟಿ20 ಕ್ರಿಕೆಟಿಗ' ಪ್ರಶಸ್ತಿಗೆ ಪಾತ್ರರಾಗಿದ್ದಾರೆ.
- 2025ರ ಋತುವಿನಲ್ಲಿ ಅಭಿಷೇಕ್ ಶರ್ಮಾ ಅವರು ಅವರು 21 ಪಂದ್ಯಗಳಲ್ಲಿ 193ರ ಸ್ಟ್ರೈಕ್‌ರೇಟ್‌ನಲ್ಲಿ 859 ರನ್ ಗಳಿಸಿದ್ದರು. ಅದರಲ್ಲಿ 5 ಅರ್ಧಶತಕಗಳು ಸೇರಿದ್ದವು. ದೀಪ್ತಿ ಶರ್ಮಾ ಅವರು 2025ರ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಒಂಬತ್ತು ವಂದ್ಯಗಳಲ್ಲಿ ಮೂರು ಅರ್ಧಶತಕ ಸಹಿತ 215 ರನ್ ಬಾರಿಸಿದ್ದರು. ಅಲ್ಲದೆ, ಟೂರ್ನಿಯಲ್ಲಿ ಅತಿ ಹೆಚ್ಚು ವಿಕೆಟ್ (22) ಗಳಿಸಿದ್ದರು. ಅವರ ಆಲ್‌ರೌಂಡರ್ ಆಟದ ನೆರವಿನಿಂದ ಭಾರತವು ಮೊದಲ ಬಾರಿ ವಿಶ್ವಕಪ್ ಜಯಿಸಿತ್ತು.
- ಭಾರತ ಟೆಸ್ಟ್ ಮತ್ತು ಏಕದಿನ ತಂಡಗಳ ನಾಯಕ ಶುಭಮನ್ ಗಿಲ್, ವೇಗಿ ಮೊಹಮ್ಮದ್ ಸಿರಾಜ್, ವಿಕೆಟ್ ಕೀಪರ್-ಬ್ಯಾಟರ್ ರಿಷಭ್ ಪಂತ್ ಮತ್ತು ಅನುಭವಿ ಆಲ್‌ರೌಂಡರ್ ರವೀಂದ್ರ ಜಡೇಜ ಅವರನ್ನು 'ವಿಸ್ಡನ್ 5 ಕ್ರಿಕೆಟರ್ಸ್ ಆಫ್ ದಿ ಈಯರ್ ಪ್ರಶಸ್ತಿಗೆ ಹೆಸರಿಸಲಾಗಿದೆ. ಇವರೆಲ್ಲಾ ಕಳೆದ ವರ್ಷ ಇಂಗ್ಲೆಂಡ್‌ನಲ್ಲಿ ನಡೆದಿದ್ದ ಟೆಸ್ಟ್ ಸರಣಿಯಲ್ಲಿ ಗಮನ ಸೆಳೆಯುವ ವುದರ್ಶನ ನೀಡಿದ್ದರು.
- ಪ್ರಶಸ್ತಿ ಪಟ್ಟಿಯಲ್ಲಿ ಇಬ್ಬರು ವಿದೇಶಿ ಆಟಗಾರರು ಸೇರಿದ್ದಾರೆ. ಆಸ್ಟ್ರೇಲಿಯಾದ ವೇಗಿ ಮಿಚಲ್ ಸ್ಟಾರ್ಕ್ ಹಾಗೂ ಇಂಗ್ಲೆಂಡ್ ಬ್ಯಾಟರ್ ಹಸೀಬ್ ಹಮೀದ್ ಅವರು ಕ್ರಮವಾಗಿ ಅತ್ಯುತ್ತಮ ಕ್ರಿಕೆಟಿಗೆ' ಹಾಗೂ 'ವಿಸ್ಡನ್ 5 ಕ್ರಿಕೆಟರ್ಸ್ ಆಫ್ ದಿ ಇಯರ್ ಗೌರವಕ್ಕೆ ಪಾತ್ರರಾಗಿದ್ದಾರೆ.
- ಗಿಲ್ ಅವರು ಇಂಗ್ಲೆಂಡ್ ಪ್ರವಾಸದಲ್ಲಿ ಅದ್ಭುತ ಫಾರ್ಮ್ ನಲ್ಲಿದ್ದರು ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 754 ರನ್‌ಗಳನ್ನು ಗಳಿಸಿದ್ದರು. ಈ ಸರಣಿಯನ್ನು ಭಾರತ 2-2 ಡ್ರಾ ಮಾಡಿಕೊಳ್ಳುವಲ್ಲಿ ಅವರ ಪಾತ್ರ ನಿರ್ಣಾಯಕವಾಗಿತ್ತು

## ❖ ಬೊಕ್ಕಸ: ₹13 ಸಾವಿರ ಕೋಟಿ ನಷ್ಟ

### ರಾಜ್ಯದ ಸ್ವಂತ ತೆರಿಗೆ ಆದಾಯ • ಡಿಸೆಂಬರ್ ಅಂತ್ಯಕ್ಕೆ ಶೇ 68ರಷ್ಟೇ ಗುರಿ ಸಾಧನೆ • 3 ತಿಂಗಳಲ್ಲಿ ₹65,000 ಕೋಟಿ ಸಂಗ್ರಹ ಸವಾಲು

• ಜಯಸಿಂಹ ಆರ್.

ಬೆಂಗಳೂರು: ರಾಜ್ಯ ಸರ್ಕಾರವು ಈ ಆರ್ಥಿಕ ವರ್ಷದಲ್ಲಿ ₹2.03 ಲಕ್ಷ ಕೋಟಿ ಆದಾಯ ಸಂಗ್ರಹಿಸುವ ಗುರಿ ಹಾಕಿಕೊಂಡಿದ್ದು, ಒಂಬತ್ತು ತಿಂಗಳಲ್ಲಿ ₹1.38 ಲಕ್ಷ ಕೋಟಿಯಷ್ಟೇ ಸಂಗ್ರಹವಾಗಿದೆ. ವರ್ಷದ ಅಂತ್ಯಕ್ಕೆ ಒಟ್ಟು ತೆರಿಗೆ ಸಂಗ್ರಹದಲ್ಲಿ ₹9,000 ಕೋಟಿಯಿಂದ ₹13,000 ಕೋಟಿ ಖೋತಾ ಆಗುವ ಅಂದಾಜಿದೆ.

2025ರ ಮಾರ್ಚ್‌ನಲ್ಲಿ ಮಂಡಿಸಲಾಗಿದ್ದ ಬಜೆಟ್‌ನಲ್ಲಿ ಸ್ವಂತ ತೆರಿಗೆ ಮೂಲಗಳಿಂದ ಇಷ್ಟು ಮೊತ್ತದ ಆದಾಯ ಕ್ರೋಡೀಕರಣ ಆಗಬಹುದು ಎಂದು ಅಂದಾಜಿಸಲಾಗಿತ್ತು. ಅದರ ಆಧಾರದಲ್ಲಿ, ಖರ್ಚನ್ನು ಲೆಕ್ಕ ಹಾಕಲಾಗಿತ್ತು.

ಆಸ್ತಿ ಮತ್ತು ದಸ್ತಾವೇಜುಗಳ ನೋಂದಣಿಯಲ್ಲಿನ ಸಮಸ್ಯೆ ಮತ್ತು ಕೇಂದ್ರ ಸರ್ಕಾರವು ಜಿಎಸ್‌ಟಿಯಲ್ಲಿ ಮಾಡಿದ ಬದಲಾವಣೆಯಿಂದಾಗಿ ಗಣನೀಯ ಪ್ರಮಾಣದಲ್ಲಿ ಆದಾಯ ಖೋತಾ ಆಗಿದೆ. ಇವುಗಳ ಮಧ್ಯೆಯೇ ರಾಜ್ಯ ಸರ್ಕಾರವು ಆದಾಯ ಗಳಿಕೆಯಲ್ಲಿ ಶೇ 68ರಷ್ಟು ಗುರಿ ಸಾಧಿಸಿದೆ. ಉಳಿದ ಮೂರು ತಿಂಗಳಲ್ಲಿ ಇನ್ನೂ ₹65,000 ಕೋಟಿ ಸಂಗ್ರಹಿಸುವ ಸವಾಲು ಸರ್ಕಾರದ ಮುಂದಿದ್ದು, ಗರಿಷ್ಠ

Publication Date

**ಆದಾಯ ಲೆಕ್ಕಾಚಾರ: ಏನು, ಎತ್ತ**

**₹2.03** ಲಕ್ಷ ಕೋಟಿ — ತೆರಿಗೆ ರೂಪದ ಆದಾಯ ಸಂಗ್ರಹ ಗುರಿ

**₹1.38** ಲಕ್ಷ ಕೋಟಿ — 2025ರ ಏಪ್ರಿಲ್‌ನಿಂದ ಡಿಸೆಂಬರ್ ಅಂತ್ಯದವರೆಗೆ ಸಂಗ್ರಹವಾದ ಆದಾಯ

**₹65,000** ಕೋಟಿ — 2026ರ ಜನವರಿಯಿಂದ ಮಾರ್ಚ್ ಅಂತ್ಯದವರೆಗೆ ಸಂಗ್ರಹಿಸಬೇಕಿರುವ ಆದಾಯ




₹56,000 ಕೋಟಿಯಷ್ಟೇ ಸಂಗ್ರಹ ಆಗಬಹುದು ಎಂದು ಅಂದಾಜಿಸಲಾಗಿದೆ.

ಈ ಆರ್ಥಿಕ ವರ್ಷದ ಮೊದಲ ಐದು ತಿಂಗಳಲ್ಲಿ ವಾಣಿಜ್ಯ ತೆರಿಗೆ ಇಲಾಖೆಯು ಆದಾಯ ಗಳಿಕೆಯಲ್ಲಿ ಸರಾಸರಿ ಶೇ 16–17ರಷ್ಟು ಪ್ರಗತಿ ಸಾಧಿಸಿತ್ತು. ಆದರೆ, ಜಿಎಸ್‌ಟಿ ಸ್ಲ್ಯಾಬ್‌ಗಳ ಬದಲಾವಣೆಯ ನಂತರ ಈ ಬೆಳವಣಿಗೆ ದರ ಕುಸಿದಿದೆ. ಆರ್ಥಿಕ ಇಲಾಖೆ ಅಧಿಕಾರಿಗಳ ಅಂದಾಜಿನ ಪ್ರಕಾರ ವಾಣಿಜ್ಯ ತೆರಿಗೆ ಸಂಗ್ರಹದಲ್ಲೇ ₹7,000 ಕೋಟಿಯಿಂದ ₹9,000 ಕೋಟಿ ನಷ್ಟ ಆಗಬಹುದು.


'ಮೋಟಾರು ವಾಹನ ತೆರಿಗೆ ಸಂಗ್ರಹದಲ್ಲಿ, ಆಯಾ ತ್ರೈಮಾಸಿಕದ ಅಂತ್ಯಕ್ಕೆ ಸರಾಸರಿ ಶೇ 90–93ರಷ್ಟು ಗುರಿ ಸಾಧಿಸಲಾಗಿದೆ. ಇನ್ನು ಮೂರು ತಿಂಗಳಲ್ಲಿ ಒಟ್ಟು, ₹13,500 ಕೋಟಿಯಷ್ಟು ಮೋಟಾರು ವಾಹನ ತೆರಿಗೆ ಸಂಗ್ರಹವಾಗಬಹುದು ಎಂದು ನಿರೀಕ್ಷಿಸಲಾಗಿದೆ. ಹೀಗಿದ್ದೂ ಗುರಿಯಲ್ಲಿ ಶೇ 10ರಷ್ಟು ಖೋತಾ ಆಗಬಹುದು' ಎಂಬ ಅಂದಾಜು ಸಾರಿಗೆ ಇಲಾಖೆ ಅಧಿಕಾರಿಯೊಬ್ಬರದು.

'ಬಿಯರ್ ಮಾರಾಟದಲ್ಲಿ ಕುಸಿತದ ಮಧ್ಯೆಯೂ ಅಬಕಾರಿ ತೆರಿಗೆಯ ಸಂಗ್ರಹದಲ್ಲಿ ನಿರೀಕ್ಷಿತ ಮಟ್ಟದ ಬೆಳವಣಿಗೆ ದಾಖಲಾಗಿದೆ. ಇಲಾಖೆಯು ಪ್ರತಿ ತಿಂಗಳು ಸರಾಸರಿ ₹3,500 ಕೋಟಿ ಆದಾಯ ಗಳಿಸಿದೆ. ಒಂಬತ್ತು ತಿಂಗಳಲ್ಲಿ ಸುಮಾರು ₹30,000 ಕೋಟಿ ಸಂಗ್ರಹಿಸಲಾಗಿದೆ. ಉಳಿದ ಮೂರು ತಿಂಗಳಲ್ಲಿ ಬಜೆಟ್ ಗುರಿ ದಾಟುತ್ತೇವೆ. ಸನ್ನದುಗಳ ಹರಾಜಿನ ಮೂಲಕ ₹40,000 ಕೋಟಿಯ ಗುರಿ ಮುಟ್ಟುತ್ತೇವೆ' ಎಂದು ಅಬಕಾರಿ ಇಲಾಖೆಯ ಅಧಿಕಾರಿ ಒಬ್ಬರು ವಿಶ್ವಾಸ ವ್ಯಕ್ತಪಡಿಸಿದರು.

ಈ ಒಂಬತ್ತು ತಿಂಗಳಲ್ಲಿ ಕಡಿಮೆ ಪ್ರಗತಿ ಸಾಧಿಸಿರುವುದು ನೋಂದಣಿ ಮತ್ತು ಮುದ್ರಾಂಕ ಇಲಾಖೆ. ಒಟ್ಟು ಗುರಿಯಲ್ಲಿ ಶೇ 65ರಷ್ಟು ಮಾತ್ರ ಆದಾಯ ಸಂಗ್ರಹವಾಗಿದೆ. ಕಾವೇರಿ ತಂತ್ರಾಂಶದಲ್ಲಿನ ಸಮಸ್ಯೆಗಳು, ಕಾವೇರಿ 2.0 ಮತ್ತು ಇ-ಸ್ವತ್ತು ಜಾರಿಯ ನಂತರ ನೋಂದಣಿ ಕೆಲಸ ನಿಧಾನವಾಗುತ್ತಿದೆ. ಸರ್ವರ್ ಸಮಸ್ಯೆಯಿಂದ ನೋಂದಣಿಯಾಗುತ್ತಿಲ್ಲ. ಇದರಿಂದಾಗಿ ನಿರೀಕ್ಷಿತ ಪ್ರಗತಿ ಸಾಧ್ಯವಾಗಿಲ್ಲ. ಆರ್ಥಿಕ ವರ್ಷಾಂತ್ಯದ ವೇಳೆಗೆ ₹24,000 ಕೋಟಿಯಷ್ಟು ಆದಾಯ ಸಂಗ್ರಹವಾಗಬಹುದು ಎಂಬುದು ಇಲಾಖೆಯ ಅಧಿಕಾರಿಯೊಬ್ಬರ ಅಂದಾಜು.

ಆರ್ಥಿಕ ಇಲಾಖೆ ಅಧಿಕಾರಿಗಳ ಪ್ರಕಾರ ಮೋಟಾರು ವಾಹನ ತೆರಿಗೆ, ನೋಂದಣಿ ಮತ್ತು ಮುದ್ರಾಂಕ ಶುಲ್ಕದಿಂದಲೇ ಸುಮಾರು ₹5,000 ಕೋಟಿ ಆದಾಯ ಖೋತಾ ಆಗಲಿದೆ. ಕೇಂದ್ರ ಸರ್ಕಾರದ ಸಹಾಯಾನುದಾನವೂ ಗಣನೀಯ ಪ್ರಮಾಣದಲ್ಲಿ ಕಡಿಮೆ ಆಗಿರುವುದರಿಂದ, ರಾಜ್ಯವು ತುಸು ಆರ್ಥಿಕ ಬಿಕ್ಕಟ್ಟು ಎದುರಿಸಬೇಕಾಗುತ್ತದೆ.

- ಬಿಯರ್ ಮಾರಾಟ ಕುಸಿತದ ಮಧ್ಯೆಯೂ ಅಬಕಾರಿ ಮೂಲದ ಆದಾಯ ಸಂಗ್ರಹದಲ್ಲಿ ನಿರೀಕ್ಷಿತ ಮಟ್ಟದ ಪ್ರಗತಿ
- ಮೋಟಾರು ವಾಹನ ತೆರಿಗೆ ಸಂಗ್ರಹದಲ್ಲಿ ಶೇ 10ರಷ್ಟು ಖೋತಾ ಸಾಧ್ಯತೆ
- ಕಾವೇರಿ2.0, ಇ-ಸ್ವತ್ತು ಜಾರಿಯಿಂದ ನೋಂದಣಿ ಮತ್ತು ಮುದ್ರಾಂಕ ಮೂಲದ ಆದಾಯದಲ್ಲಿ ಕುಂಠಿತ ಪ್ರಗತಿ
- ಜಿಎಸ್‌ಟಿ ಸ್ಲ್ಯಾಬ್‌ಗಳ ಬದಲಾವಣೆಯಿಂದ ವಾಣಿಜ್ಯ ತೆರಿಗೆ ಸಂಗ್ರಹದಲ್ಲಿ ಭಾರಿ ಕುಸಿತ




## ❖ 'ನೋಂದಣಿಗಷ್ಟೇ ಪೌರತ್ವ ದೃಢೀಕರಣ'

**ಸಂದರ್ಭ: 'ಮತದಾರರನ್ನು ನೋಂದಣಿ ಮಾಡುವ ಉದ್ದೇಶದಿಂದ ಮಾತ್ರ ಅವರ ಪೌರತ್ವವನ್ನು ನಿರ್ಧರಿಸಬ-ಹುದು. ಯಾರನ್ನಾದರೂ ಗಡಿಪಾರು ಮಾಡಬಹುದೇ ಎಂಬುದನ್ನು ನಾವು ನಿರ್ಧರಿಸಲು ಸಾಧ್ಯವಿಲ್ಲ' ಎಂದು ಚುನಾವಣಾ ಆಯೋಗವು (ಇ.ಸಿ) ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.**

- ಚುನಾವಣಾ ಆಯೋಗದ ಪರ ಹಾಜರಾದ ವಕೀಲ ರಾಕೇಶ್ ದ್ವಿವೇದಿ ಅವರು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠಕ್ಕೆ ಈ ವಿಷಯ ತಿಳಿಸಿದರು.
- ವಿವಿಧ ರಾಜ್ಯಗಳಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಗೆ ಸಂಬಂಧಿಸಿದಂತೆ ಚುನಾವಣಾ ಆಯೋಗದ ಅಧಿಕಾರದ ವ್ಯಾಪ್ತಿಯನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ಅಂತಿಮ ವಿಚಾರಣೆಯನ್ನು ಪೀಠವು ಪುನರಾರಂಭಿಸಿದೆ.
- ಆಯೋಗ ನಡೆಸುತ್ತಿರುವ ಎಸ್‌ಐಆರ್ ಪ್ರಕ್ರಿಯೆಯನ್ನು ಸಮರ್ಥಿಸಲು ದ್ವಿವೇದಿ ಅವರು ವಿಚಾರಣೆಯ ಆರಂಭದಲ್ಲಿ ಸಂವಿಧಾನದ 326ನೇ ವಿಧಿಯನ್ನು ಉಲ್ಲೇಖಿಸಿದರು. ಚುನಾವಣೆಯು ವಯಸ್ಕರ ಮತಾಧಿಕಾರವನ್ನು ವಿಧಿಯು ಸಾರುತ್ತದೆ ಎಂದರು. ಆಧರಿಸಿರಬೇಕು ಎಂಬುದನ್ನು 326ನೇ 'ವಯಸ್ಕರ ಮತದಾನದ ಹಕ್ಕು ಮೂರು ವಿಭಿನ್ನ ಅಂಶಗಳನ್ನು ಒಳಗೊಂಡಿದೆ' ಎಂದು ಹೇಳಿದರು.
- ಅಲ್ಲದೇ 'ಮತದಾರರ ನೋಂದಣಿ ಹಂತದಲ್ಲಿ ಇವೆಲ್ಲವನ್ನೂ ದೃಢಪಡಿಸಬೇಕು. ಈ ಮೂರೂ ಷರತ್ತು. ಗಳನ್ನು ಪೂರೈಸದ ಹೊರತು, ಒಬ್ಬರು ಮತದಾರರಾಗಿ ನೋಂದಾಯಿಸಲು ಅರ್ಹರಾಗಿರುವುದಿಲ್ಲ' ಎಂದು ದ್ವಿವೇದಿ ವಾದಿಸಿದರು.
- ಒಬ್ಬ ವ್ಯಕ್ತಿಯ ಪೌರತ್ವ ದೃಢಪಡದಿ, ದ್ದರೂ ಆತನನ್ನು ಮತದಾರರ ಪಟ್ಟಿಯಲ್ಲಿ ಸೇರಿಸಿದರೆ, ಅದು ಸಂವಿಧಾನದ ಆಶಯಕ್ಕೆ ವಿರುದ್ಧವಾಗುತ್ತದೆ ಎಂದು ಹೇಳಿದರು.

- ಅರ್ಜಿದಾರರಲ್ಲಿ ಒಬ್ಬರಾದ 'ಅಸೋಸಿಯೇಷನ್ ಆಫ್ ಡೆಮಾಕ್ರಟಿಕ್ ರಿಫಾರ್ಮ್ಸ್' (ಎಡಿಆರ್) ಪರ ಹಾಜರಾದ ವಕೀಲ ಪ್ರಶಾಂತ್ ಭೂಷಣ್, 'ಮತದಾನಕ್ಕೆ ಪೌರತ್ವವು ಪೂರ್ವಭಾವಿ ಷರತ್ತು ಎಂಬುದು ನಿರ್ವಿವಾದ, ಆದರೆ, ಪೌರತ್ವವನ್ನು ನಿರ್ಧರಿಸುವ ಅಧಿಕಾರ ಚುನಾವಣಾ ಆಯೋಗಕ್ಕೆ ಇದೆಯೇ ಎಂಬುದು ಪ್ರಮುಖ ಪ್ರಶ್ನೆಯಾಗಿದೆ' ಎಂದರು.
- ಅದಕ್ಕೆ ಸಿಜೆಐ, 'ನಾಗರಿಕರನ್ನು ಗುರುತಿಸುವುದಷ್ಟೇ ಆಯೋಗದ ಕೆಲಸ: ಪೌರತ್ವವನ್ನು ಅದರ ವಿಶಾಲ ಅರ್ಥದಲ್ಲಿ ನಿರ್ಣಯಿಸುವುದು ಅಲ್ಲ' ಎಂದರು.
- ಈ ವಿಚಾರದಲ್ಲಿ ಚುನಾವಣಾ ಆಯೋಗವು ಸೀಮಿತ ಅಧಿಕಾರವನ್ನು ಹೊಂದಿದೆ. ಮತದಾರರಾಗಿ ನೋಂದಣಿ ಮಾಡಿಕೊಳ್ಳಲು ಮಾತ್ರ ಆಯೋಗವು ಪೌರತ್ವವನ್ನು ನಿರ್ಧರಿಸುತ್ತದೆ. ನಾವು ಯಾರನ್ನೂ ಗಡಿಪಾರು ಮಾಡಲು ಸಾಧ್ಯವಿಲ್ಲ ಅಥವಾಭಾರತದಲ್ಲಿನೆಲಸಲು ವ್ಯಕ್ತಿಗೆ ವೀಸಾ ಇದೆಯೇ ಎಂಬುದನ್ನು ನಿರ್ಧರಿಸಲು ಸಾಧ್ಯವಿಲ್ಲ. ಆ ವಿಷಯ ನಮ್ಮ ವ್ಯಾಪ್ತಿಗೆ ಬರುವುದಿಲ್ಲ' ಎಂದು ದ್ವಿವೇದಿಸ್ಪಷ್ಟಪಡಿಸಿದರು.
- ಚುನಾವಣಾ ಆಯೋಗವು ಪೌರತ್ವವನ್ನು ನೀಡುವ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲದಿದ್ದರೂ ಮತದಾರರ ಪಟ್ಟಿಯಲ್ಲಿ ನೋಂದಣಿ ಮಾಡಿಕೊಳ್ಳುವ ವ್ಯಕ್ತಿ ನಿಜವಾಗಿಯೂ ಈ ದೇಶದ ಪ್ರಜೆಯೇ ಎಂಬುದನ್ನು ಪರಿಶೀಲಿಸುವ ಅಧಿಕಾರ ಹೊಂದಿದೆ ಎಂದು ಹೇಳಿದ ಪೀಠ, ವಿಚಾರಣೆಯನ್ನು ಜನವರಿ 20ಕ್ಕೆ ಮುಂದೂಡಿತು.

## ❖ ಕಡಲೆಗೆ ಬೆಂಬಲ ಬೆಲ್ಲೆ: ಕೇಂದ್ರಕ್ಕೆ ಸಿ.ಎಂ ಪತ್ರ

**ಸಂದರ್ಭ: ಮಾರುಕಟ್ಟೆಯಲ್ಲಿ ದರ ಕುಸಿತದಿಂದ ಸಂಕಷ್ಟದಲ್ಲಿ ರುವ ಕಡಲೆ ಬೆಳೆಗಾರರ ನೆರವಿಗಾಗಿ ಕೂಡಲೇ ಬೆಂಬಲ ಬೆಲೆಯಡಿ ಖರೀದಿ ಕೇಂದ್ರ ಆರಂಭಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.**

- 'ಕರ್ನಾಟಕದ ಪ್ರಮುಖ ದ್ವಿದಳ ಧಾನ್ಯ ಬೆಳೆಗಳಲ್ಲಿ ಕಡಲೆ ಒಂದಾಗಿದೆ. 9.24 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದ್ದು, 6.27 ಲಕ್ಷ ಟನ್ ಉತ್ಪಾದನೆ ನಿರೀಕ್ಷಿಸಲಾಗಿದೆ. ಧಾರವಾಡ, ಗದಗ, ಬೆಳಗಾವಿ, ವಿಜಯಪುರ, ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ಚಿತ್ರದುರ್ಗ, ಬಾಗಲಕೋಟೆ, ದಾವಣಗೆರೆ, ಚಿಕ್ಕಮಗಳೂರು ಮುಂತಾದ ಪ್ರದೇಶಗಳ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಇದು ಆದಾಯದ ಮೂಲವಾಗಿದೆ. ಅನಿಶ್ಚಿತ ಹವಾಮಾನ ಪರಿಸ್ಥಿತಿಗಳ ಬಳಿಕವೂ ಅನೇಕ ತಿಂಗಳ ಕಠಿಣ ಪರಿಶ್ರಮದ ಮೂಲಕ ಕಡಲೆ ಫಸಲು ರೈತರ ಕೈ ಸೇರುತ್ತಿದೆ. ಆದರೆ, ಮಾರುಕಟ್ಟೆಯಲ್ಲಿ ಬೆಲೆ ಕುಸಿತವಾಗಿ ರೈತರಿಗೆ. ಅನ್ಯಾಯವಾಗುತ್ತಿದೆ' ಎಂದು ಪತ್ರದಲ್ಲಿ ಅವರು ವಿವರಿಸಿದ್ದಾರೆ.

### ಭಾರತ–ಐರೋಪ್ಯ ಒಕ್ಕೂಟ ಎಫ್‌ಟಿಎ ಸನ್ನಿಹಿತ

# ಸರಿದೂಗುವುದೇ ಟ್ರಂಪ್ ಸುಂಕ ಹೇರಿಕೆಯ ನಷ್ಟ?

**ಡೊನಾಲ್ಡ್ ಟ್ರಂಪ್ ಅವರು ಹೆಚ್ಚುವರಿ ಸುಂಕ ಹೇರಿದ ನಂತರ ಭಾರತ–ಅಮೆರಿಕ ಸಂಬಂಧ ಹದಗೆಟ್ಟಿದೆ. ಉಭಯ ದೇಶಗಳಿಗೆ ವ್ಯಾಪಾರ ಒಪ್ಪಂದದ ಮಾತುಕತೆಯನ್ನು ಅಂತಿಮಗೊಳಿಸಲು ಇನ್ನೂ ಸಾಧ್ಯವಾಗಿಲ್ಲ. ಈ ಮಧ್ಯೆ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲು ಭಾರತ ಮತ್ತು ಐರೋಪ್ಯ ಒಕ್ಕೂಟ ಸಜ್ಜುಗೊಂಡಿವೆ. ಇದೇ 27ರಂದು ಉಭಯ ಪಕ್ಷಗಳೂ ಒಪ್ಪಂದಕ್ಕೆ ಸಹಿ ಹಾಕಲಿವೆ ಎಂದು ಹೇಳಲಾಗಿದೆ. ಟ್ರಂಪ್ ಸುಂಕ ರಂಪಾಟವು ಭಾರತ ಮಾತ್ರವಲ್ಲದೆ ಜಾಗತಿಕ ವ್ಯಾಪಾರದ ಮೇಲೆ ಪರಿಣಾಮ ಬೀರಿರುವ ಸಂದರ್ಭದಲ್ಲಿ ಈ ಒಪ್ಪಂದಕ್ಕೆ ಹೆಚ್ಚಿನ ಪ್ರಾಮುಖ್ಯ ಇದೆ**

ಪ್ರಜಾವಾಣಿ ವಾರ್ತೆ

ಭಾರತ ಮತ್ತು 27 ರಾಷ್ಟ್ರಗಳನ್ನೊಳಗೊಂಡ ಐರೋಪ್ಯ ಒಕ್ಕೂಟದ ನಡುವೆ ಮುಕ್ತ ವ್ಯಾಪಾರ ಒಪ್ಪಂದ (ಎಫ್‌ಟಿಎ) ನಡೆಯುವುದು ನಿಚ್ಚಳವಾಗಿದೆ. ಇದೇ 27ರಂದು ನವದೆಹಲಿಯಲ್ಲಿ ನಡೆಯಲಿರುವ ಭಾರತ–ಐರೋಪ್ಯ ಒಕ್ಕೂಟ ಶೃಂಗಸಭೆಯಲ್ಲಿ ಒಪ್ಪಂದಕ್ಕೆ ಸಹಿ ಬೀಳುವುದು ಬಹುತೇಕ ಖಚಿತವಾಗಿದೆ. ಐರೋಪ್ಯ ಕಮಿಷನ್‌ನ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ ಮತ್ತು ಐರೋಪ್ಯ ಕೌನ್ಸಿಲ್‌ನ ಅಧ್ಯಕ್ಷ ಆ್ಯಂಟೋನಿಯೊ ಕೋಸ್ಟಾ ಅವರು 26ರಂದು ನಡೆಯಲಿರುವ ಗಣರಾಜ್ಯೋತ್ಸವ ಸಮಾರಂಭದಲ್ಲಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮರು ದಿನವೇ ಶೃಂಗಸಭೆ ಆರಂಭವಾಗಲಿದೆ.



## ಮಹತ್ವ ಏಕೆ?

ಮುಕ್ತ ವ್ಯಾಪಾರ ಒಪ್ಪಂದಕ್ಕಾಗಿ ಭಾರತ ಮತ್ತು ಐರೋಪ್ಯ ಒಕ್ಕೂಟಗಳು 2007ರಲ್ಲೇ ಮಾತುಕತೆ ಆರಂಭಿಸಿದ್ದವು. ಆದರೆ, ಮುಕ್ತ ಮಾರುಕಟ್ಟೆಯ ಲಭ್ಯತೆ ಯಾವ ಪ್ರಮಾಣದಲ್ಲಿ ಇರಬೇಕು ಎಂಬುದೂ ಸೇರಿದಂತೆ ವಿವಿಧ ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಉಂಟಾಗಿದ್ದರಿಂದ 2013ರಲ್ಲಿ ಮಾತುಕತೆ ನಿಂತಿತ್ತು. 9 ವರ್ಷಗಳ ಬಳಿಕ, 2022ರ ಜೂನ್‌ನಲ್ಲಿ ಮಾತುಕತೆ ಪುನರಾರಂಭಗೊಂಡಿತ್ತು. ಈವರೆಗೆ ಉಭಯ ಪಕ್ಷಗಳು 16 ಸುತ್ತು ಮಾತುಕತೆ ನಡೆಸಿವೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದ ಮೇಲೆ ಶೇ 50ರಷ್ಟು ಸುಂಕ ಹೇರಿದ ನಂತರ ಎರಡೂ ದೇಶಗಳ ನಡುವಿನ ಬಾಂಧವ್ಯ ಹಳಸಿರುವುದು ಮತ್ತು ವ್ಯಾಪಾರ ಒಪ್ಪಂದ ಮಾತುಕತೆಯು ಫಲಪ್ರದವಾಗದ ಸಂದರ್ಭದಲ್ಲಿ ಈ ಒಪ್ಪಂದ ನಡೆಯುತ್ತಿರುವುದು ಹೆಚ್ಚು ಮಹತ್ವ ಪಡೆದಿದೆ.

ಒಪ್ಪಂದವು ಐರೋಪ್ಯ ಸದಸ್ಯ ರಾಷ್ಟ್ರಗಳಿಗೆ ಭಾರತ ಮಾಡುವ ರಫ್ತಿನ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಲಿದೆ ಮತ್ತು ಚೀನಾದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲಿದೆ ಎಂದು ನಿರೀಕ್ಷಿಸಲಾಗಿದೆ.

## ನಾಲ್ಕನೇ ಒಪ್ಪಂದ

ರಷ್ಯಾದಿಂದ ತೈಲ ಖರೀದಿಸುತ್ತಿದೆ ಎಂಬ ನೆಪದಲ್ಲಿ ಭಾರತದ ಮೇಲೆ ಟ್ರಂಪ್ ಆಡಳಿತ ಹೇರಿರುವ ಹೆಚ್ಚುವರಿ ಸುಂಕದಿಂದಾಗಿ ಭಾರತದ ರಫ್ತು ಉದ್ಯಮಕ್ಕೆ ಹೊಡೆತ ಬಿದ್ದಿದೆ. ಟ್ರಂಪ್ ಸುಂಕವು ಜಾಗತಿಕ ಮಟ್ಟದಲ್ಲಿ ಸರಕುಗಳ ಪೂರೈಕೆಯ ಮೇಲೂ ಪರಿಣಾಮ ಬೀರಿದೆ. ಸುಂಕದ ಕಾರಣಕ್ಕೆ ಅಮೆರಿಕದೊಂದಿಗಿನ ವ್ಯಾಪಾರದಲ್ಲಿ ಆಗುತ್ತಿರುವ ನಷ್ಟವನ್ನು ಬೇರೆ ದೇಶಗಳೊಂದಿಗೆ ಹೆಚ್ಚು ವ್ಯಾಪಾರ ನಡೆಸಿ ಸರಿದೂಗಿಸಲು ಭಾರತ ಪ್ರಯತ್ನಿಸುತ್ತಿದೆ. ಇದಕ್ಕಾಗಿ ಬೇರೆ ದೇಶಗಳೊಂದಿಗೆ ವ್ಯಾಪಾರ ಮಾತುಕತೆಯನ್ನು ತೀವ್ರಗೊಳಿಸಿದೆ.

ಕಳೆದ ವರ್ಷದ ಅಕ್ಟೋಬರ್‌ನಿಂದ ಭಾರತವು ಮೂರು ಎಫ್‌ಟಿಎಗಳನ್ನು (ಯುರೋಪಿನ ಮುಕ್ತ ವ್ಯಾಪಾರ ಒಕ್ಕೂಟ, ಒಮಾನ್, ನ್ಯೂಜಿಲೆಂಡ್) ಅಂತಿಮಗೊಳಿಸಿದೆ (ಕಳೆದ ವರ್ಷದ ಜುಲೈನಲ್ಲಿ ಬ್ರಿಟನ್ ಜೊತೆಗೂ ಒಪ್ಪಂದ ಮಾಡಿಕೊಂಡಿದೆ). ಐರೋಪ್ಯ ಒಕ್ಕೂಟದೊಂದಿಗೆ ಒಪ್ಪಂದ ಏರ್ಪಟ್ಟರೆ ನಾಲ್ಕನೆಯದ್ದಾಗುತ್ತದೆ.

**ಆಧಾರ:** ಪಿಟಿಐ, ಐರೋಪ್ಯ ಒಕ್ಕೂಟ ವೆಬ್‌ಸೈಟ್, ಯುರಾಕ್ಟಿವ್.ಕಾಂ

### ಐರೋಪ್ಯ ಒಕ್ಕೂಟ ಸದಸ್ಯ ರಾಷ್ಟ್ರಗಳು



ಆಸ್ಟ್ರಿಯಾ, ಬೆಲ್ಜಿಯಂ, ಬಲ್ಗೇರಿಯಾ, ಕ್ರೊವೇಶಿಯಾ, ಸೈಪ್ರಸ್, ಜೆಕ್ ರಿಪಬ್ಲಿಕ್, ಡೆನ್ಮಾರ್ಕ್, ಎಸ್ಟೋನಿಯಾ, ಫಿನ್ಲೆಂಡ್, ಫ್ರಾನ್ಸ್, ಜರ್ಮನಿ, ಗ್ರೀಸ್, ಹಂಗರಿ, ಐರ್ಲೆಂಡ್, ಇಟಲಿ, ಲಾಟ್ವಿಯಾ, ಲಿಥುವೇನಿಯಾ, ಲಕ್ಸೆಂಬರ್ಗ್, ಮಾಲ್ಟ, ನೆದರ್ಲೆಂಡ್ಸ್, ಪೋಲೆಂಡ್, ಪೋರ್ಚುಗಲ್, ರೊಮೇನಿಯಾ, ಸ್ಲೊವಾಕಿಯಾ, ಸ್ಲೊವೇನಿಯಾ, ಸ್ಪೇನ್, ಸ್ವೀಡನ್

**45** ಕೋಟಿ ಒಟ್ಟು ಜನಸಂಖ್ಯೆ

ಜರ್ಮನಿ, ಇಟಲಿ, ಫ್ರಾನ್ಸ್, ಸ್ಪೇನ್, ಬೆಲ್ಜಿಯಂ, ನೆದರ್ಲೆಂಡ್ಸ್, ಡೆನ್ಮಾರ್ಕ್‌ಗಳೊಂದಿಗೆ ಭಾರತವು ಉತ್ತಮ ವ್ಯಾಪಾರ ಸಂಬಂಧ ಹೊಂದಿದೆ.

**19.5** ಲಕ್ಷ ಕೋಟಿ ಡಾಲರ್ ಐರೋಪ್ಯ ಒಕ್ಕೂಟದ ಜಿಡಿಪಿ ಗಾತ್ರ


**2.9** ಲಕ್ಷ ಕೋಟಿ ಡಾಲರ್ ವಿವಿಧ ದೇಶಗಳಿಗೆ ಮಾಡುವ ವಾರ್ಷಿಕ ರಫ್ತಿನ ಮೌಲ್ಯ

**2.6** ಲಕ್ಷ ಕೋಟಿ ಡಾಲರ್ ಹೊರದೇಶಗಳಿಂದ ವಾರ್ಷಿಕವಾಗಿ ಮಾಡುವ ಆಮದು ಮೌಲ್ಯ

## ಏನಿದು ಎಫ್‌ಟಿಎ?

ಮುಕ್ತ ವ್ಯಾಪಾರ ಒಪ್ಪಂದ– ಫ್ರೀ ಟ್ರೇಡ್ ಅಗ್ರಿಮೆಂಟ್ ಅಥವಾ ಎಫ್‌ಟಿಎ ಎನ್ನುವುದು ಎರಡು ಅಥವಾ ಅದಕ್ಕಿಂತ ಹೆಚ್ಚಿನ ರಾಷ್ಟ್ರಗಳೊಂದಿಗೆ ನಡೆಯುವ ವ್ಯಾಪಾರ ಒಪ್ಪಂದ. ರಾಷ್ಟ್ರಗಳ ನಡುವಿನ ವ್ಯಾಪಾರದಲ್ಲಿ ಇರುವ ಹೆಚ್ಚಿನ ಸುಂಕ, ತೆರಿಗೆ ಸೇರಿದಂತೆ ಇನ್ನಿತರ ಅಡೆತಡೆಗಳನ್ನು ನಿವಾರಿಸುವ ಪ್ರಯತ್ನವೂ ಹೌದು. ಒಪ್ಪಂದದ ಅಡಿಯಲ್ಲಿ ಸುಂಕ/ತೆರಿಗೆಗೆ ಸಂಪೂರ್ಣ ವಿನಾಯಿತಿ ನೀಡಲಾಗುತ್ತದೆ ಅಥವಾ ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡಲಾಗುತ್ತದೆ. ಉಭಯ ದೇಶಗಳ ನಡುವೆ ದ್ವಿಪಕ್ಷೀಯ ವ್ಯಾಪಾರ ಹೆಚ್ಚಿಸುವುದಕ್ಕಾಗಿ ನಿಯಮಗಳನ್ನೂ ಸರಳಗೊಳಿಸಲಾಗುತ್ತದೆ.

### ಭಾರತ –ಐರೋಪ್ಯ ಒಕ್ಕೂಟ ದ್ವಿಪಕ್ಷೀಯ ಸರಕು ವ್ಯಾಪಾರ




**17%** ಭಾರತವು ಮಾಡುತ್ತಿರುವ ಒಟ್ಟು ರಫ್ತಿನಲ್ಲಿ ಐರೋಪ್ಯ ಒಕ್ಕೂಟಕ್ಕೆ ಮಾಡಲಾಗುತ್ತಿರುವ ರಫ್ತಿನ ಪ್ರಮಾಣ

**9%** ಐರೋಪ್ಯ ಒಕ್ಕೂಟ ಮಾಡುವ ರಫ್ತಿನಲ್ಲಿ ಭಾರತಕ್ಕೆ ಮಾಡಲಾಗುತ್ತಿರುವ ರಫ್ತಿನ ಪ್ರಮಾಣ

## ಎಫ್‌ಡಿಐ ಹೆಚ್ಚಳ ನಿರೀಕ್ಷೆ

ಒಪ್ಪಂದ ನಡೆದರೆ ಎರಡೂ ಕಡೆಗಳಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ಹರಿವು ಇನ್ನಷ್ಟು ಹೆಚ್ಚಾಗಬಹುದು ಎಂದು ಅಂದಾಜಿಸಲಾಗಿದೆ.




ಐರೋಪ್ಯ ಒಕ್ಕೂಟದ ಸುಮಾರು 6,000 ಕಂಪನಿಗಳು ಭಾರತದಲ್ಲಿ ಕಾರ್ಯಾಚರಿಸುತ್ತಿದ್ದು, 2000ದ ಏಪ್ರಿಲ್‌ನಿಂದ 2024ರ ಸೆಪ್ಟೆಂಬರ್ ವರೆಗೆ ₹10.59 ಲಕ್ಷ ಕೋಟಿ (ಡಾಲರ್ ಎದುರು ಈಗಿನ ರೂಪಾಯಿ ಮೌಲ್ಯದ ಅಂದಾಜು) ಬಂಡವಾಳ ಹೂಡಿವೆ. ಈ ಅವಧಿಯಲ್ಲಿ ಭಾರತಕ್ಕೆ ಬಂದ ಎಫ್‌ಡಿಐನಲ್ಲಿ ಐರೋಪ್ಯ ಒಕ್ಕೂಟದ ಪಾಲು ಶೇ 16.6.

ಚಿಂತಕರ ಚಾವಡಿ ಜಿಟಿಆರ್‌ಐ ಪ್ರಕಾರ 2000 ಏಪ್ರಿಲ್‌ನಿಂದ 2024ರ ಮಾರ್ಚ್‌ವರೆಗೆ ಭಾರತದ ಕಂಪನಿಗಳು ಯೂರೋಪ್ ರಾಷ್ಟ್ರಗಳಿಗೆ ₹3.61 ಲಕ್ಷ ಕೋಟಿ ನೇರ ಹೂಡಿಕೆ ಮಾಡಿವೆ.

### 2014ರ ನಂತರ ಏಳು ಎಫ್‌ಟಿಎ

2014ರ ನಂತರ ಭಾರತವು ಏಳು ರಾಷ್ಟ್ರಗಳೊಂದಿಗೆ ಮುಕ್ತ ವ್ಯಾಪಾರ ಒಪ್ಪಂದಗಳನ್ನು ಅಂತಿಮಗೊಳಿಸಿದೆ.

1. ಮಾರಿಷಸ್ (2021 ಏಪ್ರಿಲ್)
2. ಆಸ್ಟ್ರೇಲಿಯಾ (2022 ಡಿಸೆಂಬರ್)
3. ಯುಎಇ (2022 ಮೇ)
4. ಒಮಾನ್ (2025 ಡಿಸೆಂಬರ್)
5. ಬ್ರಿಟನ್ (2025 ಜುಲೈ)
6. ಯುರೋಪಿನ ಮುಕ್ತ ವ್ಯಾಪಾರ ಒಕ್ಕೂಟ (ಇಎಫ್‌ಟಿಎ) (ಸ್ವಿಟ್ಜರ್ಲೆಂಡ್, ಐಸ್‌ಲೆಂಡ್, ಲಿಕ್ಟೆನ್‌ಸ್ಟೈನ್, ನಾರ್ವೆ) (2025–ಅಕ್ಟೋಬರ್)
7. ನ್ಯೂಜಿಲೆಂಡ್ (2025 ಡಿಸೆಂಬರ್‌ನಲ್ಲಿ ಮಾತುಕತೆ ಅಂತಿಮವಾಗಿದೆ)

ಮಾರಿಷನ್, ಆಸ್ಟ್ರೇಲಿಯಾ, ಯುಎಇಯೊಂದಿಗಿನ ಒಪ್ಪಂದ ಜಾರಿಯಾಗಿದೆ. ನ್ಯೂಜಿಲೆಂಡ್ ಬಿಟ್ಟು ಉಳಿದ ರಾಷ್ಟ್ರಗಳೊಂದಿಗೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ

**2014ಕ್ಕೂ ಮೊದಲು ಭಾರತವು ಶ್ರೀಲಂಕಾ, ದಕ್ಷಿಣ ಏಷ್ಯಾ ಮುಕ್ತ ವ್ಯಾಪಾರ ಒಪ್ಪಂದ (ಎಸ್‌ಎಎಫ್‌ಟಿಎ) (ಪಾಕಿಸ್ತಾನ, ನೇಪಾಳ, ಶ್ರೀಲಂಕಾ, ಬಾಂಗ್ಲಾದೇಶ, ಭೂತಾನ್, ಮಾಲ್ದೀವ್ಸ್ ಮತ್ತು ಅಫ್ಘಾನಿಸ್ತಾನ), ನೇಪಾಳ, ಭೂತಾನ್, ಥಾಯ್ಲೆಂಡ್, ಸಿಂಗಪುರ, ಆಸಿಯಾನ್ (ಬ್ರೂನೈ, ಕಾಂಬೋಡಿಯಾ, ಇಂಡೊನೇಷ್ಯಾ, ಲಾವೊಸ್, ಮಲೇಷ್ಯಾ, ಮ್ಯಾನ್ಮಾರ್, ಫಿಲಿಪ್ಪೀನ್ಸ್, ಸಿಂಗಪುರ, ಥಾಯ್ಲೆಂಡ್ ಮತ್ತು ವಿಯೆಟ್ನಾಂ) ರಾಷ್ಟ್ರಗಳೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಂಡಿತ್ತು.**

## ಒಪ್ಪಂದದಿಂದಾಗುವ ಲಾಭ ಏನು?

ಸರಕು ವ್ಯಾಪಾರದಲ್ಲಿ ಐರೋಪ್ಯ ಒಕ್ಕೂಟವು ಭಾರತದ ಅತಿ ದೊಡ್ಡ ಪಾಲುದಾರ. ಆಮದು ಮಾಡುತ್ತಿರುವ ವಸ್ತುಗಳ ಮೇಲೆ ಹೇರಲಾಗುತ್ತಿರುವ ಸುಂಕಗಳು ಒಪ್ಪಂದದಿಂದಾಗಿ ಕಡಿಮೆಯಾಗಲಿವೆ, ಇಲ್ಲವೇ ಸಂಪೂರ್ಣವಾಗಿ ರದ್ದಾಗಲಿವೆ. ಇದರಿಂದಾಗಿ ತಂತ್ರಜ್ಞಾನ, ಔಷಧಿ, ವಾಹನೋದ್ಯಮ ಮತ್ತು ಜವಳಿ ಸೇರಿದಂತೆ ಹಲವು ಕೈಗಾರಿಕಾ ಕ್ಷೇತ್ರಗಳಿಗೆ ಪ್ರಯೋಜನ ಸಿಗಲಿದೆ.

ಜವಳಿ, ಚರ್ಮೋದ್ಯಮ, ಔಷಧ, ಉಕ್ಕು, ಪೆಟ್ರೋಲಿಯಂ ಉತ್ಪನ್ನಗಳು, ಎಲೆಕ್ಟ್ರಿಕಲ್ ಯಂತ್ರೋಪಕರಣಗಳು ಸೇರಿದಂತೆ ಕಾರ್ಮಿಕರ ಶ್ರಮವನ್ನು ಹೆಚ್ಚು ಬೇಡುವ ಉದ್ದಿಮೆಗಳ ಉತ್ಪನ್ನಗಳಿಗೆ ಸುಂಕ ವಿಧಿಸಬಾರದು ಎಂಬ ಬೇಡಿಕೆಯನ್ನು ಭಾರತ ಮುಂದಿಟ್ಟಿದೆ. ಸುಂಕ ಕಡಿಮೆಯಾದರೆ, ಈ ಉತ್ಪನ್ನಗಳಿಗೆ ಯುರೋಪ್ ಮಾರುಕಟ್ಟೆಯಲ್ಲಿ ಬೇಡಿಕೆ ಸೃಷ್ಟಿಯಾಗಲಿದೆ. ಜವಳಿ ಉತ್ಪನ್ನಗಳಿಗೆ ಸದ್ಯ ಅಲ್ಲಿ ಶೇ 12–ಶೇ 13 ಸುಂಕ ವಿಧಿಸಲಾಗುತ್ತಿದೆ.

ಐರೋಪ್ಯ ಒಕ್ಕೂಟವು ವಾಹನಗಳು, ವೈದ್ಯಕೀಯ ಸಲಕರಣೆಗಳು, ವೈನ್, ಸ್ಪಿರಿಟ್‌ಗಳು, ಮಾಂಸ, ಕುಕ್ಕುಟೋದ್ಯಮ ಮತ್ತು ಬೌದ್ಧಿಕ ಆಸ್ತಿ ಹಕ್ಕಿನ ಸಂರಕ್ಷಣೆಗೆ ಸಂಬಂಧಿಸಿದಂತೆ ಹೆಚ್ಚು ಸುಂಕ ಕಡಿತ ಮಾಡುವಂತೆ ಒತ್ತಾಯ ಮಾಡುತ್ತಿದೆ ಎಂದು ಮೂಲಗಳು ತಿಳಿಸಿವೆ.

ಭಾರತವು ಅಲ್ಲಿಂದ ಯಂತ್ರೋಪಕರಣಗಳು, ಕಂಪ್ಯೂಟರ್‌ಗಳು, ಎಲೆಕ್ಟ್ರಾನಿಕ್ಸ್, ವಿಮಾನಗಳು ಮತ್ತು ಬಿಡಿಭಾಗಗಳು, ವೈದ್ಯಕೀಯ ಸಲಕರಣೆಗಳು, ವೈಜ್ಞಾನಿಕ ಉಪಕರಣಗಳು, ಪಾಲಿಷ್ ಮಾಡದ ವಜ್ರ, ಇಂಗಾಲಯುಕ್ತ ರಾಸಾಯನಿಕಗಳು, ಪ್ಲಾಸ್ಟಿಕ್, ಕಬ್ಬಿಣ ಮತ್ತು ಉಕ್ಕು, ಕಾರುಗಳು ಹಾಗೂ ವಾಹನಗಳ ಬಿಡಿ ಭಾಗಗಳನ್ನು ಆಮದು ಮಾಡಿಕೊಳ್ಳುತ್ತದೆ.

ಸೇವಾ ವಲಯದಲ್ಲಿ ಭಾರತವು ಉದ್ಯಮ ಸೇವೆಗಳು, ದೂರ ಸಂಪರ್ಕ ಮತ್ತು ಐಟಿ, ಸಾರಿಗೆ ಸೇವೆಗಳನ್ನು ರಫ್ತು ಮಾಡಿದರೆ, ಬೌದ್ಧಿಕ ಆಸ್ತಿ ಸೇವೆಗಳು, ದೂರಸಂಪರ್ಕ ಮತ್ತು ಐಟಿ ಸೇವೆಗಳನ್ನು ಆಮದು ಮಾಡಿಕೊಳ್ಳುತ್ತದೆ. ಉಭಯ ದೇಶಗಳ ನಡುವೆ ಆಲ್ಕೋಹಾಲ್ ವ್ಯಾಪಾರವೂ ಗಣನೀಯ ಪ್ರಮಾಣದಲ್ಲಿದೆ.

### ಕೃಷಿ ಹೊರಕ್ಕೆ

ಎಫ್‌ಟಿಎನಿಂದ ಕೃಷಿ ಉತ್ಪನ್ನಗಳನ್ನು ಕೈಬಿಡಲಾಗಿದೆ ಎಂದು ಐರೋಪ್ಯ ಕಮಿಷನ್‌ನ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ ಹೇಳಿರುವುದಾಗಿ ಯುರೋಪಿನ ಮಾಧ್ಯಮಗಳು ವರದಿ ಮಾಡಿವೆ. ಮಾತುಕತೆಯ ಆರಂಭದಿಂದಲೂ ಕೃಷಿ ಕ್ಷೇತ್ರವನ್ನು ಹೊರಗಿಡಲಾಗಿತ್ತು ಎಂದು ಅವರು ಹೇಳಿದ್ದಾರೆ

Publication Date
16/01/2026

## ಪದಬಂ

**ಎಡದಿಂದ ಬಲಕ್ಕೆ**

3.ಹಣವನ್ನು ಸಂದಾಯ ಮಾಡುವುದು (3)
5.ಈತ ಸರಿ ಸಮಾನನಾದವನು (3)
6.ಸತಿಗೆ ದೊರೆತ ಮೋಕ್ಷ! (3)
7.ಚನ್ನಯ್ಯನ ಮಗ ನಾನೆಂದು ಹೇಳಿಕೊಂಡ ಈ ಶರಣ ಚಮ್ಮಾರಿಕೆ ಕಾಯಕ ನಡೆಸುತ್ತಿದ್ದನು (6)
8.ತ್ರಿಪುರಾಂತಕ ಲಿಂಗ ಎಂಬ ಅಂಕಿತವುಳ್ಳ ವಚನಕಾರ (6)
12.ಚಿನ್ನದ ಬಣ್ಣವಿದು (3)
13.ಪಲ್ಲಂಗದಲ್ಲಿರುವವನ ಕಾಡುಹರಟೆ (3)
14.ಹದ್ದಿನ ಜಾತಿಗೆ ಸೇರಿದ ಪಕ್ಷಿ (3)

**ಮೇಲಿಂದ ಕೆಳಕ್ಕೆ**

1.ಎಳೆಯ ಹುಲ್ಲು
2.ಕತೆ ಕೊನೆಗಿದ್ದಾಗಿನ ಅಮಲು ತಿರುವುಮುರುವಾಗಿದೆ
3.ಬೀಜ ಬಿತ್ತಲು ಮಾಡಿರುವ ಮಡಿ
4.ಮನಸ್ಸಿನ ಅಸ್ವಾಸ್ಥ್ಯ
6.ಸಗರ ಗ್ರಾಮದ ಈ ಶರಣನ ಪತ್ನಿ ಶಿವದೇವಿ
9.ಅವಶ್ಯವಿಲ್ಲದ ಖರ್ಚು ಉಲ್ಟಾ ಕಾಣುತ್ತಿದೆ
10.ಹೂವಿನಲ್ಲಿರುವ ಹುಡಿ
11.ತಣ್ಣಗಾದ ಅನ್ನ
12.ಕುಳಿ ಇಲ್ಲಿದೆ

Presented by

## ❖ 'ಜಿಡಿಪಿ ಶೇ 7.2ರಷ್ಟು ನಿರೀಕ್ಷೆ'

**ಸಂದರ್ಭ: ಪ್ರಸಕ್ತ ಆರ್ಥಿಕ ವರ್ಷದಲ್ಲಿ ಭಾರತದ ಜಿಡಿಪಿ ಬೆಳವಣಿಗೆ ಶೇ 7.2ರಷ್ಟಾಗುವ ನಿರೀಕ್ಷೆ ಇದೆ ಎಂದು ವಿಶ್ವಬ್ಯಾಂಕ್ ತನ್ನ ಅಂದಾಜನ್ನು ಪರಿಷ್ಕರಿಸಿದೆ.**

- ದೇಶೀಯ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾಗಿರುವುದು, ತೆರಿಗೆ ಸುಧಾರಣೆಗಳು ಮತ್ತು ಗ್ರಾಮೀಣ ಪ್ರದೇಶದಲ್ಲಿನ ಕುಟುಂಬಗಳ ಗಳಿಕೆಯಲ್ಲಿ ಹೆಚ್ಚಳವಾಗಿರುವುದು ಜಿಡಿಪಿ ಹೆಚ್ಚಳಕ್ಕೆ ನೆರವಾಗಲಿದೆ ಎಂದು ಹೇಳಿದೆ. ಭಾರತವು ಜಗತ್ತಿನಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಆಗಲಿದೆ ಎಂದು ಹೇಳಿದೆ.
- ಜೂನ್‌ನಲ್ಲಿ ವಿಶ್ವಬ್ಯಾಂಕ್ ಭಾರತದ ಜಿಡಿಪಿ ಬೆಳವಣಿಗೆ ಶೇ 6.3ರಷ್ಟಾಗಲಿದೆ ಎಂದು ಹೇಳಿತ್ತು.
- 2026-27ರಲ್ಲಿ ದೇಶದ ಜಿಡಿಪಿ ಶೇ 6.5 ಮತ್ತು 2027-28ರಲ್ಲಿ ಶೇ 6.6ರಷ್ಟಾಗಬಹುದು ಎಂದು ಹೇಳಿದೆ.
- ಅಮೆರಿಕದ ಸುಂಕ ಹೆಚ್ಚಳ ಮತ್ತು ವ್ಯಾಪಾರ ಸಂಬಂಧಿತ ಅನಿಶ್ಚಿತತೆ ಯಿಂದಾಗಿ ಬಂಡವಾಳದ ಹೊರಹರಿವು ಹೆಚ್ಚಾಗಿದೆ. ಇದರಿಂದ ಮೇ ತಿಂಗಳಿನಿಂದ ಭಾರತದ ರೂಪಾಯಿ ಮೌಲ್ಯ ಕುಸಿದಿದೆ ಎಂದು ವಿಶ್ವ ಬ್ಯಾಂಕ್ ಹೇಳಿದೆ.
- ಇತ್ತೀಚೆಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಮೊದಲ ಅಂದಾಜಿನ ಪ್ರಕಾರ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಭಾರತದ ಆರ್ಥಿಕತೆಯು ಶೇ 7.4ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ಹೇಳಿತ್ತು.

## ❖ ವ್ಯಾಪಾರ ಕೊರತೆ ₹2.26 ಲಕ್ಷ ಕೋಟಿ

# ₹3.47 ಲಕ್ಷ ಕೋಟಿ ಮೌಲ್ಯದ ಸರಕು ರಫ್ತು: ಕೇಂದ್ರ ವಾಣಿಜ್ಯ ಸಚಿವಾಲಯ

ನವದೆಹಲಿ (ಪಿಟಿಐ): ಜಾಗತಿಕ ಆರ್ಥಿಕ ಅನಿಶ್ಚಿತತೆಯ ನಡುವೆಯೂ 2025ರ ಡಿಸೆಂಬರ್ ತಿಂಗಳಿನಲ್ಲಿ ದೇಶದ ರಫ್ತು ಪ್ರಮಾಣ ಶೇ 1.87ರಷ್ಟು ಹೆಚ್ಚಳ ವಾಗಿದ್ದು, ₹3.47 ಲಕ್ಷ ಕೋಟಿ ಮೌಲ್ಯದ ಸರಕುಗಳು ರಫ್ತಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.



ಇದೇ ಅವಧಿಯಲ್ಲಿ ಆಮದು ಪ್ರಮಾಣವು ಶೇ 8.7ರಷ್ಟು ಏರಿಕೆಯಾಗಿದ್ದು, ₹5.73 ಲಕ್ಷ ಕೋಟಿ ಆಗಿದೆ. ವ್ಯಾಪಾರ ಕೊರತೆಯು ₹2.26 ಲಕ್ಷ ಕೋಟಿಯಷ್ಟಾಗಿದೆ ಎಂದು ತಿಳಿಸಿದೆ.

ರಫ್ತು ಮೌಲ್ಯಕ್ಕಿಂತ ಆಮದು ಮೌಲ್ಯ ಹೆಚ್ಚಿದ್ದರೆ ಅದನ್ನು ವ್ಯಾಪಾರ ಕೊರತೆ ಎಂದು ಕರೆಯಲಾಗುತ್ತದೆ.

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ದೇಶದ ಸರಕುಗಳ ರಫ್ತು ಶೇ 2.44ರಷ್ಟು ಹೆಚ್ಚಳವಾಗಿ, ₹29.84 ಲಕ್ಷ ಕೋಟಿಗೆ ತಲುಪಿದೆ. ಇದೇ ಅವಧಿಯಲ್ಲಿ ದೇಶದ ಆಮದು ಶೇ 5.9ರಷ್ಟು ಏರಿಕೆಯಾಗಿ, ₹52.27 ಲಕ್ಷ ಕೋಟಿಯಷ್ಟಾಗಿದೆ. ವ್ಯಾಪಾರ ಕೊರತೆಯು ₹22.43 ಲಕ್ಷ ಕೋಟಿಯಷ್ಟಾಗಿದೆ.

'ದೇಶದ ರಫ್ತು ಸಕಾರಾತ್ಮಕವಾಗಿ ಬೆಳವಣಿಗೆ ದಾಖಲಿಸಿದೆ. ಇದೇ ರೀತಿ ಪ್ರಗತಿ ಮುಂದುವರಿದರೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಸರಕು ಮತ್ತು ಸೇವೆಗಳ ಒಟ್ಟು ರಫ್ತು ಹಣಕಾಸಿನ ಮೌಲ್ಯವು ₹76.75 ಲಕ್ಷ ಕೋಟಿ (850 ಬಿಲಿಯನ್ ಡಾಲರ್) ಆಗುವ ನಿರೀಕ್ಷೆ ಇದೆ' ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಅಗರವಾಲ್ ಹೇಳಿದ್ದಾರೆ.

ಎಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್, ಸಾಗರೋತ್ಪನ್ನ-ಗಳು ಮತ್ತು ಔಷಧಗಳು ಸೇರಿದಂತೆ ವಿವಿಧ ಸರಕುಗಳ ಸಾಗಣೆಯಿಂದ ದೇಶದ ರಫ್ತು ಹೆಚ್ಚಳವಾಗಿದೆ ಎಂದು ತಿಳಿಸಿದ್ದಾರೆ.

ಅಮೆರಿಕ, ಚೀನಾ ಮತ್ತು ಯುಎಇಗೆ ದೇಶದ ರಫ್ತು ಸ್ಥಿರವಾಗಿ ಬೆಳವಣಿಗೆ ಆಗುತ್ತಿದೆ ಎಂದು ತಿಳಿಸಿದ್ದಾರೆ.

### ಭಾರತ–ಅಮೆರಿಕ ಒಪ್ಪಂದ ಶೀಘ್ರ

ಭಾರತ ಮತ್ತು ಅಮೆರಿಕವು ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸುವ ಅಂತಿಮ ಯತ್ನದಲ್ಲಿವೆ. ಬಾಕಿ ಇರುವ ಎಲ್ಲ ವಿಷಯಗಳ ಕುರಿತು ಎರಡೂ ಕಡೆ ಮಾತುಕತೆ ನಡೆಯುತ್ತಿದೆ ಎಂದು ರಾಜೇಶ್ ಅಗರವಾಲ್ ಹೇಳಿದ್ದಾರೆ. ಅತಿ ಶೀಘ್ರದಲ್ಲಿ ಒಪ್ಪಂದ ಆಗಲಿದೆ. ಆದರೆ, ಒಪ್ಪಂದ ಯಾವಾಗ ಆಗುತ್ತದೆ ಎಂದು ಗಡುವು ನಿಗದಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ.

ಭಾರತ ಮತ್ತು ಕೆನಡಾ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ವ್ಯಾಪ್ತಿಯನ್ನು ಅಂತಿಮಗೊಳಿಸಲು ಸಹ ಕೆಲಸ ಮಾಡಲಾಗುತ್ತಿದೆ ಎಂದು ರಾಜೇಶ್ ಅಗರವಾಲ್ ಹೇಳಿದ್ದಾರೆ.

### 27ಕ್ಕೆ ಭಾರತ–ಐರೋಪ್ಯ ಒಕ್ಕೂಟ ಶೃಂಗಸಭೆ

ಐರೋಪ್ಯ ಸಮಿತಿಯ ಅಧ್ಯಕ್ಷ ಆಂಟೋನಿಯೊ ಲೂಯಿಸ್ ಸ್ಯಾಂಟೋಸ್ ಡ ಕೋಸ್ಟಾ ಮತ್ತು ಐರೋಪ್ಯ ಕಮಿಷನ್‌ನ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ ಅವರು ಜನವರಿ 25ರಿಂದ 27ರವರೆಗೆ ಭಾರತಕ್ಕೆ ಭೇಟಿ ನೀಡಲಿದ್ದು, 77ನೇ ಗಣರಾಜ್ಯೋತ್ಸವದ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಜ. 27ರಂದು ನಡೆಯಲಿರುವ 16ನೇ ಭಾರತ–ಐರೋಪ್ಯ ಒಕ್ಕೂಟ ಶೃಂಗಸಭೆಯ ಸಹ-ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಈ ವೇಳೆ ಎರಡೂ ಕಡೆಯವರು ಬಹುನಿರೀಕ್ಷಿತ ಭಾರತ–ಐರೋಪ್ಯ ಒಕ್ಕೂಟದ ವ್ಯಾಪಾರ ಒಪ್ಪಂದವನ್ನು ದೃಢೀಕರಿಸುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ.

### ಸುಂಕ ಹೇರಿಕೆ: ಅಮೆರಿಕಕ್ಕೆ ರಫ್ತು ಇಳಿಕೆ

ಡಿಸೆಂಬರ್ ತಿಂಗಳಿನಲ್ಲಿ ಅಮೆರಿಕಕ್ಕೆ ದೇಶದ ಸರಕುಗಳ ರಫ್ತು ಪ್ರಮಾಣ ಶೇ 1.83ರಷ್ಟು ಇಳಿಕೆಯಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.

ಭಾರತದ ಸರಕುಗಳ ಮೇಲೆ ಅಮೆರಿಕ ಹೇರಿದ ಹೆಚ್ಚಿನ ಸುಂಕವು ರಫ್ತು ಕಡಿಮೆ ಆಗಲು ಕಾರಣ ಎಂದು ತಿಳಿಸಿದೆ. ಡಿಸೆಂಬರ್‌ನಲ್ಲಿ ₹62,192 ಕೋಟಿ ಮೌಲ್ಯದ ಸರಕುಗಳು ರಫ್ತಾಗಿವೆ. ಆಮದು ಶೇ 7.57ರಷ್ಟು ಹೆಚ್ಚಾಗಿದ್ದು, ₹36,426 ಕೋಟಿಯಷ್ಟಾಗಿದೆ ಎಂದು ತಿಳಿಸಿದೆ.

**ಚೀನಾಕ್ಕೆ ರಫ್ತು ಶೇ 67ರಷ್ಟು ಜಿಗಿತ:** ಡಿಸೆಂಬರ್ ತಿಂಗಳಿನಲ್ಲಿ ಚೀನಾಕ್ಕೆ ಭಾರತದಿಂದ, ₹18,437 ಕೋಟಿ ಮೌಲ್ಯದ ಸರಕುಗಳು ರಫ್ತಾಗಿದ್ದು, 2024ರ ಡಿಸೆಂಬರ್‌ಗೆ ಹೋಲಿಸಿದರೆ ರಫ್ತು ಪ್ರಮಾಣದಲ್ಲಿ ಶೇ 67.35ರಷ್ಟು ಹೆಚ್ಚಳವಾಗಿದೆ.

ಎಲೆಕ್ಟ್ರಾನಿಕ್ಸ್, ಸಾಗರೋತ್ಪನ್ನಗಳು ಸೇರಿದಂತೆ ವಿವಿಧ ಸರಕುಗಳ ರಫ್ತಿನಲ್ಲಿ ಹೆಚ್ಚಳವಾಗಿದೆ. ಇದು ಒಟ್ಟಾರೆ ರಫ್ತು ಹೆಚ್ಚಳಕ್ಕೆ ಕಾರಣವಾಗಿದೆ. ಇದೇ ಅವಧಿಯಲ್ಲಿ ಚೀನಾದಿಂದ ಭಾರತವು, ₹1 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ಆಮದು ಮಾಡಿಕೊಂಡಿದ್ದು, ಶೇ 20ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಅಮೆರಿಕದ ನಂತರ ಚೀನಾವು ಭಾರತದ ಎರಡನೇ ಅತಿದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರವಾಗಿದೆ.

## ❖ ಗ್ರೀನ್‌ಲ್ಯಾಂಡ್: ಐರೋಪ್ಯ ರಾಷ್ಟ್ರಗಳ ಯೋಧರ ಪಹರೆ

**ಸಂದರ್ಭ: ಗ್ರೀನ್‌ಲ್ಯಾಂಡ್ ವಶಪಡಿಸಿಕೊಳ್ಳುವು ದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ಒಡ್ಡಿರುವ ನಡುವೆಯೇ, ಫ್ರಾನ್ಸ್, ಜರ್ಮನಿ, ನಾರ್ವೆ, ಸ್ವೀಡನ್ ಸೇರಿ ಹಲವು ಯುರೋಪಿಯನ್ ರಾಷ್ಟ್ರಗಳ ಯೋಧರು ಗ್ರೀನ್ ಲ್ಯಾಂಡ್ ಬಂದಿಳಿದಿದ್ದಾರೆ.**


- ಫ್ರಾನ್ಸ್‌ನ 15 ಯೋಧರು ಸಮರಾಭ್ಯಾಸಕ್ಕಾಗಿ ನೂಕ್‌ನಲ್ಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಗ್ರೀನ್ ಲ್ಯಾಂಡ್‌ಗೆ 13 ಮಂದಿಯ ವಿಚಕ್ಷಣ ತಂಡವನ್ನು ನಿಯೋಜಿಸಲಾಗುವುದು ಎಂದು ಜರ್ಮನಿ ರಕ್ಷಣಾ ಸಚಿವಾಲಯ ತಿಳಿಸಿದೆ.
- ಗ್ರೀನ್‌ಲ್ಯಾಂಡ್‌ನಲ್ಲಿ ಸೇನಾ ಬಲವನ್ನು ಹೆಚ್ಚಿಸುವುದಾಗಿ ಡೆನ್ಮಾರ್ಕ್ ಘೋಷಿಸಿದ್ದರೆ, ಮತ್ತಷ್ಟು ಸೇನಾ ಶುಕಡಿಗಳನ್ನು ಕಳುಹಿಸುವುದಾಗಿ ಫ್ರಾನ್ ಹೇಳಿದೆ.

IAS/KAS Academy



## ❖ ಮಹಿಳಾ ಮೀಸಲು ಅಗ್ನಿಪರೀಕ್ಷೆ

**ಸಂದರ್ಭ: ಮಹಿಳಾ ಮೀಸಲು ಕಾನೂನಿಗೆ ತಿದ್ದುಪಡಿ ಮಾಡುವ ಸಂವಿಧಾನ (131ನೇ ತಿದ್ದುಪಡಿ) ಮಸೂದೆ-2026 ಸೇರಿದಂತೆ ಮೂರು ಮಸೂದೆಗಳನ್ನು ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಮಂಡಿಸಿದೆ. 2027ರ ಜನಗಣತಿಗೆ ಮುನ್ನವೇ ಕ್ಷೇತ್ರ ಮರುವಿಂಗಡಣೆ ನಡೆಸುವ ಪ್ರಸ್ತಾವಕ್ಕೆ 'ಇಂಡಿಯಾ' ಮೈತ್ರಿಕೂಟದ ಪಕ್ಷಗಳ ವಿರೋಧ ಲೆಕ್ಕಿಸದೇ ಈ ಮಸೂದೆಗಳನ್ನು ಮಂಡಿಸಲಾಗಿದೆ.**




- ಮಸೂದೆಗಳಿಗೆ ಅಂಗೀಕಾರ ಪಡೆಯುವುದು ಸರ್ಕಾರಕ್ಕೆ ಅಗ್ನಿ ಪರೀಕ್ಷೆಯಾಗಿದ್ದರೆ ವಿಪಕ್ಷಗಳ ಒಗ್ಗಟ್ಟನ್ನು ಪ್ರದರ್ಶಿಸುವುದು 'ಇಂಡಿಯಾ' ಮೈತ್ರಿಕೂಟಕ್ಕೆ ಸತ್ವ ಪರೀಕ್ಷೆಯಾಗಿದೆ.
- ಮೂರು ಮಸೂದೆಗಳನ್ನು ಮಂಡಿಸುವ ಸಂದರ್ಭದಲ್ಲಿ ಆಡಳಿತ ಹಾಗೂ ವಿಪಕ್ಷಗಳ ನಡುವಿನ ತೀವ್ರ ಜಟಾಪಟಿಗೆ ಸದನ ಸಾಕ್ಷಿಯಾಯಿತು.
- ಮಸೂದೆ ಮಂಡನೆ ವಿರೋಧಿಸಿದ ಕಾಂಗ್ರೆಸ್ ಸಂಸದ ಕೆ.ಸಿ.ವೇಣುಗೋಪಾಲ್, '2024ರ ಚುನಾವಣೆಯಲ್ಲಿ ಮಹಿಳಾ ಮೀಸಲಾತಿಯನ್ನು ಜಾರಿಗೆ ತರಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿತ್ತು ಈಗ ಮಸೂದೆ ಮಂಡಿಸುತ್ತಿರುವುದು ಚುನಾವಣಾ ಗಿಮಿಕ್ ಎಂದು ದೂಷಿಸಿದರು.
- ವಿವಾದಾತ್ಮಕ ಮಸೂದೆ ಮಂಡನೆ ವಿರೋಧಿಸಿ ಧರ್ಮೇಂದ್ರ ಯಾದವ್ (ಸಮಾಜವಾದಿ ಪಕ್ಷ), ಕಾಕೋಲಿ ಘೋಷ್ ದಸ್ತಿದಾರ್ (ಟಿಎಂಸಿ), ಅಸಾದುದ್ದೀನ್ ಓವೈಸಿ (ಎಐಎಂಐಎಂ) ಮತ್ತು ಎನ್.ಕೆ.ಪ್ರೇಮಚಂದ್ರನ್ (ಆರ್‌ಎಸ್‌ಪಿ) ಮತ್ತಿತರರು ಮಾತನಾಡಿದರು.
- 40 ನಿಮಿಷಗಳ ವಾಗ್ವಾದದ ಬಳಿಕ ಮತ ವಿಭಜನೆಗೆ ವಿಪಕ್ಷಗಳು ಒತ್ತಾಯಿಸಿದವು ನಂತರ ಮಸೂದೆ ಮಂಡನೆಯನ್ನು ಮತಕ್ಕೆ ಹಾಕಲಾಯಿತು. 251 ಸದಸ್ಯರು ಬೆಂಬಲಿಸಿದರೆ 185 ಸದಸ್ಯರು ವಿರೋಧಿಸಿದರು. ಮಸೂದೆ ಮಂಡನೆಗೆ ಸರಳ ಬಹುಮತ ಸಾಕು ಮತದಾನದ ಸಂದರ್ಭದಲ್ಲಿ 436 ಸಂಸದರನ್ನೇ ಹಾಜರಿದ್ದರು.
- ಸಂವಿಧಾನ ತಿದ್ದುಪಡಿ ಮಸೂದೆಗೆ ಅಂಗೀಕಾರ ಪಡೆಯಲು ಸದನದ ಮೂರನೇ ಎರಡರಷ್ಟು ಸದಸ್ಯರ ಬೆಂಬಲ ಆಗತ್ಯ. ಎನ್‌ಡಿಎ ಮೈತ್ರಿಕೂಟವು ಸರಳ ಬಹುಮತ ಹೊಂದಿದೆ. ಇತರ ಪಕ್ಷಗಳ ಬೆಂಬಲ ಪಡೆಯದ ಹೊರತು ಅಥವಾ ವಿಪಕ್ಷದ ಸದಸ್ಯರು ಸದನಕ್ಕೆ ಗೈರಾಗುವಂತೆ ನೋಡಿಕೊಳ್ಳದ ಹೊರತು ಮಸೂದೆಗೆ ಅಂಗೀಕಾರ ಪಡೆಯುವುದು ಕಷ್ಟ. ಲೋಕಸಭೆಯಲ್ಲಿ ಅಂಗೀಕಾರ ಪಡೆದ ಬಳಿಕವಷ್ಟೇ ಮಸೂದೆ ರಾಜ್ಯಸಭೆಗೆ ಹೋಗಲಿದೆ.
- ಮಸೂದೆಗಳು ಲೋಕಸಭೆಯಲ್ಲಿ ಅಂಗೀಕಾರ ಪಡೆಯಲು ಸಮಾಜವಾದಿ ಪಕ್ಷ (37 ಸಂಸದರು), ಟಿಎಂಸಿ (28 ಸಂಸದರು) ಅಥವಾ ಡಿಎಂಕೆ (22 ಸಂಸದರು) ಪೈಕಿ ಕನಿಷ್ಠ ಎರಡು ಪ್ರಮುಖ ವಿರೋಧ ಪಕ್ಷಗಳು ಗೈರುಹಾಜರಾಗಬೇಕಾಗುತ್ತದೆ. ಸಂವಿಧಾನ ತಿದ್ದುಪಡಿ ಮಸೂದೆ ವಿರುದ್ಧ ಮತ ಚಲಾಯಿಸುವುದಾಗಿ 237 ಸದಸ್ಯರನ್ನು ಹೊಂದಿರುವ 'ಇಂಡಿಯಾ' ಮೈತ್ರಿಕೂಟವು ಈಗಾಗಲೇ ಘೋಷಿಸಿದೆ. ಅಕಾಲಿದಳವು ಮತ

ಚಲಾಯಿಸುತ್ತದೆಯೋ ಅಥವಾ ಗೈರುಹಾಜರಾಗುತ್ತದೆಯೋ ಎಂಬುದು ಸ್ಪಷ್ಟವಾಗಿಲ್ಲ. ಕ್ಷೇತ್ರ ಮರುವಿಂಗಡಣೆಯನ್ನು ಬೆಂಬಲಿಸುವುದಾಗಿ ಬಿಆರ್‌ಎಸ್, ವೈಎಸ್‌ಆರ್ ಕಾಂಗ್ರೆಸ್ ಪ್ರಕಟಿಸಿದೆ.

- ಪಶ್ಚಿಮ ಬಂಗಾಳ ಚುನಾವಣೆಯ ಸಂದರ್ಭದಲ್ಲಿ ಸಂಸದರನ್ನು ಸದನಕ್ಕೆ ಕಳುಹಿಸಲು ಟಿಎಂಸಿ ಹಿಂದೇಟು ಹಾಕಿತ್ತು ಇದಕ್ಕೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಸಂಸದರನ್ನು ಸದನಕ್ಕೆ ಕಳುಹಿಸಲು ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರೊಂದಿಗೆ ಮಾತುಕತೆ ನಡೆಸುವಂತೆ ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಸಲಹೆ ನೀಡಿದ್ದರು. ಶುಕ್ರವಾರ ನಡೆಯುವ ಮತದಾನದ ಸಂದರ್ಭದಲ್ಲಿ ಟಿಎಂಸಿಯ ಕನಿಷ್ಠ 20 ಸಂಸದರು ಸದನದಲ್ಲಿ ಹಾಜರಿರಬೇಕು ಎಂದು ಮೈತ್ರಿಕೂಟದ ನಾಯಕರು ಒತ್ತಡ ಹೇರಿದ್ದಾರೆ. ಒಂದು ವೇಳೆ, ಮತದಾನದ ಸಂದರ್ಭದಲ್ಲಿ 237 ಸಂಸದರು ಹಾಜರಿರದಿದ್ದರೆ ವಿಪಕ್ಷದ ಒಡಕು ಮತ್ತೊಮ್ಮೆ ಬಯಲಾಗಲಿದೆ.

## ❖ ಪಶ್ಚಿಮ ಬಂಗಾಳ: ಚುನಾವಣಾ ಆಯೋಗಕ್ಕೆ 'ಸುಪ್ರೀಂ' ಸೂಚನೆ: ಅರ್ಜಿ ಇತ್ಯರ್ಥವಾದವರಿಗೆ ಮತದ ಹಕ್ಕು

**ಸಂದರ್ಭ: ಮತದಾರರ ಪಟ್ಟಿಯಿಂದ ತಮ್ಮ ಹೆಸರುಗಳನ್ನು ತಪ್ಪಾಗಿ ಕೈಬಿಡಲಾಗಿದೆ ಎಂದು ಆಕ್ಷೇಪಿಸಿದ ಮತದಾರರ ಅರ್ಜಿಗಳನ್ನು ಇತ್ಯರ್ಥಪಡಿಸಿದ್ದಲ್ಲಿ ಅಂಥವರಿಗೆ ವಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಮತ ಚಲಾಯಿಸಲು ಅವಕಾಶ ನೀಡುವಂತೆ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಆದೇಶಿಸಿದೆ.**

- ಏಪ್ರಿಲ್ 21 ಹಾಗೂ 27ರ ಒಳಗಾಗಿ ಇಂತಹ ಅರ್ಜಿಗಳನ್ನು ಇತ್ಯರ್ಥಪಡಿಸಬೇಕು ಹಾಗೂ ಇಂಥ ಮತದಾರರ ಹೆಸರುಗಳನ್ನು ಒಳಗೊಂಡ ಪೂರಕ ಪರಿಷ್ಕೃತ ಪಟ್ಟಿಯನ್ನು ಬಿಡುಗಡೆ ಮಾಡಬೇಕು ಎಂದೂ ಸುಪ್ರೀಂ ಕೋರ್ಟ್ ಸೂಚಿಸಿದೆ. ಪಶ್ಚಿಮ ಬಂಗಾಳದಲ್ಲಿ ಏಪ್ರಿಲ್ 23 ಹಾಗೂ 29ರಂದು ಮತದಾನ ನಡೆಯಲಿದೆ.
- ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರನ್ನು ಒಳಗೊಂಡ ಪೀಠವು ಏಪ್ರಿಲ್ 13ರಂದು ಹೊರಡಿಸಿರುವ ಆದೇಶದಲ್ಲಿ ಈ ಸೂಚನೆ ನೀಡಿದೆ.
- **ಸಂವಿಧಾನದ 2ನೇ ವಿಧಿಯಡಿ ದತ್ತವಾದ ಅಧಿಕಾರ ಬಳಸಿ ಚುನಾವಣಾ ಆಯೋಗಕ್ಕೆ ನ್ಯಾಯಪೀಠ ಈ ನಿರ್ದೇಶನ ನೀಡಿದೆ.**
- 'ತಮ್ಮ ಹೆಸರುಗಳನ್ನು ಪುನಃ ಮತದಾರರ ಪಟ್ಟಿಯಲ್ಲಿ ಸೇರಿಸುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿಗಳನ್ನು ಮೇಲ್ಮನವಿ ನ್ಯಾಯಮಂಡಳಿಯು ಮತದಾನದ ದಿನಾಂಕಕ್ಕೂ ಮೊದಲು ಇತ್ಯರ್ಥಪಡಿಸಿದಲ್ಲಿ ಅಂಥ ಮತದಾರರಿಗೆ ತಮ್ಮ ಹಕ್ಕು ಚಲಾಯಿಸಲು ಅವಕಾಶ ನೀಡಬೇಕು ಇವರ ಹೆಸರುಗಳನ್ನು ಪೂರಕ ಪರಿಷ್ಕೃತ ಮತದಾರರ ಪಟ್ಟಿಯಲ್ಲಿ ಸೇರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಪೀಠ ಹೇಳಿದೆ.

## ❖ 'ಇರಾನ್ ಜೊತೆ ಒಪ್ಪಂದ ಸನ್ನಿಹಿತ'

**ಸಂದರ್ಭ: 'ದಶಕಗಳ ಕಾಲ ಇರಾನ್ ಪರಮಾಣು ಹೊಂದುವುದಿಲ್ಲ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.**

- 'ನಮ್ಮಲ್ಲಿ ಸಶಕ್ತವಾದ ಹೇಳಿಕೆ ಇದೆ. ಇರಾನ್‌ನವರು 20 ವರ್ಷಗಳಿಗಿಂತ ಹೆಚ್ಚು ಕಾಲ ಪರಮಾಣು ಶಸ್ತ್ರಾಸ್ತ್ರ ಹೊಂದಿರುವುದಿಲ್ಲ ಎಂದಿದ್ದಾರೆ' ಎಂದು ತಿಳಿಸಿದ್ದಾರೆ.
- 'ಇರಾನ್ ಜೊತೆಗೆ ಒಪ್ಪಂದವು ಸನ್ನಿಹಿತವಾಗಿದೆ. ಸಮೃದ್ಧ ಪ್ರಮಾಣದ ಯುರೇನಿಯಂ ಹಸ್ತಾಂತರಿಸುವುದು ಸೇರಿದಂತೆ ಬಹುತೇಕ ಬೇಡಿಕೆಗಳಿಗೆ ಇರಾನ್ ಒಪ್ಪಿದೆ' ಎಂದು ಶ್ವೇತಭವನದ ಮುಂದೆ ತಿಳಿಸಿದ್ದಾರೆ.
- 'ಒಪ್ಪಂದ ಏರ್ಪಟ್ಟರೆ, ಅದಕ್ಕೆ ಸಹಿ ಹಾಕಲು ನಾನೇ ಇಸ್ಲಾಮಾಬಾದ್ ಗೆ ತೆರಳಬಹುದು' ಎಂದು ಹೇಳಿದ್ದಾರೆ.



ಲೆಬನಾನ್ ಮೇಲೆ ದಾಳಿ ಮುಂದುವರಿಸಿದ ಇಸ್ರೇಲ್; ನಾಲ್ಕು ಸಾವು

# ಟ್ರಂಪ್ ವಿರುದ್ಧದ ನಿರ್ಣಯ ತಿರಸ್ಕಾರ

ವಾಷಿಂಗ್ಟನ್ (ಎಪಿ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್ ವಿರುದ್ಧ ನಡೆಸುತ್ತಿರುವ ಯುದ್ಧಕ್ಕೆ ತಡೆ ಹಾಕುವ ಡೆಮಾಕ್ರಟಿಕ್ ಪಕ್ಷದ ಪ್ರಯತ್ನವನ್ನು ರಿಪಬ್ಲಿಕನ್ ಪಕ್ಷದ ಸಂಸದರು ತಿರಸ್ಕರಿಸಿದ್ದಾರೆ.

'ಯುದ್ಧ ಅಧಿಕಾರ'ವನ್ನು ಅಮೆರಿಕದ ಅಧ್ಯಕ್ಷರಿಗೆ ಬಿಟ್ಟುಕೊಡುವಂತೆ ರಿಪಬ್ಲಿಕನ್ ಸಂಸದರು ಮತ ಚಲಾಯಿಸಿದ್ದಾರೆ.

'ಅಧ್ಯಕ್ಷರಿಗೆ ಇರುವ ಯುದ್ಧ ಅಧಿಕಾರ' ವಿಷಯದಲ್ಲಿ ಟ್ರಂಪ್ ವಿರುದ್ಧ ಈ ವರ್ಷ ಮಂಡನೆ ಆಗುತ್ತಿರುವ ನಾಲ್ಕನೆಯ ನಿರ್ಣಯ ಇದಾಗಿದೆ. ಈ ಬಾರಿ ಡೆಮಾಕ್ರಟಿಕ್ ಪಕ್ಷದ ಪರವಾಗಿ 47 ಹಾಗೂ ರಿಪಬ್ಲಿಕನ್ ಪರವಾಗಿ 52 ಮತಗಳು ಚಲಾವಣೆಗೊಂಡಿವೆ.

ಯುದ್ಧ ಅಧಿಕಾರವನ್ನು ಅಧ್ಯಕ್ಷರಿಗೆ ಬಿಟ್ಟುಕೊಡಬೇಕು ಎನ್ನುವುದರ ಪರವಾಗಿ ರಿಪಬ್ಲಿಕನ್ ಸಂಸದರು ಮತ ಚಲಾಯಿಸಿದ್ದರೂ, ಹೆಚ್ಚಿನ ಸಂಸದರು ಯುದ್ಧ ಆದಷ್ಟು ಬೇಗ ಕೊನೆಗೊಳ್ಳಬೇಕು ಎಂಬ ಅಭಿಪ್ರಾಯ ಹೊಂದಿದ್ದಾರೆ.

'ಯುದ್ಧದ ಅಧಿಕಾರವನ್ನು ಅಮೆರಿಕದ ಅಧ್ಯಕ್ಷರಿಗೆ ನೀಡುವುದು ಕಾನೂನುಬಾಹಿರ ಮತ್ತು ನ್ಯಾಯಸಮ್ಮತ ಅಲ್ಲ' ಎಂದು ಡೆಮಾಕ್ರಟಿಕ್ ಪಕ್ಷದ ಮುಖಂಡರು ಅಭಿಪ್ರಾಯಪಟ್ಟಿದ್ದಾರೆ.

ಯುದ್ಧದ ಸಂದರ್ಭದಲ್ಲಿ ಟ್ರಂಪ್ ನಾಯಕತ್ವದಲ್ಲಿ ಹೆಚ್ಚಿನ ವಿಶ್ವಾಸ ಹೊಂದಿರುವುದಾಗಿ ಸಂಸದರು ಹೇಳಿದ್ದಾರೆ.

'ಪಶ್ಚಿಮ ಏಷ್ಯಾ ಸಂಘರ್ಷದ ವಿಷಯದಲ್ಲಿ ಗಡುವಿನ ನಂತರ ಈಗ ಅಂತಿಮ ನಿರ್ಧಾರ ಕೈಗೊಳ್ಳುವ ಸಮಯ ಹತ್ತಿರ ಬಂದಿದೆ' ಎಂದು ರಿಪಬ್ಲಿಕನ್ ಸಂಸದ ಥಾಮ್ ಟಿಲ್ಲಿಸ್ ಹೇಳಿದ್ದಾರೆ.

ಹಿಜ್ಬುಲ್ಲಾ ಬಂಡುಕೋರರನ್ನು ಗುರಿಯಾಗಿಸಿ ಲೆಬನಾನ್‌ನ ಕೆಫರ್ ಟಿಬ್ನಿಟ್ ಪ್ರದೇಶದ ಮೇಲೆ ಇಸ್ರೇಲ್ ನಡೆಸಿದ ದಾಳಿ ಬಳಿಕ ದಟ್ಟ ಹೊಗೆ ಎದ್ದಿರುವುದು – ಎಎಫ್‌ಪಿ ಚಿತ್ರ

**ಲೆಬನಾನ್ ಜತೆಗೆ ನಡೆಯುತ್ತಿರುವ ಮಾತುಕತೆಯು ಹಿಜ್ಬುಲ್ಲಾ ಬಂಡುಕೋರರ ನಿಶಸ್ತ್ರೀಕರಣ ಮತ್ತು ಸುಸ್ಥಿರ ಶಾಂತಿ ಮರುಸ್ಥಾಪನೆ ಎಂಬ ಎರಡು ಗುರಿಗಳನ್ನು ಒಳಗೊಂಡಿದೆ**

**ಬೆಂಜಮಿನ್ ನೆತನ್ಯಾಹು,** ಇಸ್ರೇಲ್ ಪ್ರಧಾನಿ

## ಲೆಬನಾನ್ ಮೇಲೆ ಇಸ್ರೇಲ್ ದಾಳಿ

ಹಿಜ್ಬುಲ್ಲಾ ಬಂಡುಕೋರರನ್ನು ಗುರಿಯಾಗಿಸಿ ಗುರುವಾರ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಲೆಬನಾನ್‌ನ ನಾಲ್ವರು ರಕ್ಷಣಾ ಕಾರ್ಯಕರ್ತರು ಮೃತಪಟ್ಟಿದ್ದಾರೆ. ಆರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ಉಭಯ ದೇಶಗಳು ವಾಷಿಂಗ್ಟನ್‌ನಲ್ಲಿ ಐತಿಹಾಸಿಕ ಮಾತುಕತೆ ನಡೆಸಿದ ಬೆನ್ನಲ್ಲೇ ದಾಳಿ ನಡೆದಿದೆ.

ದಾಳಿ ಬಗ್ಗೆ ಪರಿಶೀಲಿಸುವುದಾಗಿ ಇಸ್ರೇಲ್ ಹೇಳಿದೆ. 'ಇದು ಅಂತರರಾಷ್ಟ್ರೀಯ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ' ಎಂದು ಲೆಬನಾನ್ ಆರೋಗ್ಯ ಸಚಿವಾಲಯ ಹೇಳಿದೆ.

## ಕದನ ವಿರಾಮ–ಲೆಬನಾನ್ ಸ್ವಾಗತ

ಬೈರೂತ್ (ಎಪಿ): ಇಸ್ರೇಲ್ ಹಾಗೂ ತಮ್ಮ ದೇಶದ ನಡುವೆ ಕದನ ವಿರಾಮ ಏರ್ಪಟ್ಟಿರುವುದನ್ನು ಲೆಬನಾನ್‌ನ ಪ್ರಧಾನಿ ನವಾಫ್ ಸಲಾಂ ಸ್ವಾಗತಿಸಿದ್ದಾರೆ.

## 'ಹೊರ್ಮುಜ್ ಮುಕ್ತಗೊಳಿಸಿ'

ದುಬೈ(ಎಪಿ): ಹೊರ್ಮುಜ್ ಜಲಸಂಧಿ ವಿಷಯದಲ್ಲಿ ಇರಾನ್ ಸಾರ್ವಭೌಮತೆ, ಭದ್ರತೆ ಮತ್ತು ಕಾನೂನುಬದ್ಧ ಹಕ್ಕುಗಳನ್ನು ಗೌರವಿಸುವುದರ ಜತೆಯಲ್ಲೇ, ಈ ಮಾರ್ಗದಲ್ಲಿ ಎಲ್ಲ ದೇಶಗಳಿಗೆ ಸಂಚಾರ ಸ್ವಾತಂತ್ರ್ಯ ಮತ್ತು ಸುರಕ್ಷತೆಯನ್ನು ಖಾತರಿಪಡಿಸಬೇಕು' ಎಂದು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ, ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರಿಗೆ ದೂರವಾಣಿ ಕರೆ ಮೂಲಕ ಮನವಿ ಮಾಡಿದ್ದಾರೆ.

## 'ಒಪ್ಪಂದ ಸನ್ನಿಹಿತ'

ಒಂದನೇ ಪುಟದಿಂದ...

ಇರಾನ್ ಜೊತೆಗಿನ ಕದನವಿರಾಮವು ಇದೇ ಏಪ್ರಿಲ್ 21ಕ್ಕೆ ಕೊನೆಗೊಳ್ಳಲಿದ್ದು, ಅದನ್ನು ವಿಸ್ತರಿಸುವ ಸಾಧ್ಯತೆ ಕಾಣುತ್ತಿಲ್ಲ. ಅದಕ್ಕೂ ಮುಂಚಿತವಾಗಿಯೇ ಒಪ್ಪಂದ ಏರ್ಪಡುವ ಸಾಧ್ಯತೆಯಿದೆ.

ಅಮೆರಿಕ ಹಾಗೂ ಇರಾನ್ ನಡುವಿನ ಸಭೆಯು ಈ ವಾರಾಂತ್ಯದಲ್ಲಿ ನಡೆಯಲಿದೆ.

'ಇರಾನ್ ಜೊತೆಗೆ ಒಪ್ಪಂದ ಏರ್ಪಡದಿದ್ದರೆ, ಯುದ್ಧವು ಮತ್ತೆ ಆರಂಭಗೊಳ್ಳಲಿದೆ. ಹೊರ್ಮುಜ್ ಜಲಸಂಧಿಯಲ್ಲಿ ಅಮೆರಿಕದ ನಿರ್ಬಂಧವೂ ಮುಂದುವರಿಯಲಿದೆ' ಎಂದು ಟ್ರಂಪ್ ಈ ವೇಳೆ ಸ್ಪಷ್ಟಪಡಿಸಿದ್ದಾರೆ.

## ಇಸ್ರೇಲ್, ಅಮೆರಿಕ ಗುರಿ ಒಂದೇ; ನೆತನ್ಯಾಹು

ಜೆರುಸಲೇಂ (ಪಿಟಿಐ): 'ಇಸ್ರೇಲ್ ಮತ್ತು ಅಮೆರಿಕದ ಗುರಿಗಳು ಒಂದೇ, ಯಾವುದೇ ಸನ್ನಿವೇಶಕ್ಕೂ ಸಿದ್ಧ' ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.

'ಇರಾನ್ ಯುರೇನಿಯಂ ಸಮೃದ್ಧೀಕರಣವನ್ನು ತಡೆಯುವುದು ಮತ್ತು ಕಡಲ ಮಾರ್ಗವನ್ನು ಮುಕ್ತಗೊಳಿಸುವುದು ಅಮೆರಿಕ ಮತ್ತು ಇಸ್ರೇಲ್‌ನ ಪ್ರಮುಖ ಗುರಿಗಳಾಗಿವೆ' ಎಂದು ನೆತನ್ಯಾಹು ಪುನರುಚ್ಚರಿಸಿದ್ದಾರೆ.

'ಸಮೃದ್ಧೀಕರಿಸಿದ ಯುರೇನಿಯಂ ಅನ್ನು ಇರಾನ್‌ನಿಂದ ಪೂರ್ಣವಾಗಿ ತೆಗೆದುಹಾಕುತ್ತೇವೆ ಹಾಗೂ ಆ ದೇಶದ ಯುರೇನಿಯಂ ಸಮೃದ್ಧೀಕರಣ ಸಾಮರ್ಥ್ಯವನ್ನು ನಾಶಪಡಿಸುತ್ತೇವೆ. ಆದರೆ, ಇದು ಹೇಗೆ ಎನ್ನುವುದನ್ನು ಇಷ್ಟು ಬೇಗ ಹೇಳಲು ಆಗುವುದಿಲ್ಲ' ಎಂದು ಅವರು ಹೇಳಿದ್ದಾರೆ.

**ದಿಗ್ಬಂಧನ ತೆರವುಗೊಳಿಸದಿದ್ದರೆ ಅಡ್ಡಿ:** ಅಮೆರಿಕದ ನೌಕಾ ದಿಗ್ಬಂಧನಕ್ಕೆ ಪ್ರತಿಯಾಗಿ ಪಶ್ಚಿಮ ಏಷ್ಯಾ ವಲಯದ ವ್ಯಾಪಾರಕ್ಕೆ ಅಡ್ಡಿಪಡಿಸುವುದಾಗಿ ಇರಾನ್ ಬೆದರಿಕೆ ಒಡ್ಡಿದೆ.

'ಇರಾನ್ ಬಂದರುಗಳ ಮೇಲೆ ಅಮೆರಿಕ ಹೇರಿರುವ ದಿಗ್ಬಂಧನ ತೆರವುಗೊಳಿದಿದ್ದರೆ ಕೊಲ್ಲಿ ದೇಶಗಳ ವ್ಯಾಪಾರಕ್ಕೆ ಅಡ್ಡಿಪಡಿಸುವುದಾಗಿ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್ ಹೇಳಿದೆ.

**ಶ್ವೇತಭವನಕ್ಕೆ ಆಹ್ವಾನ:** ಕದನ ವಿರಾಮಕ್ಕೆ ಒಪ್ಪಿಕೊಂಡ ನಂತರ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮತ್ತು ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ಅವರನ್ನು ಶ್ವೇತಭವನಕ್ಕೆ ಆಹ್ವಾನಿಸಿದ್ದೇನೆ' ಎಂದು ಟ್ರಂಪ್ ಟ್ರೂತ್ ಸೋಷಿಯಲ್ ತಾಣದಲ್ಲಿ ಹೇಳಿದ್ದಾರೆ.

Publication Date 17/04/2026

Presented by

## ❖ ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ತಾರತಮ್ಯ ತಡೆಗೆ ಸರ್ಕಾರದ ಕ್ರಮ: 'ರೋಹಿತ್ ವೇಮುಲ' ಮಸೂದೆಗೆ ಅಸ್ತು

**ಸಂದರ್ಭ: ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಇತರ ಹಿಂದುಳಿದ ವರ್ಗಗಳು ಹಾಗೂ ಧಾರ್ಮಿಕ ಅಲ್ಪಸಂಖ್ಯಾತರಿಗೆ ಸಮಾನ ಅವಕಾಶ ಮತ್ತು ಶಿಕ್ಷಣದ ಹಕ್ಕು ಕಲ್ಪಿಸುವ ಉದ್ದೇಶದಿಂದ ರೂಪಿಸಿರುವ 'ಕರ್ನಾಟಕ ರೋಹಿತ್ ವೇಮುಲ ಮಸೂದೆಗೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.**

- ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ತಾರತಮ್ಯ ತಡೆಯಲು 'ಕರ್ನಾಟಕ ರೋಹಿತ್ ವೇಮುಲ' (ಬಹಿಷ್ಕಾರ ಅಥವಾ ಅನ್ಯಾಯ ತಡೆಗಟ್ಟುವಿಕೆ) (ಶಿಕ್ಷಣ ಮತ್ತು ಘನತೆಯ ಹಕ್ಕು ಮಸೂದೆಯನ್ನು ಸರ್ಕಾರ ರೂಪಿಸಿದೆ.
- 'ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಯಾರೊಬ್ಬರೂ ಜಾತಿ ಆಧಾರದಲ್ಲಿ ತಾರತಮ್ಯ ಎದುರಿಸಬಾರದು ಇದನ್ನು ಖಾತ್ರಿಪಡಿಸಲು 'ರೋಹಿತ್ ವೇಮುಲ ಕಾಯ್ದೆ ಹೆಸರಿನ ಕಾನೂನು ಕರ್ನಾಟಕ ದಲ್ಲೂ ರೂಪಿಸಿ, ಜಾರಿಗೊಳಿಸಬೇಕು' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಹಿಂದೆ ಪತ್ರ ಬರೆದು ಆಗ್ರಹಿಸಿದ್ದರು.
- ಮಸೂದೆಯು ಕಾಯ್ದೆಯಾಗಿ ಜಾರಿಗೆ ಬಂದ ನಂತರ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವರ್ಗಗಳು, ಹಾತಿಗಳು ಮತಗಳು, ಲಿಂಗ, ದೇಶ ಎಂಬ ತಾರತಮ್ಯ ಇಲ್ಲದೆ ಮುಕ್ತ ವಾತಾವರಣ ಇರಲಿದೆ. ಈ ಸಂಸ್ಥೆಗಳಲ್ಲಿನ ಪ್ರವೇಶವು ಜಾತಿ, ವರ್ಗ, ಮತ, ಲಿಂಗ ಅಥವಾ ದೇಶ ಎಂಬ ಭೇದ ಇಲ್ಲದೆ ಎಲ್ಲರಿಗೂ ಮುಕ್ತವಾಗಿರುತ್ತದೆ. ಅರ್ಹತಾ ಪರೀಕ್ಷೆಗಳಲ್ಲಿನ ಅಂಕಗಳ ಆಧಾರದಲ್ಲಿ ಪ್ರವೇಶಾತಿ ಸಿಗಲಿದೆ. ನಿಯಮವನ್ನು ಉಲ್ಲಂಘಿಸಿದ ವ್ಯಕ್ತಿಗಳಿಗೆ ಒಂದು ವರ್ಷ ಜೈಲು ಶಿಕ್ಷೆ, 10 ಸಾವಿರ ದಂಡ ವಿಧಿಸಲು ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.
- ಸಂತ್ರಸ್ತನಿಗೆ ಆರೋಪಿಯು ಸೂಕ್ತ ಪರಿಹಾರ ನೀಡುವಂತೆ ನ್ಯಾಯಾಲಯ ಅನುಮತಿಸಲು ಕೂಡ ಅವಕಾಶ ಸಿಗಲಿದೆ ಆ ಮೊತ್ತವು ಗರಿಷ್ಠ 21 ಲಕ್ಷದವರೆಗೆ ಮತ್ತು ಅದಕ್ಕೆ ಹೆಚ್ಚುವರಿಯಾಗಿ ಬಡ್ಡಿಯೂ ಇರಲಿದೆ. ಈ ಹಿಂದೆ ಅಪರಾಧ ಎಸಗಿದ ಕಾರಣಕ್ಕೆ ಶಿಕ್ಷೆಗೊಳಗಾದವರು ಮತ್ತೆ ಈ ಕಾಯ್ದೆಯಡಿ ಶಿಕ್ಷೆಗೆ ಒಳಗಾದರೆ, ಅಂಥವರಿಗೆ ಕನಿಷ್ಠ ಮೂರು ವರ್ಷಗಳ ಜೈಲು ಶಿಕ್ಷೆ ವಿಧಿಸಲು ಮತ್ತು ₹1 ಲಕ್ಷ ದಂಡ ವಿಧಿಸಬೇಕೆಂಬ ಪ್ರಸ್ತಾವವೂ ಈ ಮಸೂದೆಯಲ್ಲಿದೆ.

- ಈ ಕಾಯ್ದೆಯಡಿ ಎಸಗುವ ಪ್ರತಿಯೊಂದು ಅಪರಾಧವು ಸಂಜೆಯ ಮತ್ತು ಜಾಮೀನು ರಹಿತ ಎಂದು ಪರಿಗಣಿಸಲಾಗುವುದು ಕಾಯ್ಕೆಯ ನಿಬಂಧನೆಗಳನ್ನು ಉಲ್ಲಂಘಿಸುವ ಸಂಸ್ಥೆಗೆ ರಾಜ್ಯ ಸರ್ಕಾರವು ಯಾವುದೇ ಆರ್ಥಿಕ ನೆರವು ಅಥವಾ ಅನುದಾನ ನೀಡಬಾರದು ಅಪರಾಧ ಎಸಗುವ ಪ್ರತಿಯೊಬ್ಬ ವ್ಯಕ್ತಿ ಮತ್ತು ಕೃತ್ಯ ಎಸಗಲು ಇನ್ನೊಬ್ಬರಿಗೆ ಸಹಾಯ ಮಾಡುವ ಅಥವಾ ಪ್ರಚೋದಿಸುವ ವ್ಯಕ್ತಿ ಕೂಡ ಅವರಾಧದಲ್ಲಿ ಭಾಗವಹಿಸಿದ್ದಾರೆಂದು ಪರಿಗಣಿಸಲಾಗುತ್ತದೆ ಎಂದು ಮಸೂದೆ ಪ್ರಸ್ತಾಪಿಸಿದ

## ❖ ಜಿಡಿಪಿ: ಶೇ 6.3ರಷ್ಟು ಪ್ರಗತಿ ನಿರೀಕ್ಷೆ

**ಸಂದರ್ಭ: ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕಚ್ಚಾ ತೈಲ ದರವು ಪ್ರತಿ ಬ್ಯಾರಲ್‌ಗೆ ಸರಾಸರಿ 130 ಡಾಲರ್‌ಗೆ ತಲುಪಿದರೆ, ಭಾರತದ ಆರ್ಥಿಕ ಬೆಳವಣಿಗೆ ದರ ಶೇ 6.3ರಷ್ಟಾಗುವ ನಿರೀಕ್ಷೆ ಇದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ರೇಟಿಂಗ್ ಹೇಳಿದೆ.**

- ಭಾರತದಲ್ಲಿ ಸಾಲದ ಹೊರೆಯನ್ನು ತಗ್ಗಿಸಿಕೊಳ್ಳುವ ರಾಜಕೀಯ ಬದ್ಧತೆ ಇದೆ. ಹೀಗಾಗಿ ತೈಲ ಬೆಲೆ ಏರಿಕೆಯಿಂದ ಉಂಟಾಗುವ ಹಣಕಾಸಿನ ಒತ್ತಡವು ದೇಶದ ಕ್ರೆಡಿಟ್ ರೇಟಿಂಗ್ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿಲ್ಲ ಎಂದು ಹೇಳಿದೆ.
- 2026-27ರಲ್ಲಿ ಕಚ್ಚಾ ತೈಲ ದರವು ಪ್ರತಿ ಬ್ಯಾರಲ್‌ಗೆ 85 ಡಾಲರ್ಗೆ ತಲುಪಿದರೆ ದೇಶದ ಜಿಡಿಪಿ ಶೇ.7.1ರಷ್ಟಾಗಲಿದೆ ಎಂದು ಎಸ್ ಆ್ಯಂಡ್ ಪಿ ನಿರ್ದೇಶಕ (ಸಾವರಿನ್ ಮತ್ತು ಅಂತರರಾಷ್ಟ್ರೀಯ ಸಾರ್ವಜನಿಕ ಹಣಕಾಸು ರೇಟಿಂಗ್ಸ್) ಯೀ ಫಾರ್ನ್ ಪುವಾ ಹೇಳಿದ್ದಾರೆ.

## ❖ ಸಾಮಾನ್ಯ ಜಾತಿಗಳಿಗಿಂತ ಮೂರು ಪಟ್ಟು ಹಿಂದುಳಿದಿರುವ ಎಸ್ಸಿ-ಎಸ್ಟಿ: ಸಮೀಕ್ಷೆ

**ಸಂದರ್ಭ: ತೆಲಂಗಾಣದಲ್ಲಿ ಪರಿಶಿಷ್ಟ ಜಾತಿ (ಎಸ್ಸಿ) ಪರಿಶಿಷ್ಟ ಪಂಗಡ (ಎಸ್ಟಿ) ಸಮುದಾಯವು ಸಾಮಾನ್ಯ ವರ್ಗದ ಜನರಿಗಿಂತಲೂ ಮೂರು ಪಟ್ಟು ಹಿಂದುಳಿದಿದೆ ಹಿಂದುಳಿದ ವರ್ಗದ ಸಮುದಾಯ ಜನರು ರಾಜ್ಯದ ಸರಾಸರಿಗಿಂತಲೂ ಶೇಕಡ 2.7ರಮ್ಮ ಹಿಂದುಳಿದಿದ್ದಾರೆ' ಎಂದು ಸಾಮಾಜಿಕ ಆರ್ಥಿಕ ಶೈಕ್ಷಣಿಕ, ಔದ್ಯೋಗಿಕ ರಾಜಕೀಯ ಹಾಗೂ ಜಾತಿ ಆಧಾರಿತ ಸಮೀಕ್ಷೆ-2024ರಲ್ಲಿ ಕಂಡುಬಂದಿದೆ.**

- ಒಟ್ಟು ಜನಸಂಖ್ಯೆಯಲ್ಲಿ ಮುಸಲ್ಮಾನರು ಸೇರಿ ಹಿಂದುಳಿದ ವರ್ಗದ ಪ್ರಮಾಣ ಶೇ 56.4 (2.35 ಕೋಟಿ) ಉಳಿದಂತೆ ಪರಿಶಿಷ್ಟ ಜಾತಿ ಶೇ 174 (62 25 ಲಕ್ಷ) ಸಾಮಾನ್ಯ ವರ್ಗ ಶೇ 11.9 (42.42 ಲಕ್ಷ), ಪರಿಶಿಷ್ಟ ವಂಗಡ ಶೇ 10.4 (37 14 ಲಕ್ಷ) ದಮ್ಮ ಜನರಿದ್ದಾರೆ.

Dr. Rajkumar's KAS Academy

## ❖ ಹೊರ್ಮುಜ್ ಈಗ ಮುಕ್ತ

**ಸಂದರ್ಭ: 'ಲೆಬನಾನ್-ಇಸ್ರೇಲ್ ಕದನ ವಿರಾಮದ ಉಳಿದ ಅವಧಿವರೆಗೆ (ಏ.27ರವರೆಗೆ) ಹೊರ್ಮುಜ್ ಜಲಸಂಧಿ ಯನ್ನು ಎಲ್ಲ ವಾಣಿಜ್ಯ ಹಡಗುಗಳ ಸಂಚಾರಕ್ಕೆ ಪೂರ್ಣವಾಗಿ ಮುಕ್ತ ಗೊಳಿಸಲಾಗಿದೆ' ಎಂದು ಇರಾನ್ ಹೇಳಿದೆ.**

- ಲೆಬನಾನ್-ಇಸ್ರೇಲ್ ಮಧ್ಯೆ 10 ದಿನಗಳ ತಾತ್ಕಾಲಿಕ ಕದನ ವಿರಾಮ ಗುರುವಾರದಿಂದ ಜಾರಿಗೆ ಬಂದಿದೆ. ಇದರ ಬೆನ್ನಲ್ಲೇ ಇರಾನ್ ಈ ಮಹತ್ವದ ಘೋಷಣೆ ಮಾಡಿದೆ.
- 'ಹೊರ್ಮುಜ್ ಜಲಸಂಧಿಯನ್ನು ಪೂರ್ಣವಾಗಿ ಮುಕ್ತಗೊಳಿಸಲಾಗಿದೆ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಷ್ಟ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.
- ಇರಾನ್ ನಿರ್ಧಾರ ವನ್ನು ಸ್ವಾಗತಿ ಸಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಟೂಥ್ ಸೋಷಿಯಲ್ ಸಾಮಾಜಿಕ ಜಾಲತಾಣದಲ್ಲಿ 'ಥ್ಯಾಂಕ್ಯೂ' ಎಂದು ಪೋಸ್ಟ್ ಮಾಡಿದ್ದಾರೆ. ಶೀಘ್ರದೇ ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳ್ಳುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

## ❖ ಜಲಮಂಡಳಿಗೆ ಐಎಸ್‌ಒ ಮಾನ್ಯತೆ

**ಸಂದರ್ಭ: ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯು ಅಂತರರಾಷ್ಟ್ರೀಯ ಮಟ್ಟದಲ್ಲಿ ಐಎಸ್‌ಒ 50001: 2018 ಪ್ರಮಾಣಪತ್ರ ಪಡೆದಿದೆ. ಈ ಪ್ರಮಾಣಪತ್ರ ಪಡೆದ ದೇಶದ ಮೊದಲ ಜಲ ಮಂಡಳಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.**

- ಬ್ಯೂರೋ ವೆರಿಟಾಸ್ ಅಧಿಕೃತವಾಗಿ ನೀಡಿರುವ ಈ ಪ್ರತಿಷ್ಠಿತ ಪ್ರಮಾಣಪತ್ರವು, ಮಂಡಳಿಯ ಅತ್ಯುತ್ತಮ ಇಂಧನ ನಿರ್ವಹಣಾ ವ್ಯವಸ್ಥೆಗಳನ್ನು ಔಪಚಾರಿಕವಾಗಿ ಗುರುತಿಸಿದೆ.
- ಮಂಡಳಿಯ ಕಾವೇರಿ ಜಲಸಂಗ್ರಹದ ಮೂಲವಾದ ಮಂಡ್ಯ ಜಿಲ್ಲೆಯ ತೊರೆಕಾಡನಹಳ್ಳಿ. ಕನಕಪುರ ತಾಲ್ಲೂಕಿನ ಹಾರೋಹಳ್ಳಿ, ಮತ್ತು ತಾತಗುಣಿ ಮೂರು ಪ್ರಮುಖ ಸ್ಥಳಗಳಲ್ಲಿರುವ ತನ್ನ ಬೃಹತ್ ನೀರು ಸರಬರಾಜು ಪಂಪಿಂಗ್ ಸ್ಟೇಷನ್ನಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ನಿರ್ವಹಿಸುತ್ತಿರುವುದಕ್ಕಾಗಿ ಜಲಮಂಡಳಿಗೆ ಈ ಪ್ರಮಾಣಪತ್ರವನ್ನು ನೀಡಿ ಗೌರವಿಸಲಾಗಿದೆ.
- ಪ್ರಮಾಣ ಪತ್ರವು ಕಾವೇರಿ ಭವನದಲ್ಲಿರುವ ಪ್ರಧಾನ ಕಚೇರಿಯ ಪ್ರಮುಖ ಪೂರಕ ಕಾರ್ಯಗಳನ್ನು ಹಾಗೂ ಬೃಹತ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ನಿರಂತರ ನೀರು ಸರಬರಾಜು ಮಾಡುವ ಒಟ್ಟಾರೆ ಪ್ರಕ್ರಿಯೆಯನ್ನು ಒಳಗೊಂಡಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ.ರಾಮಮನೋಹರ್ ಪ್ರಸಾತ್ ತಿಳಿಸಿದ್ದಾರೆ.
- ಈ ಮೈಲಿಗಲ್ಲನ್ನು ಸಾಧಿಸುವಲ್ಲಿ ಮುಖ್ಯ ಎಂಜಿನಿಯರ್ (ಯೋಜನೆ) ರಾಜೀವ್ ಮುಖ್ಯ ಎಂಜನಿಯರ್ (ಕೆ-ಒ ಅಂಡ್ ಎಂ) ರಾಜಶೇಖರ್ ಅವರ ಸಂಘಟಿತ ಪ್ರಯತ್ನದಿಂದ ಸಾಧ್ಯವಾಗಿದೆ. ಕಳೆದ ವರ್ಷವಷ್ಟೇ ಕೊಳವೆ ಮೂಲಕ ಕುಡಿಯುವ ನೀರು ಸರಬರಾಜು ನಿರ್ವಹಣಾ ವ್ಯವಸ್ಥೆಗಾಗಿ ಭಾರತೀಯ ಮಾನದಂಡಗಳ ಬ್ಯೂರೋ ಪ್ರಮಾಣಪತ್ರವನ್ನು ಪಡೆದಿತ್ತು ಎಂದು ಹೇಳಿದ್ದಾರೆ.

## ❖ ಬೆಂಗಳೂರಿನಲ್ಲಿ ಹಕ್ಕಿ ಜ್ವರ ದೃಢ

**ಸಂದರ್ಭ: ಇಲ್ಲಿನ ಹೊರವಲಯದ ಹೆಸರಘಟ್ಟದ ಮುತ್ತೂರು ಗ್ರಾಮದ ಕೋಳಿ ಸಾಕಾಣಿಕೆ ತರಬೇತಿ ಕೇಂದ್ರದಲ್ಲಿ ಹಕ್ಕಿ ಜ್ವರ ಪ್ರಕರಣ ದೃಢಪಟ್ಟಿದೆ.**

- ಈ ಕೇಂದ್ರದ ಕೋಳಿಯೊಂದರಲ್ಲಿ ಎಚ್ 5 ಎನ್1 ಸೋಂಕು ಕಾಣಿಸಿಕೊಂಡಿರುವುದನ್ನು ಭೋಪಾಲ್‌ನ ಐಸಿಎಆರ್-ರಾಷ್ಟ್ರೀಯ ಅಧಿಕ ಸುರಕ್ಷತೆಯ ಪ್ರಾಣಿ ರೋಗಗಳ ಸಂಸ್ಥೆ (ಎನ್‌ಐಎಚ್‌ಎಸ್‌ಎಡಿ) ಇದೇ 14ರಂದು ದೃಢಪಡಿಸಿದೆ. ರಾಜ್ಯ ಮತ್ತು ಜಿಲ್ಲಾ, ಕ್ಷಿಪ್ರ ಕಾರ್ಯಪಡೆ ತಂಡ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದ ತಂಡವು ಸ್ಥಳಕ್ಕೆ ಭೇಟಿ ನೀಡಿ, ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದೆ. ಮುತ್ತೂರು ಗ್ರಾಮದ 3 ಕಿ.ಮೀ ವ್ಯಾಪ್ತಿಯನ್ನು ಸೋಂಕಿತ ವಲಯವೆಂದು ಘೋಷಿಸಿ, 10 ಕಿ.ಮೀ ಪ್ರದೇಶವನ್ನು ಕಣಾವಲು ವಲಯವೆಂದು ಗುರುತಿಸಲಾಗಿದೆ.

## ❖ ಯಾಣ ಭೂಪಾರಂಪರಿಕ ತಾಣ: ಜಿಎಸ್‌ಐ ನಿರ್ಣಯ

**ಸಂದರ್ಭ: ಪ್ರಾಕೃತಿಕ ವೈಶಿಷ್ಟ್ಯದ ಯಾಣ ಪ್ರದೇಶವನ್ನು ರಾಷ್ಟ್ರೀಯ ಭೂಪಾರಂಪರಿಕ ತಾಣ ಎಂದು ಘೋಷಿಸಲು ಭಾರತೀಯ ಭೂವೈಜ್ಞಾನಿಕ ಸಮೀಕ್ಷೆ ಸಂಸ್ಥೆ (ಜಿಎಸ್‌ಐ) ತನ್ನ 176ನೇ ಸಂಸ್ಥಾಪನಾ ದಿನಾಚರಣೆ ಸಂದರ್ಭದಲ್ಲಿ ನಿರ್ಧರಿಸಿದೆ.**

- '2,700 ದಶಲಕ್ಷ ವರ್ಷಗಳ ಹಿಂದೆಸುಣ್ಣದ ಕಲ್ಲಿನ ರಚನೆಯಂತಹ ಬಂಡೆ ಗಳಿಂದ ರಚನೆಯಾದ ಅಪರೂಪದ ತಾಣವಾದ ಯಾಣ ಭೂ ಸಂರಕ್ಷಣೆ, ಭೂ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನೆ ಹಾಗೂ ಅಂತರಾಷ್ಟ್ರೀಯ ಮಟ್ಟದ ಪ್ರವಾಸೋದ್ಯಮ ತಾಣವಾಗಿಸಲು ರಾಷ್ಟ್ರೀಯ ಮಹತ್ವದ ಭೂಪಾರಂಪರಿಕ ತಾಣ ಎಂದು ಘೋಷಿಸಲು ನಿರ್ಧರಿಸಲಾಗಿದೆ' ಎಂದು ಜಿಎಸ್‌ಐ ಏ.13ರಂದುರಾಜ್ಯದ ಮುಖ್ಯ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ ತಿಳಿಸಿದೆ.
- 'ಯಾಣದಲ್ಲಿರುವ ಗುಹೆಗಳ ಸುಣ್ಣದ ಕಲ್ಲಿನ ರಚನೆಗಳು ಭೂದೃಶ್ಯದವ್ರತಿಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ನೈಸರ್ಗಿಕ ಪ್ರಯೋಗಾಲಯದಂತಿವೆ. ಈ ಸ್ಥಳವು ಹೆಚ್ಚಿನ ಭೌಗೋಳಿಕ ಮತ್ತು ಶೈಕ್ಷಣಿಕ ಮೌಲ್ಯವನ್ನು ಹೊಂದಿದ್ದು, ಜೀವವೈವಿಧ್ಯ ಸಮೃದ್ಧ ಪಶ್ಚಿಮ ಘಟ್ಟಗಳಲ್ಲಿ ಹುದುಗಿರುವ ಭೂರೂಪಗಳ ನಿಧಾನ ಭೂವೈಜ್ಞಾನಿಕ ಪ್ರಕ್ರಿಯೆಗಳ ಶಕ್ತಿಯನ್ನು ಪ್ರದರ್ಶಿಸುತ್ತವೆ. ಇಲ್ಲಿನಶಿಲೆಗಳನ್ನು ರಕ್ಷಿಸುವುದು, ಸಂರಕ್ಷಿಸು ವುದು ಮತ್ತು ನಿರ್ವಹಿಸು ವುದು ಅವಶ್ಯಕವಾಗಿದೆ. ಮುಂದಿನ ಪೀಳಿಗೆಯ ಜ್ಞಾನಕ್ಕಾಗಿ ಇಂತಹ ತಾಣದ ಸಂರಕ್ಷಣೆ ತುರ್ತು ಅಗತ್ಯ' ಎಂದು ಜಿಎಸ್‌ಐ ಹೇಳಿದೆ.
- 'ಇದರಿಂದ ಪ್ರವಾಸೋದ್ಯಮ ಅಭಿವೃದ್ಧಿಗೆ ಮೂಲಸೌಕರ್ಯಗಳಿಗೆ ಬಲಬರಬಹುದು ಗಣಿಗಾರಿಕೆ ನಡೆಸಿ ಪರಿಸರಕ್ಕೆ ಧಕ್ಕೆ ತರುವ ಚಟುವಟಿಕೆಗಳಿಗೆ ಕಡಿವಾಣ ಬೀಳಬಹುದು' ಎಂದು ಸ್ಥಳೀಯ ಜಿ.ಎಂ.ಶೆಟ್ಟಿ ಪ್ರತಿಕ್ರಿಯಿಸಿದ್ದಾರೆ

## ❖ 2023ರ ಕಾಯ್ದೆ ಜಾರಿಗೆ ಏ.16ರಂದು ಅಧಿಸೂಚನೆ ಪ್ರಕಟ: ವಿಪಕ್ಷಗಳಿಂದ ಕೇಂದ್ರಕ್ಕೆ ತರಾಟೆ

**ಸಂದರ್ಭ: ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿ ಕಲ್ಪಿಸಲು 2023ರಲ್ಲಿ ಸಂಸತ್ತಿನಲ್ಲಿ ಅಂಗೀಕರಿಸಿದ ಮಸೂದೆಯ ಜಾರಿಗೆ ಕೇಂದ್ರ ಕಾನೂನು ಸಚಿವಾಲಯ ಏ.16ರಂದು ಅಧಿಸೂಚನೆ ಹೊರಡಿಸಿದೆ. ಇದೇ ವಿಚಾರ ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದದಕ್ಕೆ ಲೋಕಸಭೆ ಶುಕ್ರವಾರ ಸಾಕ್ಷಿಯಾಯಿತು.**

- ಕಲಾಪ ಆರಂಭಗೊಳ್ಳುತ್ತಿರುವಂತೆಯೇ ಈ ವಿಚಾರ ಪ್ರಸ್ತಾಪಿಸಿ ಕೇಂದ್ರ ಸರ್ಕಾರದ ವಿರುದ್ಧ ಚಾಟಿ ಬೀಸಿದ ಕಾಂಗ್ರೆಸ್‌ನ ಕೆ.ಸಿ.ವೇಣುಗೋಪಾಲ್, 'ಮಹಿಳಾ ಮೀಸಲು ಕಾನೂನಿಗೆ ತಿದ್ದುಪಡಿ ಮಾಡುವ ಸಂವಿಧಾನ (131ನೇ ತಿದ್ದುಪಡಿ) ಮಸೂದೆ-2026 ಅನ್ನು ಮಂಡನೆ ಮಾಡಲಾಗಿದ್ದು ಈಗ ಅದರ ಬಗ್ಗೆ ಚರ್ಚೆ ನಡೆಯುತ್ತಿದೆ. ಆದರೆ, 2023ರಲ್ಲಿ ಅಂಗೀಕರಿಸಲಾದ ಮಹಿಳಾ ಮೀಸಲಾತಿ ಕಾಯ್ದೆ ಜಾರಿ ಕುರಿತು ಅಧಿಸೂಚನೆ ಹೊರಡಿಸಲಾಗಿದೆ' ಎಂದು ತರಾಟೆಗೆ ತೆಗೆದುಕೊಂಡರು.
- ಇದೇ ವಿಚಾರ ಪ್ರಸ್ತಾಪಿಸಿದ ಡಿಎಂಕೆ ಸಂಸದೆ ಕನಿಮೊಳಿ, 'ಮುಖ್ಯ ಕಾನೂನು ಜಾರಿ ಕುರಿತಂತೆ ಅಧಿಸೂಚನೆ ಹೊರಡಿಸಿದ ಬಳಿಕ, ಅದೇ ಕಾನೂನಿಗೆ ತಿದ್ದುಪಡಿ ತರುವ ಮಸೂದೆ ಕುರಿತು ಚರ್ಚೆ ನಡೆಸುವುದು ಎಷ್ಟು ಸರಿ' ಎಂದು ಅಚ್ಚರಿ ವ್ಯಕ್ತಪಡಿಸಿದರು.
- ಈ ಮಾತಿಗೆ ದನಿಗೂಡಿಸಿದ ಕಾಂಗ್ರೆಸ್‌ನ ಸಂಸದ ಹಿಬಿ ಈಡೆನ್ 'ಮಹಿಳಾ ಮೀಸಲಾತಿ ಕಾಯ್ದೆಯನ್ನು ಪಕ್ಷ ಬೆಂಬಲಿಸುತ್ತದೆ ಆದರೆ, ಇದನ್ನು ಕ್ಷೇತ್ರಗಳ ಮರುವಿಂಗಡಣೆಯೊಂದಿಗೆ ಬೆಸೆಯುವುದಕ್ಕೆ ವಿರೋಧ ಇದೆ' ಎಂದರು.
- ಜೆಎಂಎಂನ ಮಹುವಾ ಮಾಜಿ ಸಿಪಿಐನ ಸಂತೋಷ್ ಕುಮಾರ್, ಟಿಎಂಸಿಯ ಕೀರ್ತಿ ಆಜಾದ್ ಕೂಡ ಸರ್ಕಾರದ ನಡೆ ವಿರುದ್ಧ ಆಕ್ರೋಶ ಹೊರಹಾಕಿದರು.
- ಈ ವಿಚಾರ ಕುರಿತು ಕಾನೂನು ಸಚಿವ ಅರ್ಜುನ್ ಮೇಘವಾಲ್ ಅವರು ಸ್ಪಷ್ಟನೆ ನೀಡಬೇಕು ಎಂದು ವಿರೋಧ ಪಕ್ಷಗಳ ಸದಸ್ಯರು ಪಟ್ಟು ಹಿಡಿದರು.

Dr. Rajkumar IAS/KAS Academy

- ಐತಿಹಾಸಿಕ ಕ್ರಮ-ಬಿಜೆಪಿ ಮಹಿಳೆಯರಿಗೆ ಶಾಸನ ಸಭೆಗಳಲ್ಲಿ ಶೇ 33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆ ಮಂಡಿಸಿರುವ ಕೇಂದ್ರ ಸರ್ಕಾರದ ಕ್ರಮವನ್ನು ಸಮರ್ಥನೆ ಮಾಡಿಕೊಂಡ ಬಿಜೆಪಿ ಸದಸ್ಯರು, ಇದೊಂದು ಐತಿಹಾಸಿಕ ನಿರ್ಧಾರ ಎಂದು ಹೇಳಿದರು.

## ❖ ಅಧಿಸೂಚನೆ ಅಗತ್ಯ ಇತ್ತು

**ಸಂದರ್ಭ: ಸಾವಿರ ಜನಸಂಖ್ಯೆಯಿರುವ ಮಲೆನಾಡಿನ ಹಳ್ಳಿಯೊಂದರಲ್ಲಿ ಐದು ಪುರಾತನ ಕೆರೆಗಳಿವೆ. ಅಭಿವೃದ್ಧಿಪಡಿಸಿದಲ್ಲಿ ಊರಿನ ನೀರಿನ ಸಮಸ್ಯೆ ಶಾಶ್ವತವಾಗಿ ಪರಿಹಾರವಾಗುತ್ತದೆ. ಇದನ್ನು ಮಾಡುವ ಬದಲಾಗಿ, ಗ್ರಾಮ ಪಂಚಾಯಿತಿ ಆಡಳಿತ ಕೊಳವೆ ಬಾವಿಗಳನ್ನು ಹೊರಸಿತು ನೀರಿನ ತೊಟ್ಟಿಗಳನ್ನು ನಿರ್ಮಿಸಿತು. ಕೆಲವರಿಗೆ ನೀರು ಸಿಕ್ಕಿತು. ಹಲವರಿಗೆ ಸಿಗಲಿಲ್ಲ.**

- 2019ರ ಆಗುತ್ತ 15ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, 'ರಾಷ್ಟ್ರೀಯ ಜಲ ಜೀವನ್ ಮಿಷನ್ ಯೋಜನೆಗೆ ಚಾಲನೆ ನೀಡಿದರು. ಪ್ರತಿ ಮನೆಗೂ ಕೊಳಾಯಿ ನೀರು ನೀಡುವುದು ಯೋಜನೆಯ ಉದ್ದೇಶ.
- 2024ರ ಹೊತ್ತಿಗೆ ಭಾರತದ ಗ್ರಾಮೀಣ ಪ್ರದೇಶಗಳ ಪ್ರತಿ ವ್ಯಕ್ತಿಗೆ ದಿನಕ್ಕೆ 55 ಲೀಟರ್ ಶುದ್ಧ ನೀರು ಒದಗಿಸುವ ಮಹತ್ವಾಕಾಂಕ್ಷಿ ಯೋಜನೆ ಅದಾಗಿತ್ತು ಆಯೋಜನೆಯ ಮೂಲ ಅಂದಾಜು ವೆಚ್ಚ ₹3.6 ಲಕ್ಷ ಕೋಟಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮವನ್ನು ಪುನರ್ ರಚಿಸಿ ಆರಂಭಿಸಿದ ಈ ಯೋಜನೆ, ಜಗತ್ತಿನ ಅತಿದೊಡ್ಡ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮ ಎಂಬ ಹೆಗ್ಗಳಿಕೆ ಹೊಂದಿದೆ. ಆದರೆ, 2024ರಲ್ಲಿ ಶೇ 100ರಷ್ಟು ಗುರಿ ಸಾಧನೆ ಆಗದ ಕಾರಣ 2028ರವರೆಗೆ ಯೋಜನೆ ಮುಂದುವರಿಯಲಿದೆ. ಅಂದಾಜು ವೆಚ್ಚ ₹8.29 ಲಕ್ಷ ಕೋಟಿಗೇರಿದೆ.
- 2019ರಲ್ಲಿ ದೇಶದ 3.23 ಕೋಟಿ ( 17) ಗ್ರಾಮೀಣ ಕುಟುಂಬಗಳಿಗೆ ಮಾತ್ರ ನಲ್ಲಿ ನೀರಿನ ಸಂಪರ್ಕವಿತ್ತು 2025ರ ಫೆಬ್ರುವರಿ ವೇಳೆಗೆ 15.44 ಕೋಟಿ (ಶೇ 79.74) ಗ್ರಾಮೀಣ ಕುಟುಂಬಗಳಿಗೆ ನಲ್ಲಿ ಸಂಪರ್ತ ನೀಡಲಾಗಿದೆಯೆಂದು ಹೇಳಲಾಗುತ್ತಿದೆ. ವಾಸ್ತವ ಭಿನ್ನವಾಗಿದೆ ನೆಲದಾಳದಲ್ಲಿ ಟ್ಯೆಪಿದೆ, ಮನೆಯ ಮುಂದೆ ಮೀಟರ್ ಅಳವಡಿಸಿದ ನಲ್ಲಿಯೂ ಇದೆ ಆದರೆ ನೀರಿಲ್ಲ..
- ಕರ್ನಾಟಕದಲ್ಲಿ 'ಒಲ ಜೀವನ್ ಮಿಷನ್ ಯೋಜನೆಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ಸಂಘರ್ಷದ ವಿಷಯವಾಗಿ ಮಾರ್ಪಟ್ಟಿದೆ ಕೇಂದ್ರದ ಪಾಲಿನ ಅನುದಾನ ಬಿಡುಗಡೆ, ಯೋಜನೆಗಾಗಿ ರಾಜ್ಯ ಸರ್ಕಾರ ಈಗಾಗಲೇ ಖರ್ಚು ಮಾಡಿದ ಹಣಕಾಸಿನ ಅಂಕಿ ಅಂಶಗಳು ಏನೇ ಇರಲಿ. ಯೋಜನೆಯು ವೈಫಲ್ಯದತ್ತ ಸಾಗುತ್ತಿರುವುದು ನಿಚ್ಚಳವಾಗುತ್ತಿದೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಸಿಎಜಿ) ಇತ್ತೀಚಿನ ವರದಿಯು ರಾಜ್ಯದಲ್ಲಿ ಜಲ ಜೀವನ್ ಮಿಷನ್ ಅನುಷ್ಠಾನದಲ್ಲಿನ ಲೋಪಗಳನ್ನು ಎತ್ತಿ ಹಿಡಿದಿದೆ ತನ್ನ ಪಾಲಿನ ₹24.819 ಕೋಟಿ ಅನುದಾನದಲ್ಲಿ ರಾಜ್ಯ ಬಳಸಿರುವುದು ಶೇ 45ರಮ್ಮ ಅನುದಾನದ ಅಸಮರ್ಪಕ ಬಳಕೆ, ಪ್ರಮಾಣ ಪತ್ರ ನೀಡುವಲ್ಲಿನ ವಿಳಂಬ ಮತ್ತು ಆಮೆಗತಿಯ ಅನುಷ್ಠಾನದಿಂದ ಸಂಪೂರ್ಣ ಅನುದಾನ ಬಿಡುಗಡೆ ಆಗಿಲ್ಲ ರಾಜ್ಯದ ಶೇ 34ರಷ್ಟು ಕುಟುಂಬಗಳು ನಲ್ಲಿ ಸಂಪರ್ಕದಿಂದ ವಂಚಿತವಾಗಿವೆ.
- ಸಿಎಜಿ ವರದಿಯ ಪ್ರಕಾರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನೆರವಿನಿಂದ ಸಂಗ್ರಹಿಸಿದ ನೀರಿನ ಮಾದರಿ ಪರೀಕ್ಷೆಯಲ್ಲಿ ಬೆರಳೆಣಿಕೆಯನ್ನು ಗ್ರಾಮಗಳು ಮಾತ್ರ ನಿಗದಿತ ಗುಣಮಟ್ಟದ ನೀರಿನ ಸಂಪರ್ಕ ಹೊಂದಿವೆ, ಆರ್ಸೆನಿಕ್ ಮತ್ತು ಇತರ ಭಾರಲೋಹಗಳ ಮಾಲಿನ್ಯ ಪರೀಕ್ಷೆ ನಡೆಸಲು ಪ್ರಯೋಗಾಲಯದಂತಹ ಮೂಲಸೌಕರ್ಯವೇ ಇಲ್ಲದಿರುವುದು ಕಳವಳಕಾರಿ ಅಂತರ್ಜಲ ಮೂಲಗಳ ಅತಿಯಾದ ಅವಲಂಬನೆಯು ದೀರ್ಘಾವಧಿ ಸಮಸ್ಯೆಗಳಿಗೆ ಕಾರಣವಾಗಬಹುದು ಎಂದು ವರದಿ ಎಚ್ಚರಿಸಿದೆ.

- ಕೇಂದ್ರ ಅನುದಾನ ಬಿಡುಗಡೆ ಮಾಡುತ್ತಿಲ್ಲವೆಂದು ರಾಜ್ಯ ಸರ್ಕಾರ ಆರೋಪಿಸುತ್ತಿದ್ದರೆ, ಸಿಎಜಿ ವರದಿ ರಾಜ್ಯ ಸರ್ಕಾರದ ದೋಷಗಳತ್ತ ಬೊಟ್ಟು ಮಾಡಿದೆ. ರಾಷ್ಟ್ರೀಯ ಮಟ್ಟದಲ್ಲೂ 2024-25ನೇ ಸಾಲಿನಲ್ಲಿ 170 ಸಾವಿರ ಕೋಟಿ ಅನುದಾನದಲ್ಲಿ ಬರೀ ಶೇ 30.79ರಷ್ಟು ಮಾತ್ರ ಬಳಕೆಯಾಗಿದೆ. 2019-20ರ ಮೂಲ ಯೋಜನೆಯ ಪ್ರಕಾರ, 19.3 ಕೋಟಿ ಗ್ರಾಮೀಣ ಮನೆಗಳು ಯೋಜನೆಯ ಫಲಾನುಭವಿಗಳು ಎಂದು ಗುರ್ತಿಸಲಾಗಿತ್ತು. ಪರಿಷ್ಕರಣೆಯ ನಂತರದಲ್ಲಿ ಮತ್ತೆ 4 ಕೋಟಿ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕದ ಅಗತ್ಯವಿದೆ ಎಂದು ಹೇಳಲಾಯಿತು. ಯೋಜನೆಯ ಅಧಿಕೃತ ದತ್ತಾಂಶ ಕಾಲಕಾಲಕ್ಕೆ ಪರಿಷ್ಕರಣೆಯಾಗದ ಕಾರಣಕ್ಕೆ ನಿಖರ ಮಾಹಿತಿ ಸರ್ಕಾರದಲ್ಲೂ ಲಭ್ಯವಿಲ್ಲ.
- ಯೋಜನೆಯಲ್ಲಿ ಕಂಡುಬರುತ್ತಿರುವುದು ಬರೀ ಹಣ ಬಿಡುಗಡೆಯ ವಿವಾದ ಅಲ್ಲ. ರಾಜಸ್ಥಾನ ಮತ್ತು ಉತ್ತರ ಪ್ರದೇಶಗಳಲ್ಲಿ ಟೆಂಡರ್ ದರ ಮತ್ತು ಅನುಮೋದಿತ ದರದ ನಡುವೆ ಶೇ 20ರಿಂದ 30ರಷ್ಟು ವ್ಯತ್ಯಾಸ ಕಂಡುಬಂದಿದೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ತಾಂತ್ರಿಕ ಸಿಬ್ಬಂದಿ ಕೊರತೆ ತೀವ್ರವಾಗಿದೆ ಗುತ್ತಿಗೆದಾರರ ಕಾಮಗಾರಿ ಪರಿಶೀಲನೆ ಕಷ್ಟಕರವಾಗಿದೆ.
- ಸ್ವಾತಂತ್ರೋತ್ತರ ಭಾರತವು ಜಗತ್ತಿನ ಇತರ ದೇಶಗಳ ಮೇಲಿನ ಅವಲಂಬನೆಯನ್ನು ತಪ್ಪಿಸಿಕೊಳ್ಳುವ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿತು. ಅಣೆಕಟ್ಟುಗಳು, ಕೈಗಾರಿಕೆಗಳು ಮತ್ತವಕ್ಕೆ ಬೇಕಾಗುವ ಮೂಲಸೌಕರ್ಯಗಳ ಕಾರಣಕ್ಕೆ ನಗರೀಕರಣಕ್ಕೆ ಹೆಚ್ಚು ಒತ್ತು ನೀಡುವುದು ನಿರಂತರವಾಗಿ ನಡೆಯಿತು. ಗ್ರಾಮೀಣ ಭಾರತಕ್ಕೂ ಮತ್ತು ನಗರವಣೀತ ಇಂಡಿಯಾಕ್ಕೂ ಅಂತರ ಹೆಚ್ಚುತ್ತಲೇ ಹೋಯಿತು.
- ಮಲೆನಾಡಿನ ಜಲತಜ್ಞರ ಪ್ರಕಾರ, ಕೇಂದ್ರೀಕೃತ ವ್ಯವಸ್ಥೆಯಿಂದ ಮನೆ ಮನೆಗೆ ನಲ್ಲಿ ಸಂಪರ್ಕ ನೀಡುವುದು ಯಾವ ರೀತಿಯಿಂದಲೂ ಸಾಧುವಲ್ಲ ರಾಜರ ಕಾಲದಲ್ಲಿ ನಿರ್ಮಿಸಿದ ಕೆರೆಗಳನ್ನು ಪುನಶ್ಚೇತನಗೊಳಿಸಿದರೆ, ಅಂತರ್ಜಲ ತಾನಾಗಿಯೇ ಹೆಚ್ಚುತ್ತದೆ. ಕೊಳವೆಬಾವಿಗಳಿಗಿಂತ ತೆರೆದ ಬಾವಿಗಳಿಂದ ನೀರು ಪಡೆಯುವುದು ಹೆಚ್ಚು ಸೂಕ್ತ ಸರ್ಕಾರದ ನೀರು ಸರಬರಾಜು ಯೋಜನೆ ಜಾರಿಯಿಂದಾಗಿ ಮಲೆನಾಡಿನ ಸಾಕು ಕೆರೆಗಳು ನಡೆಸಿವೆ. ಸಾರ್ವಜನಿಕ ಬಾವಿಗಳು ಹೇಳ ಹೆಸರಿಲ್ಲದಂತೆ ಮಾಯವಾಗಿವೆ ಕೆರೆ ಒತ್ತುವರಿ ನಿರಂತರವಾಗಿದೆ.
- ತುಮಕೂರು, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಎತ್ತಿನಹೊಳೆ ಯೋಜನೆಯ ಮೂಲ ಯೋಜನಾ ವೆಚ್ಚ ₹12.912 ಕೋಟಿ ಮರು ಪರಿಷ್ಕರಣೆ ಮಾಡಿದ ಯೋಜನಾ ವೆಚ್ಚ ₹23.251 ಕೋಟಿ ನೇತ್ರಾವತಿ ಉಪನದಿಗಳಿಂದ ಹೆಚ್ಚುವರಿಯಾಗಿ 24 ಟಿಎಂಸಿ ಅಡಿ ನೀರು ಲಭ್ಯವಾಗುತ್ತದೆ ಎಂದು ಮೊದಲು ಅಂದಾಜಿಸಲಾಗಿತ್ತು ಹಾಲಿ ಈ ಪ್ರಮಾಣ ಬರೀ 4 ಟಿಎಂಸಿ ಅಡಿ ಎಂದು ಹೇಳಲಾಗಿದೆ ಲಭ್ಯವಾಗುವ ನೀರಿನ ಪ್ರಮಾಣ ಆರು ಪಟ್ಟು ಕಡಿಮೆ ಮತ್ತು ಯೋಜನಾ ವೆಚ್ಚ ದ್ವಿಗುಣವಾಗಿ ಒಟ್ಟಾರೆ ಇಡೀ ಯೋಜನೆಯೇ ಸಂಪೂರ್ಣ ವ್ಯರ್ಥವಾಗಲಿದೆ ಎಂದು ಆ ಭಾಗದ ಪರಿಸರ ಹೋರಾಟಗಾರ ದಿನೇಶ್ ಹೊಳ್ಳ ಹೇಳುತ್ತಾರೆ.
- ವ್ಯರ್ಥ ಯೋಜನೆಗೆ ಇದುವರೆಗೂ ಖರ್ಚು ಮಾಡಲಾದ ಮೊತ್ತ ₹17 147 ಕೋಟಿ ಇದಕ್ಕೂ ಕಡಿಮೆ ಖರ್ಚಿನಲ್ಲಿ ನಾಲ್ಕು ಜಿಲ್ಲೆಗಳ ಕೆರೆಗಳನ್ನು ಪುನಶ್ಚೇತನಗೊಳಿಸಿದ್ದಾರೆ. ಅದು ಶಾಶ್ವತ ಪರಿಹಾರವಾಗುತ್ತಿತ್ತು ಎಂದೂ ಅವರು ಹೇಳುತ್ತಾರೆ.
- ನಲ್ಲಿ ನೀರು ಬ್ರಹ್ಮರಾಕ್ಷಸ ಇದೆ ಹಾಗೆ ನೀರಿನ ಎಲ್ಲನೈಸರ್ಗಿಕ ಮೂಲಗಳನ್ನೂ ನಾಶ ಮಾಡುವ ಪ್ರವೃತ್ತಿಯೆಯಿದು ಎಂದು ಕಾದಂಬರಿಕಾರ ನಾ ಡಿಸೋಜ ಹೇಳುತ್ತಿದ್ದರು ತೆರೆದ ಬಾವಿಗಳು ಕೆರೆ-ಕುಂಟೆಗಳು ಸದಾ ಹರಿಯುವ ನದಿಗಳು ನಮಗೆ ನೀರಿನ ಮೂಲಗಳಾಗಬೇಕು ನದಿಗೆ ನಿರಂತರವಾಗಿ ನೀರು ಲಭ್ಯವಾಗುವ ಹಾಗೆ ಮಾಡುವ ಅರಣ್ಯ ಸಂಪತ್ತನ್ನು ಜೀವಿವಿಧ ನೆಲೆಗಳನ್ನು ರಕ್ಷಿಸಿಕೊಳ್ಳಬೇಕು ಎಂದವರು ಕಿವಿಮಾತು ಹೇಳುತ್ತಿದ್ದರು.
- ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳ ನೀರಿನ ಯೋಜನೆಗಳ ಪೈಪುಗಳು ಮತ್ತು ಜಲ ಜೀವನ್ ಮಿಷನ್ ಯೋಜನೆಯ ನೀರೇ ಹರಿಯದ ಪೈಪುಗಳು ಸೇರಿದಂತೆ ಅಗೆದಲ್ಲೆಲ್ಲಾ ಪ್ಲಾಸ್ಟಿಕ್ ಪೈಪುಗಳೇ ಸಿಗುತ್ತವೆ ಎನ್ನುತ್ತಾರೆ ಶಿವಾನಂದ ಕಳವೆ. ಸರ್ಕಾರದ ಸಹಾಯವಿಲ್ಲದೆ ಕೆರೆಗಳ ಪುನತನ ಆಂದೋಲನದಲ್ಲಿ ತೊಡಗಿಕೊಂಡಿರುವ ಅವರು, ಸ್ಥಳೀಯ ಜಲಮೂಲಗಳನ್ನು ಪುನತನಗೊಳಿಸಿ, ಅದರಿಂದ ಲಭ್ಯವಾಗುವ ನೀರನ್ನು ಸ್ಥಳೀಯರಿಗೆ ಹಂಚುವುದೇ ಸರಿಯಾದ ಮಾರ್ಗ' ಎನ್ನುತ್ತಾರೆ.

Dr Rajkumar IAS/KAS Academy

- 'ಪ್ರತಿ ಮನೆಗೂ ಕೊಳಾಯಿ ನೀರು ಎಂಬುದು ಬರೀ ಘೋಷಣೆಯಾಗಿಯೇ ಉಳಿದಿದೆ. ನಾನು ವಾಸಿಸುವ ಹಳ್ಳಿ, ಬಿಕಾಂಪುರದಲ್ಲಿ ನೀರು ಶೇಖರಣೆಗೆ ದೊಡ್ಡ ಟ್ಯಾಂಕ್‌ಗಳನ್ನು ನಿರ್ಮಿಸಲಾಗಿದೆ. ಮನೆ ಮನೆಗೂ ನಲ್ಲಿ ಸಂಪರ್ಕ ನೀಡಲಾಗಿದೆ. ನೀರು ಮಾತ್ರ ಬಂದಿಲ್ಲ. ಇದು ಬರೀ ನನ್ನ ಹಳ್ಳಿಯ ಕಥೆಯಲ್ಲ ಇಡೀ ದೇಶದ ಕಥೆ' ಎಂದು ಜಲ ಜೀವನ್ ಮಿಷನ್ ಯೋಜನೆಯ ಕುರಿತು ಅಭಿಪ್ರಾಯ ಹಂಚಿಕೊಂಡವರು 'ಭಾರತದ ಜಲಪುರುಷ' ಎಂದು ಪ್ರಸಿದ್ಧರಾದ ರಾಜೇಂದ್ರ ಸಿಂಗ್.
- ಸಾಗರ ನಗರಕ್ಕೆ ಕುಡಿಯುವ ನೀರಿನ ಮೂಲ ಶರಾವತಿ ನದಿ. ಈ ನಗರಕ್ಕೆ 30 ಕಿ.ಮೀ. ದೂರದಿಂದ ಗುರುತ್ವಾಕರ್ಷಣೆ ಶಕ್ತಿಗೆ ವಿರುದ್ಧವಾಗಿ ನೀರನ್ನು ಎತ್ತಿ ತರಲಾಗುತ್ತಿದೆ. 24 ಗಂಟೆಯೂ ಜನರಿಗೆ ನೀರು ದೊರೆಯಬೇಕು ಎಂಬುದು ಇಲ್ಲಿನ ಜನಪ್ರತಿನಿಧಿಗಳ ಬಯಕೆ ಇದರಿಂದ ಆಗುತ್ತಿರುವ ಅನಾಹುತವನ್ನು ಯಾರೂ ಗಂಭೀರವಾಗಿ ಪರಿಗಣಿಸಿದಂತಿಲ್ಲ ಶೇ 50ರಷ್ಟು ಸಂಸ್ಕರಿಸಿದ ಶುದ್ಧ ನೀರು ನಿರ್ವಹಣೆ ಕೊರತೆಯ ಕಾರಣಕ್ಕೆ ಚರಂಡಿ ಸೇರುತ್ತಿದೆ 3,000 ಮಿ.ಮೀ.ಗಿಂತ ಹೆಚ್ಚು ಮಳೆ ಬೀಳುವ ಸಿದ್ದಾಪುರ ತಾಲ್ಲೂಕಿಗೂ ಶರಾವತಿ ನೀರನ್ನೇ ಒದಗಿಸುವ ಯೋಜನೆ ಭರದಿಂದ ಸಾಗಿದೆ.

## ಅದಾನಿ ಏಷ್ಯಾದ ಶ್ರೀಮಂತ ವ್ಯಕ್ತಿ

**ಸಂದರ್ಭ: ಅದಾನಿ ಸಮೂಹದ ಮುಖ್ಯಸ್ಥ ಗೌತಮ್ ಅದಾನಿ, ಏಷ್ಯಾದ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿ ಮತ್ತೆ ಹೊರಹೊಮ್ಮಿದ್ದಾರೆ.**

- ರಿಲಯನ್ಸ್ ಇಂಡಸ್ಟ್ರೀಸ್ ಸಮೂಹದ ಮುಖ್ಯಸ್ಥ ಮುಕೇಶ್ ಅಂಬಾನಿ ಅವರು ಇದುವರೆಗೆ ಏಷ್ಯಾದ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿದ್ದರು. ಇದೀಗ ಅಂಬಾನಿಯನ್ನು ಹಿಂದಿಕ್ಕಿ ಅದಾನಿ, ಭಾರತ ಮತ್ತು ಏಷ್ಯಾದ ಶ್ರೀಮಂತ ವ್ಯಕ್ತಿಯಾಗಿದ್ದಾರೆ. ಅದಾನಿ ಸಮೂಹದ ಷೇರು ಮೌಲ್ಯದಲ್ಲಿ ಏರಿಕೆ ಕಂಡುಬಂದ ಕಾರಣ ಅದಾನಿ ಅವರ ನಿವ್ವಳ ಆಸ್ತಿ ಮೌಲ್ಯವು ಗಣನೀಯವಾಗಿ ಹೆಚ್ಚಾಗಿದೆ.
- ಗೌತಮ್ ಅದಾನಿ ಅವರ ನಿವ್ವಳ ಸಂಪತ್ತಿನ ಮೌಲ್ಯ ₹8.59 ಲಕ್ಷ ಕೋಟಿಗೆ (92.6 ಬಿಲಿಯನ್ ಡಾಲರ್) ಏರಿಕೆ ಆಗಿದೆ. ಅಂಬಾನಿ ಸಂಪತ್ತು 28.42 ಲಕ್ಷ ಕೋಟಿ (90.8 ಬಿಲಿಯನ್ ಡಾಲರ್) ಇದೆ.
- ಬ್ಲೂಮ್‌ಬರ್ಗ್ ಶುಕ್ರವಾರ ಪ್ರಕಟಿಸಿ ರುವ ಜಾಗತಿಕ ಸಿರಿವಂತರ ಪಟ್ಟಿಯಲ್ಲಿ ಅದಾನಿ 19ನೇ ಸ್ಥಾನ ಪಡೆದಿದ್ದಾರೆ. ಜಗತ್ತಿನ 500 ಶ್ರೀಮಂತ ವ್ಯಕ್ತಿಗಳ ಹೆಸರನ್ನು ದಿನನಿತ್ಯ ಬ್ಲೂಮ್‌ಬರ್ಗ್ ನವೀಕರಿಸುತ್ತದೆ.
- ಅದಾನಿ ಅವರ ಸಂಪತ್ತಿನ ಬಹುಪಾಲು ಆದಾಯವು ಅವರ ಸಮೂಹದ ಪ್ರಮುಖ 10 ಕಂಪನಿಗಳ ಷೇರುಗಳಿಂದ ಬರುತ್ತದೆ ಇತ್ತೀಚಿನ ದಿನಗಳಲ್ಲಿ ಅದಾನಿ ಸಮೂಹದ ಷೇರುಗಳ ಬೆಲೆ ಏರಿಕೆಯಾಗಿದ್ದು. ಸಮೂಹದ ಮಾರುಕಟ್ಟೆ ಮೌಲ್ಯಕ್ಕೆ ಶತಕೋಟಿ ಡಾಲಗರ್‌ಳನ್ನು ಸೇರಿಸಿದೆ.
- ಆದರೆ, ರಿಲಯನ್ಸ್ ಇಂಡಸ್ಟ್ರೀಸ್ ಇಂಧನ ದೂರಸಂಪರ್ಕ ಮತ್ತು ರಿಟೇಲ್ ವಹಿವಾಟಿನಲ್ಲಿ ಲಾಭದ ಪ್ರಮಾಣವು ಇಳಿಕೆಯಾಗಿದೆ ಇದು ಅಂಬಾನಿ ಸಂಪತ್ತು ಇಳಿಕೆಗೆ ಕಾರಣವಾಗಿದೆ ಅದರಿಂದ ಶತಕೋಟ್ಯಧಿಪತಿಗಳ(ಬಿಲಿಯನೇರ್‌ಗಳು) ಶ್ರೇಯಾಂಕದಲ್ಲಿ ಬದಲಾವಣೆ ಆಗಿದೆ.
- ಟೆಸ್ಲಾ ಕಂಪನಿಯ ಸಿಇಒ ಇಲಾನ್ ಮಸ್ಕ್ ಜಗತ್ತಿನ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿದ್ದಾರೆ ಇವರ ಸಂಪತ್ತಿನ ನಿವ್ವಳ ಮೌಲ್ಯ ₹60 ಲಕ್ಷ ಕೋಟಿ (656 ಬಿಲಿಯನ್ ಡಾಲರ್) ಆಗಿದೆ.

## ❖ 721 ಟನ್ ಚಿನ್ನ, 7,334 ಟನ್ ಬೆಳ್ಳಿ ಆಮದು: ವಾಣಿಜ್ಯ ಸಚಿವಾಲಯ: ₹6.68 ಲಕ್ಷ ಕೋಟಿ ಚಿನ್ನ ಆಮದು

**ಸಂದರ್ಭ: 2025-26ರ ಆರ್ಥಿಕ ವರ್ಷದಲ್ಲಿ ₹6.68 ಲಕ್ಷ ಕೋಟಿ ಮೌಲ್ಯದ ಚಿನ್ನ ದೇಶಕ್ಕೆ ಆಮದಾಗಿದೆ. ಇದು ಸಾರ್ವಕಾಲಿಕ ಗರಿಷ್ಠ ಮಟ್ಟವಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯವು ತಿಳಿಸಿದೆ.**

- 2024-25ರಲ್ಲಿ ₹5.38 ಲಕ್ಷ ಕೋಟಿ ಮೌಲ್ಯದ ಚಿನ್ನ ದೇಶಕ್ಕೆ ಆಮದಾಗಿತ್ತು. ಇದಕ್ಕೆ ಹೋಲಿಸಿದರೆ ಚಿನ್ನದ ಆಮದು ಪ್ರಮಾಣ ಶೇ 24ರಷ್ಟು ಹೆಚ್ಚಳವಾಗಿದೆ. ಚಿನ್ನದ ಬೆಲೆಯಲ್ಲಿ ಹೆಚ್ಚಳವಾಗಿದ್ದರಿಂದ ಆಮದು ಮೌಲ್ಯ ಏರಿಕೆಯಾಗಿದೆ ಎಂದು ತಿಳಿಸಿದೆ.

- 2024-25ರಲ್ಲಿ 757.09 ಟನ್‌ನಷ್ಟು ಚಿನ್ನ ಆಮದಾಗಿತ್ತು. ಕಳೆದ ಆರ್ಥಿಕ ವರ್ಷದಲ್ಲಿ 721.03 ಟನ್ ಆಮದಾಗಿದ್ದು, ಶೇ 4.76ರಷ್ಟು ಆಮದು ಪ್ರಮಾಣವು ಇಳಿಕೆ ಆಗಿದೆ.
- ಕಳೆದ ಆರ್ಥಿಕ ವರ್ಷದಲ್ಲಿ ಬೆಳ್ಳಿ, ಆಮದು ಶೇ 150ರಷ್ಟು ಹೆಚ್ಚಳವಾಗಿದ್ದು. ₹1.11 ಲಕ್ಷ ಕೋಟಿ ಮೌಲ್ಯದಷ್ಟು ಆಮದಾಗಿತ್ತು ಗಾತ್ರದ ಲೆಕ್ಕದಲ್ಲಿ 7,334.96 ಟನ್‌ನಮ್ಮ ಆಮದಾಗಿದ್ದು ಶೇ 42ರಷ್ಟು ಏರಿಕೆಯಾಗಿದೆ.
- ಈ ಲೋಹಗಳ ಆಮದು ಹೆಚ್ಚಳದಿಂದ ದೇಶದ ವ್ಯಾಪಾರ ಕೊರತೆ ₹30.93 ಲಕ್ಷ ಕೋಟಿಗೆ ಏರಿಕೆಯಾಗಿದೆ. ರಫ್ತು ಮೌಲ್ಯಕ್ಕಿಂತ ಆಮದು ಮೌಲ್ಯ ಹೆಚ್ಚಿದ್ದರೆ ಅದನ್ನು ವ್ಯಾಪಾರ ಕೊರತೆ ಎಂದು ಕರೆಯಲಾಗುತ್ತದೆ.
- ದೇಶದ ಒಟ್ಟು ಬೇಡಿಕೆಯ ಪೈಕಿ ಶೇ 40ರಷ್ಟು ಚಿನ್ನ ಸ್ವಿಟ್ಸರ್ಲೆಂಡ್ ನಿಂದ ಆಮದಾಗುತ್ತದೆ. ಯುಎಇನಿಂದ ಶೇ 16 ಮತ್ತು ದಕ್ಷಿಣ ಆಫ್ರಿಕಾದಿಂದ ಶೇ 10ರಷ್ಟು ಚಿನ್ನ ಆಮದಾಗುತ್ತದೆ ದೇಶದ ಒಟ್ಟು ಆಮದಿನಲ್ಲಿ ಅಮೂಲ್ಯ ಲೋಹಗಳ ಆಮದು ಪ್ರಮಾಣ ಶೇ 5ಕ್ಕಿಂತ ಹೆಚ್ಚು ಪಾಲನ್ನು ಹೊಂದಿದೆ.
- ಕಳೆದ ಆರ್ಥಿಕ ವರ್ಷದಲ್ಲಿ ಸ್ವಿಟ್ಸರ್ಲೆಂಡ್‌ನಿಂದ ₹2.25 ಲಕ್ಷ ಕೋಟಿ ಮೌಲ್ಯದ ಚಿನ್ನ ಆಮದಾಗಿದ್ದು 2024-25ಕ್ಕೆ ಹೋಲಿಸಿದರೆ ಶೇ 11ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.
- **ಚೀನಾ ಬಳಿಕ ಭಾರತವು ಜಗತ್ತಿನ ಎರಡನೇ ಅತಿದೊಡ್ಡ, ಚಿನ್ನದ ಗ್ರಾಹಕ ರಾಷ್ಟ್ರವಾಗಿದೆ.**

## ❖ ಜಾಗತಿಕ ಸುಸ್ಥಿರ ಇಂಧನ ಸಮ್ಮೇಳನ

**ಸಂದರ್ಭ: 'ಸುಸ್ಥಿರ ಇಂಧನ, ಭಾರತದ ಕಾರ್ಯಸೂಚಿ 2047-ಇಂಧನ ಭದ್ರತೆಗಾಗಿ ಕಾನೂನು, ನೀತಿ ಹಾಗೂ ಆವಿಷ್ಕಾರಗಳ ಹೊಸ ಚಿಂತನೆ' ಕುರಿತ 2 ದಿನಗಳ ಅಂತರರಾಷ್ಟ್ರೀಯ ಸಮ್ಮೇಳನ ಏಪ್ರಿಲ್ 18, 19 ರಂದು ಬೆಂಗಳೂರಿನ ಶಾಂಗ್ರಿ-ಲಾ ಹೋಟೆಲ್‌ನಲ್ಲಿ ನಡೆಯಲಿದೆ.**

- ಕಾಮನ್‌ವೆಲ್ತ್ ಲೀಗಲ್ ಎಜುಕೇಷನ್ ಅಸೋಸಿಯೇಷನ್ ಮತ್ತು ಇಂಧನ ಇಲಾಖೆ ಜಂಟಿಯಾಗಿ ಆಯೋಜಿಸುತ್ತಿರುವ ಈ ಸಮ್ಮೇಳನ ವನ್ನು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ ಇದರಲ್ಲಿ ದೇಶ-ವಿದೇಶಗಳ ಪ್ರಮುಖ ನ್ಯಾಯಶಾಸ್ತ್ರಜ್ಞರು ನೀತಿ ನಿರೂಪಕರು, ಉದ್ಯಮ ಮತ್ತು ಶಿಕ್ಷಣ ತಜ್ಞರು ಭಾಗವಹಿಸಲಿದ್ದಾರೆ.

## ❖ ಕಿಶೋರಿಯರಿಗೆ 'ಎಚ್‌ಪಿವಿ' ರಕ್ಷೆ

**ಸಂದರ್ಭ: ಗರ್ಭಕಂಠದ ಕ್ಯಾನ್ಸರ್ ತಡೆಗೆ ಸಹಕಾರಿಯಾದ 'ಹ್ಯೂಮನ್ ಪ್ಯಾಪಿಲೋಮ ವೈರಸ್ (ಎಚ್ ಪಿವಿ) ಲಸಿಕೆ ವಿತರಣಾ ಅಭಿಯಾನಕ್ಕೆ ರಾಜ್ಯದಲ್ಲಿ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, 14ರಿಂದ 15 ವರ್ಷದೊಳಗಿನ ಲಕ್ಷಕ್ಕೂ ಹೆಚ್ಚು ಕಿಶೋರಿಯರು ಈಗಾಗಲೇ ಲಸಿಕೆ ಪಡೆದಿದ್ದಾರೆ.**

- ಕೇಂದ್ರ ಸರ್ಕಾರವು ದೇಶದಾದ್ಯಂತ ಹಮ್ಮಿಕೊಂಡಿದ್ದ ಲಸಿಕಾ ಅಭಿಯಾನಕ್ಕೆ ಫೆಬ್ರುವರಿ 28ರಂದು ಚಾಲನೆ ಸಿಕ್ಕಿದೆ. ಈ ಅಭಿಯಾನದಡಿ ಕೇಂದ್ರ ಸರ್ಕಾರವು ರಾಜ್ಯಕ್ಕೆ 5.08 ಲಕ್ಷ ಡೋಸ್‌ಗಳನ್ನು ಸರಬರಾಜು ಮಾಡಿದೆ. ಇದನ್ನು ಜಿಲ್ಲಾವಾರು ಹಂಚಿಕೆ ಮಾಡಿ, ಸರ್ಕಾರಿ ಆರೋಗ್ಯ ಕೇಂದ್ರಗಳಿಗೆ ಪೂರೈಕೆ ಮಾಡಲಾಗಿದೆ.
- ಮಾರ್ಚ್‌ನಿಂದ ಮೇವರೆಗೆ ಹಮ್ಮಿಕೊಂಡಿರುವ ಅಭಿಯಾನದಡಿ, ಎಲ್ಲ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ನೀಡಲಾಗುತ್ತಿದೆ. ಈವರೆಗೆ 14 ವರ್ಷದ 1.45 ಲಕ್ಷಕ್ಕೂ ಅಧಿಕ ಹೆಣ್ಣು ಮಕ್ಕಳಿಗೆ ಲಸಿಕೆ ಒದಗಿಸಲಾಗಿದೆ ರಾಜ್ಯದಲ್ಲಿ ಸುಮಾರು 6 ಲಕ್ಷ ಹೆಣ್ಣು ಮಕ್ಕಳು ಈ ಲಸಿಕೆಯ ಫಲಾನುಭವಿಗಳೆಂದು ಅಂದಾಜಿಸಲಾಗಿದೆ.
- ನಿಯಮಿತ ತಪಾಸಣೆ, ಆರಂಭಿಕ ಹಂತದಲ್ಲಿಯೇ ರೋಗ ಮತ್ತೆ ಜಾಗೃತಿ ಸೇರಿ ವಿವಿಧ ಕ್ರಮಗಳಿಂದ ಮಹಿಳೆಯರಲ್ಲಿ ಗರ್ಭಕಂಠದ ಕ್ಯಾನ್ಸರ್ ಪ್ರಕರಣಗಳ ಪ್ರಮಾಣ ಇಳಿಮುಖವಾಗುತ್ತಿದೆ. ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಪ್ರಕಾರ, ದೃಢ ಕ್ಯಾನ್ಸರ್ ಪ್ರಕರಣಗಳಲ್ಲಿ ಗರ್ಭಕಂಠದ ಕ್ಯಾನ್ಸರ್ ಪ್ರಮಾಣ ಶೇ 16ರಷ್ಟಿದೆ. ರಾಜ್ಯದಲ್ಲಿ ಕಳೆದ ವರ್ಷ 89,165 ಸಕ್ರಿಯ ಕ್ಯಾನ್ಸರ್ ಪ್ರಕರಣಗಳಿರುವ ಬಗ್ಗೆ, ಅಂದಾಜಿಸಲಾಗಿದೆ ಅವುಗಳಲ್ಲಿ 4.476 ಪ್ರಕರಣಗಳು ಗರ್ಭಕಂಠ ಕ್ಯಾನ್ಸರ್‌ಗೆ ಸಂಬಂಧಿಸಿದವು.

- ನಾನಾ ಕಾರಣ ಎಚ್‌ಪಿವಿಯ ವಿವಿಧ ತಳಿಗಳು ಗರ್ಭಕಂಠ ಕ್ಯಾನ್ಸರ್‌ಗೆ ಮುಖ್ಯ ಕಾರಣವಾಗಿವೆ ಸಣ್ಣ ವಯಸ್ಸಿನಲ್ಲಿಯೇ ವಿವಾಹ, ಅಶುಚಿತ್ವ, ಹೆಚ್ಚು ಬಾರಿ ಗರ್ಭ ಧರಿಸುವುದು ಗರ್ಭನಿರೋಧಕಗಳ ಬಳಕೆ, ಧೂಮಪಾನ, ಮದ್ಯಪಾನ, ಮಾದಕದ್ರವ್ಯಗಳ ವ್ಯಸನ, ಸ್ಟಿರಾಯ್ಡ್ ಔಷಧಗಳ ಬಳಕೆ, ಎಚ್‌ಐವಿಯಂತಹ ಕಾಯಿಲೆಗಳು ಈ ಕ್ಯಾನ್ಸರ್‌ಗೆ ಕಾರಣವಾಗುತ್ತಿದೆ ಮಹಿಳೆಯರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಈ ವಿಧದ ಕ್ಯಾನ್ಸರ್ ತಡೆಗೆ ಎಚ್‌ಪಿವಿ ಲಸಿಕೆ ಸಹಕಾರಿಯಾಗಿದ್ದು ಈ ಲಸಿಕೆಯು ಕ್ಯಾನ್ಸರ್ ಕೋಶಗಳ ವಿರುದ್ಧ ನಿರೋಧಕ ಶಕ್ತಿಯನ್ನು ವೃದ್ಧಿಸಲಿದೆ
- 'ಎಚ್‌ಪಿವಿ ಲಸಿಕೆಯಿಂದ ಗರ್ಭಕಂಠ ಕ್ಯಾನ್ಸರ್ ಅನ್ನು ಶೇ 95ರಷ್ಟು ತಡೆಯಲು ಸಾಧ್ಯ 9ರಿಂದ 15 ವರ್ಷದೊಳಗಿನವರಿಗೆ ಲಸಿಕೆಗೆ ಶಿಫಾರಸು ಮಾಡಲಾಗುತ್ತದೆ ಲಸಿಕೆ ಪಡೆದವರಲ್ಲಿ ಕೆಲವರಿಗೆ ಜ್ವರ ತಲೆನೋವು ಊತದಂತಹ ಸಾಮಾನ್ಯ ಅಡ್ಡಪರಿಣಾಮಗಳು ಮಾತ್ರ ಕಾಣಿಸಿಕೊಳ್ಳುತ್ತವ ಈ ಲಸಿಕೆ ಸುರಕ್ಷಿತವಾಗಿದೆ. ಖಾಸಗಿ ವ್ಯವಸ್ಥೆಯಡಿ ಈ ಲಸಿಕೆ ದುಬಾರಿಯಾಗಿದ್ದು ಒಂದು ಡೋಸ್‌ಗೆ ₹ 10 ಸಾವಿರದವರೆಗೂ ಬೆಲೆ ನಿಗದಿಪಡಿಸಲಾಗಿದೆ'.

## ರಾಜ್ಯ ಸರ್ಕಾರದಿಂದಲೂ ಲಸಿಕೆ ವಿತರಣೆ

- ಗರ್ಭಕಂಠ ಕ್ಯಾನ್ಸರ್ ತಡೆಗೆ 9ರಿಂದ 14 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಎರಡು ಡೋಸ್ ಎಚ್‌ಪಿವಿ ಲಸಿಕೆ ಒದಗಿಸುವ ಬಗ್ಗೆ, ಈ ಹಿಂದೆ ತಜ್ಞರ ಸಮಿತಿಯು ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿತ್ತು ಅದರ ಅನುಸಾರ ಗಣಿಬಾಧಿತ ಜಿಲ್ಲೆಗಳಲ್ಲಿ 14 ವರ್ಷದ ಹೆಣ್ಣುಮಕ್ಕಳಿಗೆ ಎಚ್‌ಪಿವಿ ಲಸಿಕೆ ವಿತರಿಸಲು ರಾಜ್ಯ ಸರ್ಕಾರ ಕಳೆದ ವರ್ಷ ಕ್ರಮ ಕೈಗೊಂಡಿತ್ತು.

--------------------------------------------ಶುಭವಂದನೆಗಳು--------------------------------------------